# ಸಹಕಾರಿ ಸಂಸ್ಥೆಗಳು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು









**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055

ದೂ : 080-23378375-80, ವೆಬ್ ತಾಣ : www.Souharda.coop

# ಸಹಕಾರಿ ಸಂಸ್ಥೆಗಳು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು

– ಡಾ. ಯಶವಂತ ಡೋಂಗ್ರೆ




# COOPERATIVES AND SUSTAINABLE DEVELOPMENT GOALS

- Dr. YASHAVANTHA DONGRE

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಬೆಂಗಳೂರು
2022

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

# ಸಹಕಾರಿ ಸಂಸ್ಥೆಗಳು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು

**ಪ್ರಕಾಶಕರು** : **ವ್ಯವಸ್ಥಾಪಕ ನಿರ್ದೇಶಕರು,**
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ,
ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055
ದೂರವಾಣಿ: 080–23378375–80
ಇ–ಮೇಲ್: souharda@souharda.coop
ವೆಬ್‌ಸೈಟ್: www.souharda.coop

**ಮುದ್ರಣ ವರ್ಷ** : ಸೆಪ್ಟೆಂಬರ್ 2022

**ಪುಟಗಳು** : 76

**ಪ್ರತಿಗಳು** : 500

**ಬೆಲೆ** : 60/–

**ವಿನ್ಯಾಸ** : **ಶಂಕರ್ ಎಸ್**

**ಮುದ್ರಕರು** :

# ಪರಿವಿಡಿ


| ವಿಷಯಗಳು | ಪುಟ ಸಂಖ್ಯೆ |
|---|---|
| **ಸುಸ್ಥಿರ ಅಭಿವೃದ್ಧಿ: ಪರಿಕಲ್ಪನೆ ಮತ್ತು ಗುರಿಗಳು** | 8–9 |
| ಎಸ್‌ಡಿಜಿ 1: ಬಡತನದ ನಿರ್ಮೂಲನೆ | 10–12 |
| ಎಸ್‌ಡಿಜಿ 2: ಹಸಿವಿನ ಅಂತ್ಯ, ಆಹಾರ ಭದ್ರತೆಯ ಸಾಧನೆ | 13–16 |
| ಎಸ್‌ಡಿಜಿ 3: ಆರೋಗ್ಯ ಮತ್ತು ಪುರೋಭಿವೃದ್ಧಿ | 17–20 |
| ಎಸ್‌ಡಿಜಿ 4: ಗುಣಮಟ್ಟದ ಶಿಕ್ಷಣ | 21–24 |
| ಎಸ್‌ಡಿಜಿ 5: ಲಿಂಗ ಸಮಾನತೆ | 25–29 |
| ಎಸ್‌ಡಿಜಿ 6: ಶುದ್ಧ ನೀರು ಮತ್ತು ನೈರ್ಮಲ್ಯ | 30–32 |
| ಎಸ್‌ಡಿಜಿ 7: ಕೈಗಟಕುವ ಮತ್ತು ಸ್ವಚ್ಛ ಇಂಧನ | 33–35 |
| ಎಸ್‌ಡಿಜಿ 8: ಯೋಗ್ಯ ಉದ್ಯೋಗ ಮತ್ತು ಆರ್ಥಿಕ ಬೆಳವಣಿಗೆ | 36–39 |
| ಎಸ್‌ಡಿಜಿ 9: ಕೈಗಾರಿಕೀಕರಣ, ಆವಿಷ್ಕಾರ ಮತ್ತು ಮೂಲಭೂತ ಸೌಕರ್ಯ | 40–42 |
| ಎಸ್‌ಡಿಜಿ 10: ಅಸಮಾನತೆಯನ್ನು ಕಡಿಮೆಮಾಡುವುದು | 43–45 |
| ಎಸ್‌ಡಿಜಿ 11: ಸುಸ್ಥಿರ ನಗರಗಳು ಮತ್ತು ಸಮುದಾಯಗಳು | 46–48 |
| ಎಸ್‌ಡಿಜಿ 12: ಜವಾಬ್ದಾರಿಯುತ ಬಳಸುವಿಕೆ ಮತ್ತು ಉತ್ಪಾದನೆ | 49–52 |
| ಎಸ್‌ಡಿಜಿ 13: ಹವಾಮಾನ ಬದಲಾವಣೆಗೆ ಕಾರ್ಯತಂತ್ರ | 53–55 |
| ಎಸ್‌ಡಿಜಿ 14: ನೀರಿನ ಕೆಳಗಿನ ಜೀವವೈವಿಧ್ಯ | 56–58 |
| ಎಸ್‌ಡಿಜಿ 15: ಭೂಮಿಯ ಮೇಲಿನ ಜೀವವೈವಿಧ್ಯ | 59–61 |
| ಎಸ್‌ಡಿಜಿ 16: ಶಾಂತಿ, ನ್ಯಾಯ ಮತ್ತು ಬಲಶಾಲಿ ಸಂಸ್ಥೆಗಳು | 62–64 |
| ಎಸ್‌ಡಿಜಿ 17: ಸುಸ್ಥಿರ ಅಭಿವೃದ್ಧಿಗಾಗಿ ಜಾಗತಿಕ ಪಾಲುದಾರಿಕೆ | 65–68 |
| **ಸುಸ್ಥಿರ ಸಹಕಾರಿ ಆಂದೋಲನದೆಡೆಗೆ** | 69–70 |

## –: ಲೇಖಕನ ಅರಿಕೆ :–

ಸುಸ್ಥಿರ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಹಕಾರಿ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸಬೇಕು ಎನ್ನುವ ಮತ್ತು ಈ ಗುರಿಗಳಿಗೆ ತಮ್ಮದೇ ರೀತಿಯಿಂದ ದೇಣಿಗೆ ನೀಡಬೇಕಾದರೆ ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆ ಹಾಗೂ ಸಂಯುಕ್ತ ರಾಷ್ಟ್ರ ಸಂಸ್ಥೆಯು ಈ ಬಗ್ಗೆ ಹೊರತಂದಿರುವ ಗುರಿಗಳ ಬಗ್ಗೆ ಪೂರ್ಣ ತಿಳುವಳಿಕೆಯ ಅಗತ್ಯವಿದೆ ಎನ್ನುವ ನಂಬಿಕೆಯಿಂದ ಈ ಕಿರು ಹೊತ್ತುಗೆಯನ್ನು ಸಿದ್ಧಪಡಿಸಿದ್ದೇನೆ. ಇದು ಸಹಕಾರಿ ಸಂಘಗಳಿಗೆ ತಮ್ಮ ಕಾರ್ಯ ಚಟುವಟಿಕೆಗಳನ್ನು ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಿರುವಂತೆ ರೂಪಿಸಲು ಸಹಕಾರಿಯಾದೀತೆಂದು ನಂಬುತ್ತೇನೆ.

ಈ ಬರವಣಿಗೆಯು ಎಲ್ಲ ಸಹಕಾರಿಗಳಿಗೆ ತಲುಪಬೇಕೆಂದು ಪರಿಗಣಿಸಿ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಮುಂದೆಬಂದಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು ಇವರಿಗೆ ನಾನು ಆಭಾರಿ. ಓದುಗರ ಅಭಿಪ್ರಾಯ, ಸಲಹೆಗಳನ್ನು ಸ್ವೀಕರಿಸಲು ಸದಾ ಸಿದ್ಧನಿದ್ದೇನೆ

**ಡಾ. ಯಶವಂತ ಡೋಂಗ್ರೆ**

## ಮುನ್ನುಡಿ

ಡಾ. ಯಶವಂತ ಡೋಂಗ್ರೆಯವರು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಉಪಕುಲಪತಿಗಳು. ಪ್ರಸ್ತುತ ಚಾಣುಕ್ಯ ವಿಶ್ವವಿದ್ಯಾಲಯದ ಕುಲಪತಿಗಳು ಅವರ ಪ್ರಾಧ್ಯಾಪಕ ವೃತ್ತಿಯ ಪ್ರಾರಂಭದಿಂದಲೂ ಸಹಕಾರ ಕ್ಷೇತ್ರದಲ್ಲಿ ಆಸಕ್ತಿ ಹಾಗೂ ಸಕ್ರೀಯವಾಗಿ ತೊಡಗಿಸಿಕೊಂಡವರು. ಸಹಕಾರ ಕ್ಷೇತ್ರದ ವಿವಿಧ ಆಯಾಮಗಳ ಅಧ್ಯಯನ ಸಂಶೋಧನೆ ಮೌಲ್ಯಮಾಪನ ಹಾಗೂ ಮಾರ್ಗದರ್ಶಿ ಲೇಖನಗಳಿಗೆ ಮತ್ತು ಮಾಹಿತಿ ಪೂರ್ಣ ಚೈತನ್ಯ ನೀಡುವ ಉಪನ್ಯಾಸಗಳಿಗೆ ಹೆಸರಾದವರು. ಮೈಸೂರಿನಲ್ಲಿ ವಾಸವಾಗಿದ್ದಾರೆ. ಸಹಕಾರಿ ಕ್ಷೇತ್ರದ ಅನೇಕ ವಿಷಯಗಳ ಬಗ್ಗೆ ನಿರಂತರ ಲೇಖನಗಳನ್ನು ಬರೆದು ಸಹಕಾರಿಗಳಿಗೆ ಮಾರ್ಗದರ್ಶನ ಮಾಡುತ್ತಿರುವುದು ಸಹಕಾರಿಗಳಿಗೆಲ್ಲ ಸಂತೋಷ ಹಾಗೂ ಹೆಮ್ಮೆಯ ವಿಷಯವಾಗಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಹಿರಿಯ ಸಹಕಾರಿಗಳು ನಿವೃತ್ತ ಸಹಕಾರಿ ಇಲಾಖಾಧಿಕಾರಿಗಳು ಬರೆದಿರುವ ಸಹಕಾರಿ ಕ್ಷೇತ್ರದ ಬಗ್ಗೆ ಮತ್ತು ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಆಯ್ಕೆ ಮಾಡಿ ಪ್ರತಿವರ್ಷ ವಾರ್ಷಿಕ ಸಾಮಾನ್ಯ ಸಭೆಯ ದಿನದಂದು ಬಿಡುಗಡೆ ಮಾಡುತ್ತ ಬಂದಿದೆ. ಸಹಕಾರಿಗಳಿಗೆ ಈ ಪುಸ್ತಕಗಳ ಮೂಲಕ ಸಹಕಾರ ಕ್ಷೇತದ್ರ ಬಗ್ಗೆ ಜ್ಞಾನವನ್ನು ಹೆಚ್ಚಿಸುವ ಕಾರ್ಯ ಮಾಡುತ್ತಿದೆ. ಈ ಕಾರ್ಯವನ್ನು ಅನೇಕ ಸಹಕಾರಿಗಳು ಹಾಗೂ ಅಧಿಕಾರಿಗಳು ಕೂಡ ಮೆಚ್ಚಿರುವುದು ಸ್ವಾಗತಾರ್ಹ ಹಾಗು ಸಂಯುಕ್ತ ಸಹಕಾರಿಗೆ ಹೆಮ್ಮೆ ತಂದಿದೆ.

ಪ್ರಸ್ತುತ ಶ್ರೀಯುತ ಡೋಂಗ್ರೆಯವರು ಸುಸ್ಥಿರ ಅಭಿವೃದ್ಧಿ ಹಾಗೂ ಸಹಕಾರ ಸಂಘಗಳ ಪಾತ್ರ ವಿಷಯವಾಗಿ ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ಪ್ರಸ್ತುತ ಪಡಿಸಿದ 17 ವಿಷಯಗಳ ಬಗ್ಗೆ ಸುದೀರ್ಘವಾಗಿ ವಿವರಗಳನ್ನು ಮತ್ತು ಅವುಗಳನ್ನು ಸಹಕಾರ ಕ್ಷೇತ್ರದ ಮೂಲಕ ಹೇಗೆ ಸಾಧಿಸಬಹುದು ಎಂಬ ವಿಷಯಗಳನ್ನು ಅಳವಡಿಸಿದ ಪುಸ್ತಕ ಇದಾಗಿದೆ.

ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ತತ್ವಗಳಲ್ಲಿ ಪ್ರಮುಖವಾಗಿರುವ ಸಹಕಾರ ಶಿಕ್ಷಣ ಹಾಗೂ ಪ್ರಚಾರ ಮತ್ತು ಸಾಮಾಜಿಕ ಕಳಕಳಿ ಎಂಬ ತತ್ವಗಳ ಅನುಷ್ಠಾನದಲ್ಲಿ ಶ್ರೀ ಡೋಂಗ್ರೆಯವರು ಸಿದ್ಧಪಡಿಸಿದ ಈ ಪುಸ್ತಕವನ್ನು ಸಂಯುಕ್ತ ಸಹಕಾರಿಗೆ ಮುದ್ರಣ ಹಾಗೂ ಪ್ರಕಾಶನಕ್ಕಾಗಿ ಒದಗಿಸಿರುವುದಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಹಕಾರಿ ಕ್ಷೇತ್ರದ ಆಸಕ್ತ ಸಹಕಾರಿಗಳು ಸಹಕಾರಿ ಇಲಾಖಾಧಿಕಾರಿಗಳು ಸಹಕಾರಿ ಕಾರ್ಯಕರ್ತರು, ಈ ಪುಸ್ತಕದ ಪ್ರಯೋಜನವನ್ನು ಪಡೆದು ಸಹಕಾರ ಕ್ಷೇತ್ರದ ಬಗ್ಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಂಯುಕ್ತ ಸಹಕಾರಿಯ ಹಾಗೂ ಶ್ರೀ ಯಶವಂತ ಡೋಂಗ್ರೆಯವರ ಪ್ರಯತ್ನವೂ ಸಾರ್ಥಕವಾಗುತ್ತದೆ. ಸಹಕಾರಿ ಸಂಸ್ಥೆಗಳು ಸೌಹಾರ್ದ ಸಹಕಾರಿಗಳು ಈ ಪುಸ್ತಕವನ್ನು ಅಗತ್ಯವಾಗಿ ಓದಿ ಮನನ ಮಾಡಿಕೊಂಡು ತಮ್ಮ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಕ್ರಿಯಾಯೋಜನೆಗಳನ್ನು ಸಿಧ್ಧಪಡಿಸಿ ಅನುಷ್ಠಾನಗೊಳಿಸಿದಲ್ಲಿ ಸಹಕಾರ ಕ್ಷೇತ್ರದ ಮೂಲಕ ದೇಶದ ಸುಸ್ಥಿರ ಅಭಿವೃದ್ಧಿಗೆ ಮಹತ್ವದ ಪಾತ್ರವನ್ನು ನಿರ್ವಹಿಸಿದಂತಾಗುತ್ತದೆ.

**– ಜಿ. ನಂಜನಗೌಡ**
**ಅಧ್ಯಕ್ಷರು**

# ಸುಸ್ಥಿರ ಅಭಿವೃದ್ಧಿಯ ಗುರಿಗಳು
# (SUSTAINABLE DEVELOPMENT GOALS)

ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆ ಕಳೆದ ಎರಡು ದಶಕಗಳಲ್ಲಿ ಜಗತ್ತಿನಾದ್ಯಂತ ಅಭಿವೃದ್ಧಿನೀತಿಗಳನ್ನು ನಿರ್ದೇಶಿಸುತ್ತಿರುವ ಅತ್ಯಂತ ಪ್ರಮುಖ ತಿಳುವಳಿಕೆಯಾಗಿದೆ. ಸುಸ್ಥಿರ ಅಭಿವೃದ್ಧಿಯ ಕುರಿತಂತೆ ಹಲವಾರು ಮತ್ತು ವಿಭಿನ್ನ ವ್ಯಾಖ್ಯೆಗಳಿವೆಯಾದರೂ, 1987ರಲ್ಲಿ ಬ್ರಂಟ್‌ಲ್ಯಾಂಡ್ ವರದಿಯು (Brundtland Report) ನೀಡಿದ ವ್ಯಾಖ್ಯೆಯನ್ನು ಹೆಚ್ಚಾಗಿ ಎಲ್ಲರೂ ಒಪ್ಪಿ ಬಳಸುತ್ತಿರುವುದನ್ನು ಗಮನಿಸಬಹುದು. ಈ ವರದಿಯ ಪ್ರಕಾರ ಸುಸ್ಥಿರ ಅಭಿವೃದ್ಧಿ ಎಂದರೆ "ಮುಂದಿನ ಪೀಳಿಗೆಯು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಾಮರ್ಥ್ಯಕ್ಕೆ ಅಡಚಣೆ ಬರದಂತೆ ಪ್ರಸಕ್ತ ಅಗತ್ಯಗಳನ್ನು ಪೂರೈಸುವ ಅಭಿವೃದ್ಧಿ ಪ್ರಕ್ರಿಯೆಯಾಗಿದೆ". ಈ ವ್ಯಾಖ್ಯೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯು ತುಂಬ ವಿಸ್ತೃತ ನೆಲೆಯಲ್ಲಿರುವುದನ್ನು ಕಾಣಬಹುದು. ಇಲ್ಲಿ ಅಗತ್ಯಗಳು ಎಂದರೆ ಕೇವಲ ಭೌತಿಕ ಅಗತ್ಯಗಳು ಮಾತ್ರವಲ್ಲದೆ ಮೌಲ್ಯಗಳು, ಸಂಬಂಧಗಳು, ಯೋಚಿಸುವ, ಕಾರ್ಯಾನುಷ್ಠಾನ ಮಾಡುವ ಮತ್ತು ಭಾಗವಹಿಸುವ ಸ್ವಾತಂತ್ರ, ಇವೆಲ್ಲವೂ ಸೇರಿ ಭೌತಿಕ, ನೈತಿಕ ಮತ್ತು ಆಧ್ಯಾತ್ಮಿಕ ನೆಲೆಗಳನ್ನು ಒಳಗೊಂಡಿದ್ದು ಸುಸ್ಥಿರ ಅಭಿವೃದ್ಧಿ ಎನ್ನುವುದು ದೀರ್ಘಾವಧಿಯ, ಸಮಗ್ರ ಮತ್ತು ನಿರಂತರ ಅಭಿವೃದ್ಧಿ ಪ್ರಕ್ರಿಯೆ ಎನ್ನಬಹುದು.

ಸುಸ್ಥಿರ ಅಭಿವೃದ್ಧಿಯ ಚೌಕಟ್ಟಿನೊಳಗೆ ಜಾಗತಿಕ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಕಾರವಾಗಬೇಕೆಂಬ ಆಶಯದಿಂದ ಸಂಯುಕ್ತ ರಾಷ್ಟ್ರ ಸಂಸ್ಥೆಯು ನಿಗದಿತ ಅವಧಿಯೊಳಗೆ ನಿರ್ದಿಷ್ಟ ಮಟ್ಟದ ಅಭಿವೃದ್ಧಿ ಸಾಧ್ಯವಾಗುವಂತೆ ಗುರಿಗಳನ್ನು ನಿಗದಿಪಡಿಸಿ "ಟ್ರಾನ್ಸ್‌ಫಾರ್ಮಿಂಗ್ ಅವರ್ ವರ್ಲ್ಡ್: ದಿ 2030 ಅಜೆಂಡ ಫಾರ್ ಸಸ್ಟೈನಬಲ್ ಡೆವೆಲಪ್‌ಮೆಂಟ್" ಎನ್ನುವ ಹೆಸರಿನಲ್ಲಿ 17 ಪ್ರಮುಖ ಗುರಿಗಳನ್ನು ನೀಡಿ ಎಲ್ಲ ದೇಶಗಳೂ 2030ರೊಳಗೆ ಈ ಗುರಿಗಳನ್ನು ತಲುಪಲು ಪ್ರಯತ್ನ ನಡೆಸಬೇಕೆಂದು ಆಶಿಸಿದೆ. ಸುಸ್ಥಿರ ಅಭಿವೃದ್ಧಿಯ ಈ ಗುರಿಗಳ ಜನನವಾದದ್ದು 2012ರಲ್ಲಿ ರಿಯೋ ಡಿ ಜನೈರೋದಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ಬಗೆಗಿನ ಸಮ್ಮೇಳನದಲ್ಲಿ. ಜಗತ್ತನ್ನು ಕಾಡುತ್ತಿರುವ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಪರಿಸರ ಸಂಬಂಧಿ ಸವಾಲುಗಳನ್ನು ಎದುರಿಸಲು ಸಾರ್ವತ್ರಿಕವಾದ ಗುರಿಗಳನ್ನು ರಚಿಸಬೇಕೆನ್ನುವುದು ಈ ಪ್ರಯತ್ನದ ಉದ್ದೇಶವಾಗಿತ್ತು.

ಸುಸ್ಥಿರ ಅಭಿವೃದ್ಧಿಯ ಗುರಿಗಳು ಈ ಮೊದಲು ಚಾಲ್ತಿಯಲ್ಲಿದ್ದ ಶತಮಾನದ ಅಭಿವೃದ್ಧಿ ಗುರಿಗಳ (ಮಿಲೆನಿಯಮ್ ಡೆವೆಲಪಮೆಂಟ್ ಗೋಲ್ಸ್ – ಎಂಡಿಜಿ) ಮುಂದಿನ ಹಂತವಾಗಿ ರಚಿಸಲ್ಪಟ್ಟಿವೆ. 2000ದನೇ ಇಸವಿಯಲ್ಲಿ, ಹೊಸ ಶತಮಾನದ ಆರಂಭದಲ್ಲಿ, ಸಂಯುಕ್ತ ರಾಷ್ಟ್ರ ಸಂಸ್ಥೆಯು ಎಂಡಿಜಿಗಳನ್ನು ಅನುಷ್ಠಾನಕ್ಕೆ ತಂದು ಹದಿನೈದು ವರ್ಷಗಳ ಅವಧಿಯಲ್ಲಿ ಬಡತನ ಮತ್ತು ಹಸಿವಿನ ಪ್ರಮಾಣವನ್ನು ತಗ್ಗಿಸುವುದು ಮತ್ತು ಶಿಕ್ಷಣ ಹಾಗೂ ಆರೋಗ್ಯವೂ ಸೇರಿದಂತೆ ಹಲವು ಅಭಿವೃದ್ಧಿ ಗುರಿಗಳನ್ನು ನಿಗದಿಪಡಿಸಿತ್ತು. ಈ ಗುರಿಗಳು ಎಲ್ಲ ಸದಸ್ಯ ರಾಷ್ಟ್ರಗಳ ಅಭಿವೃದ್ಧಿ ನೀತಿಗಳನ್ನು ಪ್ರಭಾವಿಸಿದ ಪರಿಣಾಮವಾಗಿ 2000ರಿಂದ 2015ರ ಅವಧಿಯಲ್ಲಿ ಹಲವು ಪ್ರಮುಖ ಬೆಳವಣಿಗೆಗಳಾದವು. ಉದಾಹರಣೆಗೆ ಸುಮಾರು ಹತ್ತು ಕೋಟಿ ಜನ ಬಡತನ ರೇಖೆಯಿಂದ ಮೇಲೆಬರುವುದು ಸಾಧ್ಯವಾಯ್ತು. ಹಾಗೆಯೇ, ಶಿಶು ಮರಣದ ಪ್ರಮಾಣ ಮತ್ತು ಶಿಕ್ಷಣವನ್ನು ನಿಲ್ಲಿಸುವ ಮಕ್ಕಳ ಪ್ರಮಾಣ ಅರ್ಧದಷ್ಟು ಕಡಿಮೆಯಾಯ್ತು ಹಾಗೂ ಎಚ್‌ಐವಿ/ಏಡ್ಸ್ ಪ್ರಮಾಣ ಶೇಕಡ 40ರಷ್ಟು ಕಡಿಮೆಯಾಯ್ತು. ಎಲ್ಲ ದೇಶಗಳಲ್ಲೂ ನಿಗದಿತ ಗುರಿಗಳನ್ನು ಪೂರ್ತಿಯಾಗಿ ತಲುಪುವುದು ಸಾಧ್ಯವಾಗಿಲ್ಲವಾದರೂ ಎಂಡಿಜಿಗಳಿಂದಾಗಿ ಅಭಿವೃದ್ಧಿಶೀಲ ದೇಶಗಳ ಅಭಿವೃದ್ಧಿ ನೀತಿಗಳಿಗೆ ಒಂದು ಹೊಸ ದಿಕ್ಕು ಮತ್ತು ಹೊಸ ಸಾಧನೆಯ ಸಾಧ್ಯತೆಗಳು ಸಿಕ್ಕವು. ಮುಖ್ಯವಾಗಿ ಈ ಗುರಿಗಳ ಅನುಭವವು ಇನ್ನೂ ದೀರ್ಘಾವಧಿಯಲ್ಲಿ ಸುಸ್ಥಿರ

ಜೀವನದ ಬಗ್ಗೆ ಯೋಚಿಸಲು ಮತ್ತು ಯೋಜನೆಗಳನ್ನು ರಚಿಸಲು ಜ್ಞಾನ ಮತ್ತು ಹುರುಪನ್ನು ನೀಡಿತು.

ಶತಮಾನದ ಅಭಿವೃದ್ಧಿ ಗುರಿಗಳ ಸಂದರ್ಭದಲ್ಲೂ ಸಹಕಾರಿ ಸಂಘಗಳು ಕೈಜೋಡಿಸಿ ಗುರಿಗಳನ್ನು ತಲುಪುವಲ್ಲಿ ಸಹಕರಿಸಿವೆ. ಈ ಗುರಿಗಳಲ್ಲಿ ಬಡತನ ಮತ್ತು ಹಸಿವಿನ ನಿರ್ಮೂಲನೆ ಪ್ರಮುಖ ವಿಷಯಗಳಾಗಿದ್ದುದರಿಂದ ಸಹಜವಾಗಿಯೇ ಸಹಕಾರಿ ಸಂಘಟನೆಗಳಿಗೆ ಈ ಗುರಿಗಳು ಮುಖ್ಯವಾದವು. ಬಹುತೇಕ ಅಭಿವೃದ್ಧಿಶೀಲ ದೇಶಗಳಲ್ಲಿ ಸಹಕಾರಿ ಸಂಘಟನೆಗಳು ಗ್ರಾಮೀಣ ಪ್ರದೇಶಗಳ ಮತ್ತು ಅರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವುದರಿಂದಾಗಿ ಶತಮಾನದ ಅಭಿವೃದ್ಧಿ ಗುರಿಗಳನ್ನು ಅನುಷ್ಠಾನಗೊಳಿಸುವ ಪೂರ್ಣ ಸಾಮರ್ಥ್ಯ ಹೊಂದಿದ್ದವು ಎನ್ನಬಹುದು. ಎಂಡಿಜಿಗಳ ಭಾಗವಾಗಿದ್ದ ಆರೋಗ್ಯ ರಕ್ಷಣೆ, ಮಹಿಳಾ ಸಬಲೀಕರಣ, ಪರಿಸರ ರಕ್ಷಣೆ ಮುಂತಾದುವುಗಳು ಸಹಕಾರಿ ಮೌಲ್ಯಗಳ ಅನುಸಾರ ಸಹಕಾರಿ ಸಂಘಗಳು ಯಾವಕಾಲದಲ್ಲೂ ಒಪ್ಪಿ, ಯೋಜನೆಗಳನ್ನು ರೂಪಿಸಿಕೊಂಡು ಬಂದವುಗಳಾಗಿದ್ದುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸುಸ್ಥಿರ ಅಭಿವೃದ್ಧಿಯ ಗುರಿಗಳು 2015–2030ರ ಅವಧಿಯಲ್ಲಿ ತಲುಪಬೇಕಾದ ಗುರಿಗಳಾಗಿದ್ದು ಎಂಡಿಜಿಗಳಿಗಿಂತಲೂ ಹೆಚ್ಚಿನ ವಿಸ್ತೃತ ನೆಲೆಯಲ್ಲಿ ಮತ್ತು ಹೆಚ್ಚಿನ ದೇಶಗಳ ಸಹಯೋಗದಲ್ಲಿ ಅನುಷ್ಠಾನಗೊಳ್ಳುತ್ತಿರುವ ಮೈಲಿಗಲ್ಲುಗಳಾಗಿವೆ. ಸಹಜವಾಗಿಯೇ, ಇಂತಹ ಮಹತ್ವಾಕಾಂಕ್ಷಿ ಗುರಿಯನ್ನು ಸಾಧಿಸಬೇಕಾದರೆ ದೇಶದ ಎಲ್ಲಿ ಕ್ಷೇತ್ರಗಳೂ ತಮ್ಮ ಕಾಣಿಕೆ ನೀಡಬೇಕಾಗುತ್ತದೆ. ಸಹಕಾರಿ ಕ್ಷೇತ್ರವೂ ಇದಕ್ಕೆ ಹೊರತಲ್ಲ. ಈ ವಿಷಯವನ್ನು ಮನಗಂಡು ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟ (ಐಸಿಎ) ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಗಳು (ಐಎಲ್‌ಒ), ಸಹಕಾರಿ ಸಂಘಟನೆಗಳಿಗೆ ಕಾರ್ಯಸೂಚಿಯೊಂದನ್ನು ನೀಡಿವೆ. ಪ್ರತಿ ಗುರಿಯ ಸಾಧನೆಗೆ ಸಹಕಾರಿ ಸಂಸ್ಥೆಗಳು ಏನು ಮಾಡಬೇಕು ಅಥವ ಏನು ಮಾಡಬಹುದು ಎನ್ನುವುದನ್ನು ಸೂಚ್ಯವಾಗಿ ಈ ಕಾರ್ಯಸೂಚಿಯು ತಿಳಿಸುತ್ತದೆ. ಈ ಕಾರ್ಯಸೂಚಿಯ ಆಶಯವನ್ನು ನಮ್ಮ ದೇಶದ ಸಹಕಾರಿ ಸಂಸ್ಥೆಗಳ ಸಂದರ್ಭಕ್ಕೆ ಹೊಂದುವಂತೆ ವಿವರಿಸಲು ಇಲ್ಲಿಯ ಬರಹಗಳಲ್ಲಿ ಪ್ರಯತ್ನಿಸಲಾಗಿದೆ.

ಎಸ್‌ಡಿಜಿಗಳು ಜನರ ಜೀವನದ ಉನ್ನತೀಕರಣದ ಜೊತೆಜೊತೆಗೇ ಭೂಮಂಡಳದ ಎಲ್ಲ ಜೀವಜಂತುಗಳ ಮತ್ತು ಒಂದರ್ಥದಲ್ಲಿ ಇಡಿಯ ಭೂಮಂಡಳದ ಒಳಿತಿನ ಬಗೆಗೆ ಯೋಚಿಸಿ, ಯೋಜಿಸಿದ ಗುರಿಗಳಾಗಿವೆ. ಸಹಕಾರಿ ಕ್ಷೇತ್ರವು ಇದೇ ಕಾಳಜಿಗಳಿಂದಾಗಿ ಹುಟ್ಟಿಕೊಂಡ ಮತ್ತು ಚಟುವಟಿಕೆಗಳನ್ನು ಸಂಘಟಿಸುತ್ತಿರುವ ಕ್ಷೇತ್ರವಾಗಿದೆ. ಹಾಗಾಗಿಯೇ ಎಸ್‌ಡಿಜಿಗಳು ಮತ್ತು ಸಹಕಾರಿ ಕ್ಷೇತ್ರದ ದೃಷ್ಟಿಕೋನಗಳು ಒಂದೇ ತೆರನಾಗಿದೆ ಎನ್ನಬಹುದು. ಸಂಯುಕ್ತ ರಾಷ್ಟ್ರ ಸಂಸ್ಥೆಯು ನೀಡಿರುವ ಹದಿನೇಳು ಗುರಿಗಳಲ್ಲಿ ಆರು ಗುರಿಗಳನ್ನು ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟವು ಗುರುತಿಸಿ, ಸಹಕಾರಿ ಸಂಸ್ಥೆಗಳು ಸಹಜವಾಗಿ ಮತ್ತು ಅಗತ್ಯವಾಗಿ ಕೆಲಸಮಾಡಬೇಕಾದ ಗುರಿಗಳೆಂದು ತಿಳಿಸಿದೆಯಾದರೂ, ಇತರೆ ಗುರಿಗಳ ಸಂಬಂಧದಲ್ಲಿಯೂ ಸಹಕಾರಿ ಸಂಘಗಳು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ತಮ್ಮ ದೇಣಿಗೆ ನೀಡುವುದು ಸಾಧ್ಯವಿದೆ. ಇದನ್ನು ಗಮನಿದಲ್ಲಿರಿಸಿಕೊಂಡು ಪ್ರತಿಯೊಂದು ಗುರಿಗೆ ಪೂರಕವಾಗಿ ಸ್ಥಳೀಯ ಮಟ್ಟದಲ್ಲಿ ಸಹಕಾರಿ ಸಂಸ್ಥೆಗಳು ತೆಗೆದುಕೊಳ್ಳಬಹುದಾದ ಉಪಕ್ರಮಗಳನ್ನು ಪಟ್ಟಿಮಾಡಲಾಗಿದೆ. ಈ ಎಲ್ಲವೂ ಕೇವಲ ಒಂದು ದಿಕ್ಸೂಚಿಯನ್ನು ನೀಡುವ, ಸಾಧ್ಯತೆಗಳನ್ನು ತೋರಿಸುವ ಮತ್ತು ಗುರಿಗಳ ಆಶಯಗಳನ್ನು ನಿರ್ದಿಷ್ಟ ಕಾರ್ಯಕ್ರಮದ ಮೂಲಕ ತೋರಿಸುವ ದೃಷ್ಟಿಯಿಂದ ನೀಡಲಾದ ಸಲಹೆಗಳಾಗಿವೆ. ಸಹಕಾರಿ ಸಂಸ್ಥೆಗಳು ಇಲ್ಲಿ ನೀಡಿರುವ ಎಲ್ಲ ಸಲಹೆಗಳ ಆಧಾರದಲ್ಲಿ ತಮ್ಮದೇ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬಹುದಾಗಿದೆ.

# ಎಸ್‌ಡಿಜಿ 1 – ಬಡತನದ ನಿರ್ಮೂಲನೆ

ಬಡತನವನ್ನು ಎಲ್ಲೆಡೆ, ಅದರ ಎಲ್ಲ ರೂಪದಲ್ಲಿ ನಿರ್ಮೂಲನೆ ಮಾಡುವುದು (End poverty in all its forms, everywhere) ಸುಸ್ಥಿರ ಅಭಿವೃದ್ಧಿಯ ಬಗೆಗಿನ ಮೊದಲ ಗುರಿಯಾಗಿದೆ. ಈ ಗುರಿಯು 2030ರ ವೇಳೆಗೆ ಜಗತ್ತಿನ ಯಾವ ಭಾಗದಲ್ಲಿಯೂ ಕಡು ಬಡತನ, ಅಂದರೆ ದಿನಕ್ಕೆ 1.25 ಅಮೆರಿಕನ್ ಡಾಲರ್‌ಗಿಂತ ಕಡಿಮೆ ಆದಾಯವಿರುವ ಜನರು, ಇರದಿರುವಂತೆ ಮಾಡುವ ಆಶಯವನ್ನು ಹೊಂದಿದೆ. ಇದೇ ಅವಧಿಯಲ್ಲಿ ಪ್ರತಿ ದೇಶವೂ ತಮ್ಮ ತಮ್ಮ ದೇಶದ ಮಾನದಂಡಗಳನುಸಾರ ಬಡವರೆಂದು ಗುರುತಿಸಲ್ಪಡುವ ಜನಸಂಖ್ಯೆಯ ಪ್ರಮಾಣವನ್ನು ಅರ್ಧದಷ್ಟು ಕಡಿಮೆ ಮಾಡಬೇಕು, ಎಲ್ಲರಿಗೂ ಸೂಕ್ತವಾದ ಸಾಮಾಜಿಕ ರಕ್ಷಣಾ ವ್ಯವಸ್ಥೆಯನ್ನು ಜಾರಿ ಮಾಡಬೇಕು, ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಗೂ ಆರ್ಥಿಕ ಸಂಪನ್ಮೂಲಗಳ ಬಗ್ಗೆ ಸಮಾನ ಹಕ್ಕು ಮತ್ತು ಅವಕಾಶಗಳು ದೊರೆಯುವಂತೆ ಕ್ರಮಕೈಗೊಳ್ಳಬೇಕು ಮತ್ತು ಎಲ್ಲ ಜನರು ಅದರಲ್ಲೂ ವಿಶೇಷವಾಗಿ ಬಡವರು ಆರ್ಥಿಕ, ಸಾಮಾಜಿಕ ಮತ್ತು ಪ್ರಾಕೃತಿಕ ಕಾರಣಗಳಿಂದಾಗಿ ಅವಕಾಶ ವಂಚಿತರಾಗುವುದು ಅಥವ ಬಲಿಪಶುಗಳಾಗುವುದನ್ನು ಸಂಪೂರ್ಣವಾಗಿ ತಡೆಯಬೇಕು – ಇವು ಬಡತನ ನಿರ್ಮೂಲನೆಗಾಗಿ ಪ್ರತಿದೇಶವೂ ತೆಗೆದುಕೊಳ್ಳಬೇಕಾದ ಕ್ರಮವೆಂದು ಈ ಗುರಿಯು ಪರಿಭಾವಿಸುತ್ತದೆ.

1990ರ ನಂತರ ಜಾಗತಿಕ ನೆಲೆಯಲ್ಲಿ ಸರಾಸರಿ ಬಡತನದ ಪ್ರಮಾಣದಲ್ಲಿ ಗಣನೀಯ ಇಳಿಕೆಯಾಗಿದೆಯಾದರೂ, ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಕಡಿಮೆಯಾಗಿಲ್ಲ. ಭಾರತವೂ ಸೇರಿದಂತೆ ಹಲವು ಅಭಿವೃದ್ಧಿಶೀಲ ದೇಶಗಳಲ್ಲಿ ಬಡತನ ರೇಖೆಯ ಕೆಳಗಿನ ಜನಸಂಖ್ಯೆಯ ಪ್ರಮಾಣ ಕಡಿಮೆಯಾಗಿದೆಯಾದರೂ ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಮೊದಲಿಗಿಂತ ಹೆಚ್ಚಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಜಗತ್ತಿನಾದ್ಯಂತ ಸುಮಾರು 1.29 ಬಿಲಿಯನ್ ಜನ ಇಂದಿಗೂ ಕಡು ಬಡತನದಲ್ಲಿ ಜೀವಿಸುತ್ತಿದ್ದಾರೆ. ಭಾರತದಲ್ಲಿ ಒಟ್ಟು ಜನಸಂಖ್ಯೆಯ ಸುಮಾರು ಶೇಕಡ 30ರಷ್ಟು ಜನ ಕಡು ಬಡತನದಲ್ಲಿದ್ದಾರೆ. ಬಡತನ ಕೇವಲ ವರಮಾನದ ಪ್ರಶ್ನೆಯಾಗಿರದೆ ಅದಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ. ಶಿಕ್ಷಣ, ವಸತಿ, ಆರೋಗ್ಯ ಮುಂತಾದ ಪ್ರಾಥಮಿಕ ಅಗತ್ಯಗಳನ್ನು ಪಡೆಯುವುದು ಈ ಸಮುದಾಯಕ್ಕೆ ತೀರ ಕಷ್ಟವಾಗಿದೆ. ಜೊತೆಗೆ ಸಾಲದ ವರ್ತುಲದಲ್ಲಿ ಸಿಲುಕಿರುವುದರಿಂದ ಕಡುಬಡವರ ಬಹುಭಾಗ ತಮಗೆ ದೊರೆಯುವ ಅಲ್ಪ ವರಮಾನವನ್ನೂ ಸಾಲ ತೀರಿಸಲು ವ್ಯಯಿಸಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ. ಇತ್ತೀಚಿನ ವರೆಗೆ ಭಾರತದಲ್ಲಿ ಕಡುಬಡವರು ಹೆಚ್ಚಾಗಿ ಗ್ರಾಮೀಣವಾಸಿಗಳೆಂದು ಭಾವಿಸಲಾಗಿತ್ತು. ಆದರೆ ಬದಲಾದ ಕೈಗಾರಿಕೀಕರಣ ಮತ್ತು ನಗರೀಕರಣದಿಂದಾಗಿ ದೊಡ್ಡ ಸಂಖ್ಯೆಯ ಗ್ರಾಮೀಣ ಜನ ನಗರಗಳಿಗೆ ವಲಸೆ ಬಂದಿರುವುದರಿಂದ, ನಗರವಾಸಿಗಳ ಬಡತನದ ಸಂಖ್ಯೆಯೂ ದೊಡ್ಡ ಪ್ರಮಾಣದಲ್ಲಿದೆ. ಆದುದರಿಂದ 2030ರೊಳಗೆ ಕಡುಬಡತನದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದ್ದಲ್ಲಿ ಅರ್ಥವ್ಯವಸ್ಥೆಯ ಎಲ್ಲ ಸಾಂಸ್ಥಿಕ ರಚನೆಗಳ ಕೊಡುಗೆ ಅನಿವಾರ್ಯ.

ಸಹಕಾರಿ ಕ್ಷೇತ್ರದ ಪಾತ್ರ: ಸಮುದಾಯದ ಬಗೆಗಿನ ಕಾಳಜಿ (ಕನ್ಸರ್ನ್ ಫಾರ್ ಕಮ್ಯುನಿಟಿ) ಸಹಕಾರಿ ಚಳುವಳಿಯ ಪ್ರಮುಖ ತತ್ವಗಳಲ್ಲೊಂದು. ಆದುದರಿಂದ ತಮ್ಮ ಸಾಂಸ್ಥಿಕ ರಚನೆ ಮತ್ತು ಉದ್ದೇಶಗಳಿಂದಾಗಿ ಸಹಕಾರಿ ಸಂಘಟನೆಗಳು ಸಹಜವಾಗಿಯೇ ಮೂರು ಪ್ರಮುಖ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಆರ್ಥಿಕ ನೆಲೆಯಲ್ಲಿ ಅವು ಉದ್ಯೋಗ ಮತ್ತು ಆದಾಯದ ಅವಕಾಶಗಳನ್ನು ಸೃಷ್ಟಿಸುತ್ತವೆ. ಸಾಮಾಜಿಕ ನೆಲೆಯಲ್ಲಿ ಅವು ರಕ್ಷಣೆ ಮತ್ತು ಸಮಾನತೆಯನ್ನು ಸಾಧ್ಯವಾಗಿಸುತ್ತವೆ. ಪ್ರಜಾಸತ್ತಾತ್ಮಕ ಸಂಘಟನೆಗಳಾದುದರಿಂದ ಅವು ಸಮುದಾಯ ಬದ್ಧತೆಯನ್ನೂ, ರಾಜಕೀಯ ಒಳನೋಟಗಳನ್ನೂ ನೀಡುತ್ತವೆ.

ಸಹಕಾರಿ ಕ್ಷೇತ್ರ ಜಗತ್ತಿನ ಪರೋಗಾಮಿ ಚಳುವಳಿಯ ಭಾಗವಾಗಿದ್ದು ಸಹಕಾರಿ ಸಂಘಗಳು ಮೌಲ್ಯಗಳು ಮತ್ತು ತತ್ವಗಳ ಆಧಾರದಲ್ಲಿ ನಡೆಯುವ ಸಂಸ್ಥೆಗಳಾಗಿರುವುದರಿಂದ, ಸಹಜವಾಗಿಯೇ ಬಡತನದಂತಹ ಸಮಸ್ಯೆಗಳಿಗೆ ಸ್ಪಂದಿಸುವ ಸಂಘಟನೆಗಳಾಗಿವೆ. ಭಾರತದ ಸಹಕಾರ ಚಳುವಳಿ ಮೊದಲಿನಿಂದಲೂ ಬಡ ಸಮುದಾಯಗಳ ಏಳಿಗೆಗಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿವೆ. ಆದುದರಿಂದ ಸುಸ್ಥಿರ ಅಭಿವೃದ್ಧಿಯ ಪ್ರಥಮ ಗುರಿಯಾದ ಕಡುಬಡತನದ ನಿರ್ಮೂಲನೆಯಲ್ಲಿ ಸಹಕಾರಿ ಸಂಘಗಳ ಪಾತ್ರ ಅತ್ಯಂತ ಮುಖ್ಯವಾಗಿದೆ. ನಮ್ಮ ಸಂದರ್ಭವನ್ನು ಗಮನದಲ್ಲಿರಿಸಿಕೊಂಡರೆ ವಿವಿಧ ಸಹಕಾರಿ ಸಂಘಗಳು ಈ ಕೆಳಗಿನ ಕೆಲವು ಪ್ರಮುಖ ಕಾರ್ಯನೀತಿಗಳನ್ನು ಅನುಸರಿಸಬಹುದಾಗಿದೆ.

ಸಹಕಾರಿ ಸಂಘಟನೆಗಳು ಬಡತನ ನಿರ್ಮೂಲನೆಯಲ್ಲಿ ನಿರ್ವಹಿಸಬಹದಾದ ಪಾತ್ರವು ಅವುಗಳು ಯಾವ ರೀತಿಯ ವ್ಯವಹಾರ ಚಟುವಟಿಕೆಗಳನ್ನು ನಡೆಸುತ್ತಿವೆ (ಪತ್ತು, ಮಾರಾಟ, ಉತ್ಪಾದನೆ ಹೀಗೆ) ಮತ್ತು ಯಾವ ಭೌಗೋಳಿಕ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತಿವೆ (ಗ್ರಾಮೀಣ, ಪಟ್ಟಣ, ನಗರ ಹೀಗೆ) ಎನ್ನುವುದನ್ನು ಅವಲಂಬಿಸಿರುತ್ತದೆ. ಈ ಪಾತ್ರವು ಪ್ರತ್ಯಕ್ಷವಾಗಿರಬಹುದು ಅಥವ ಪರೋಕ್ಷವಾಗಿರಬಹುದು, ನೇರವಾಗಿ ಆರ್ಥಿಕ ನೆರವು ನೀಡುವ ರೂಪದಲ್ಲಿರಬಹುದು ಅಥವ ಬಡವರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಯಾವುದೇ ಯೋಜನೆಯ ರೂಪದಲ್ಲಿರಬಹುದು. ಬಡವರಿಗೆ ಸಾಮಾಜಿಕ ರಕ್ಷಣೆಯನ್ನು ಒದಗಿಸುವ ರೂಪದಲ್ಲಿಯೂ ಇರಬಹುದು. ಈ ಕೆಳಗೆ ಪಟ್ಟಿಮಾಡಿರುವ ಹಲವು ಚಟುವಟಿಕೆಗಳಲ್ಲಿ ತಮಗೆ ಅನ್ವಯವಾಗುವ, ಸರಿಕಾಣುವ ಅಥವ ಸಾಧ್ಯವಿರುವ ಯಾವುದೆ ಮಾರ್ಗಗಳನ್ನು ಸಹಕಾರಿ ಸಂಘಗಳು ಅನುಸರಿಸಬಹುದು.

1 ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ಸಾಲನೀಡುವಾಗ ಸದಸ್ಯರ ಆರ್ಥಿಕ ಸ್ಥಾನಮಾನ ಮತ್ತು ಸಾಲ ಪಡೆಯುವ ಉದ್ದೇಶದ ಆಧಾರದಲ್ಲಿ ಬಡ್ಡಿದರಗಳಲ್ಲಿ ವ್ಯತ್ಯಯ ಮಾಡಬಹುದು. ಉದಾಹರಣೆಗೆ ಬಡ ಸದಸ್ಯರಿಗೆ ಶೇ. 1 ರಷ್ಟು ಕಡಿಮೆ ಬಡ್ಡಿ ದರ ವಿಧಿಸುವುದು, ಅವರುಗಳು ಸಾಮಾನ್ಯಕ್ಕಿಂತ ಹೆಚ್ಚಿನ ಕಂತಿನಲ್ಲಿ ಸಾಲ ಮರುಪಾವತಿಗೆ ಅವಕಾಶ ಮಾಡಿಕೊಡುವುದು, ಕೆಲವು ಅಗತ್ಯಗಳಿಗಾಗಿ ಸಾಲ ಪಡೆದಾಗ (ಉದಾಹರಣೆಗೆ ಶಿಕ್ಷಣ, ಆರೋಗ್ಯ ಮುಂತಾದುವುಗಳು) ಕಡಿಮೆ ಬಡ್ಡಿ ವಿಧಿಸುವುದು ಇತ್ಯಾದಿ.

2. ಆರ್ಥಿಕವಾಗಿ ಹಿಂದುಳಿದವರಿಗಾಗಿಯೇ ವಿಶೇಷ ಪತ್ತಿನ ಯೋಜನೆಗಳನ್ನು ರೂಪಿಸುವುದು. ಉದಾಹರಣೆಗೆ ಸ್ವಂತ ಉದ್ಯೋಗಕ್ಕಾಗಿ ಸಾಲ, ಕಡಿಮೆ ಅವಧಿಗೆ ಆಪತ್ತು ಸಾಲ (ಉದಾಹರಣೆಗೆ ಒಂದು ವಾರದ ಅವಧಿಯ ಸಾಲ), ಬಡ ಕುಟುಂಬದ ಯುವಕರಿಗೆ ಮತ್ತು ಮಹಿಳೆಯರಿಗೆ ವಿಶೇಷ ಸಾಲ ಯೋಜನೆಗಳು ಇತ್ಯಾದಿ.

3. ಪಿಗ್ಮಿ ಠೇವಣಿ ಮಾದರಿಯಲ್ಲಿ ಕಡಿಮೆ ಮತ್ತು ಅನಿಶ್ಚಿತ ಆದಾಯದ ಜನ ಉಳಿತಾಯ ಮಾಡುವುದು ಸಾಧ್ಯವಾಗುವಂತಹ ಯೋಜನೆಯನ್ನು ಚಾಲ್ತಿಗೆ ತರಬಹುದು.

4 ಆರ್ಥಿಕವಾಗಿ ಹಿಂದುಳಿದವರ ಸ್ವಸಹಾಯ ಸಂಘಗಳನ್ನು ಆರಂಭಿಸುವುದು, ಅಂತಹ ಸಂಘಗಳ ಖಾತೆಗಳನ್ನು ಸಹಕಾರಿ ಸಂಘದಲ್ಲಿ ತೆರೆಯುವುದು ಮತ್ತು ಸ್ವಸಹಾಯ ಸಂಘಗಳಿಗೆ ವಿಶೇಷ ಸಾಲ ನೀಡುವ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು.

5. ಸಹಕಾರಿ ಸಂಸ್ಥೆಗಳು ಗಳಿಸುವ ಲಾಭದ ಒಂದಂಶವನ್ನು ಬಡ ಕುಟುಂಬಗಳ ಸಹಾಯಕ್ಕಾಗಿ  ವಿಶೇಷವಾಗಿ ಇಂತಹ ಕುಟುಂಬಗಳಿಗೆ ಅಗತ್ಯವಾದ ಆರೋಗ್ಯ, ವಸತಿಗಳಿಗೆ ಸಹಾಯ ನೀಡಲು ಮತ್ತು ಇಂತಹ ಕುಟುಂಬಗಳ ಮಕ್ಕಳಿಗೆ ಶಿಕ್ಷಣಕ್ಕೆ ಸಹಾಯ ಮಾಡಬಹುದು.

6. ಪ್ರತಿ ಸಹಕಾರಿ ಸಂಘವು ಪ್ರತಿ ವರ್ಷ ಕೆಲವು ಬಡ ಕುಟುಂಬಗಳನ್ನು ಸಂಘದ ಸದಸ್ಯರನ್ನಾಗಿ ಮಾಡಿಕೊಂಡು, ಆ ಕುಟುಂಬಗಳಿಗೆ ಅಗತ್ಯ ಸಹಾಯ ನೀಡಬಹುದು.

7. ಸಹಕಾರಿ ಸಂಘಗಳಲ್ಲಿ ಉದ್ಯೋಗಿಗಳನ್ನು ನೇಮಕ ಮಾಡುವಾಗ ಬಡ ಕುಟುಂಬದ ಯುವಕ/ಯುವತಿಯರಿಗೆ ಆದ್ಯತೆ ನೀಡಬಹುದು.

8. ಒಂದು ಅಥವ ಹಲವು ಸಹಕಾರಿ ಸಂಘಗಳು ಸೇರಿ ಅಥವ ಸಹಕಾರಿ ಯೂನಿಯನ್/ಮಹಾಮಂಡಳಗಳ ನೇತೃತ್ವದಲ್ಲಿ ಕಡುಬಡವ ಸಮುದಾಯದ ಸಹಕಾರಿ ಸಂಘಗಳನ್ನು ಸ್ಥಾಪಿಸಿ (ಉದಾಹರಣೆಗೆ ರದ್ದಿ ಹೆರಕುವವರ ಸಹಕಾರಿ ಸಂಘ, ಭಿಕ್ಷುಕರ ಸಹಕಾರಿ ಸಂಘ, ಹಾವಾಡಿಕಗರ ಸಹಕಾರಿ ಸಂಘ, ವಸತಿ ಹೀನರ ಸಹಕಾರಿ ಸಂಘ ಇತ್ಯಾದಿ) ಆಯಾ ಸಮುದಾಯವು ಸ್ವಸಹಾಯ ನೆಲೆಯಲ್ಲಿ ಉತ್ತಮ ಆರ್ಥಿಕ ನೆಲೆಯನ್ನು ಕಂಡುಕೊಳ್ಳಲು ಸಹಕರಿಸಬಹುದು.

9. ಮಾರಾಟ ಸಹಕಾರ ಸಂಘಗಳು ಬಡತನದ ರೇಖೆಯಿಂದ ಕೆಳಗಿರುವವರು ಬೆಳೆದ, ತಯಾರಿಸಿದ ವಸ್ತುಗಳ ಮಾರಾಟಕ್ಕೆ ವಿಶೇಷ ಯೋಜನೆಗಳನ್ನು ಅನುಷ್ಠಾನಕ್ಕೆ ತರಬಹುದು.

10. ಹಲವು ಸಹಕಾರ ಸಂಘಗಳು ಒಟ್ಟಾಗಿ ತಮ್ಮ ಹತ್ತಿರದಲ್ಲಿರುವ ವಸತಿ ಹೀನರಿಗೆ ಸಹಕಾರಿ ಮಾದರಿಯಲ್ಲಿ ವಸತಿ ಸೌಕರ್ಯ ಕಲ್ಪಿಸಬಹುದು.

11. ಅತಿ ಸಣ್ಣ ರೈತರು ಅದರಲ್ಲೂ ಹಣ್ಣು, ತರಕಾರಿ ಬೆಳೆಯುವವರನ್ನು ಸಂಘಟಿಸಿ ಸಹಕಾರಿ ಸಂಸ್ಕರಣ ಘಟಕಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬಹುದು.

12. ಕೂಲಿ ಕಾರ್ಮಿಕರನ್ನು ಸಂಘಟಿಸಿ ಶ್ರಮಿಕ ಸಹಕಾರಿ ಸಂಘಗಳನ್ನು ರಚಿಸಿ ಸಹಾಯ ಮಾಡಬಹುದು.

13. ಬಡಕುಟುಂಬಗಳ ಬಳಿ ಲಭ್ಯವಿರುವ ಸಂಪನ್ಮೂಲಗಳನ್ನು ಗುರುತಿಸಿ, ಅವುಗಳನ್ನು ಹೆಚ್ಚು ಉಪಯುಕ್ತವಾಗಿ ಉಪಯೋಗಿಸುವ ಮಾರ್ಗೋಪಾಯಗಳನ್ನು ಸೂಚಿಸಬಹುದು (ಉದಾಹರಣೆಗೆ ಸಣ್ಣ ಪ್ರಮಾಣದ ಭೂಮಿ ಇದ್ದಲ್ಲಿ ಅದನ್ನು ಯಾವ ಆರ್ಥಿಕ ಚಟುವಟಿಕೆಗಳಿಗೆ ಉಪಯೋಗಿಸಬಹದೆಂಬ ಬಗ್ಗೆ ಮಾಹಿತಿ, ತರಬೇತಿ ನೀಡುವುದು)

14. ಆಯ್ದ ಕುಟುಂಬಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಅವರ ಬಡತನಕ್ಕೆ ಕಾರಣಗಳನ್ನು ಗುರುತಿಸಿ, ಅವರಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಬೇಕಾದ ತರಬೇತಿ ಮತ್ತು ಪರಿಕರಗಳನ್ನು ನೀಡಬಹುದು.

15. ಬಡತನ ರೇಖೆಯಿಂದ ಕೆಳಗಿರುವ ಕುಟುಂಬದ ಸದಸ್ಯರಿಗೆ ಸಹಕಾರಿ ಸಂಘಗಳ ಸದಸ್ಯರಾಗಲು ಅನುಕೂಲವಾಗುವಂತೆ ಸುಲಭ ಸದಸ್ಯತ್ವದ ಯೋಜನೆಗಳನ್ನು ಚಾಲ್ತಿಗೆ ತರಬಹುದು.

ಮೇಲೆ ತಿಳಿಸಿರುವ ಕಾರ್ಯ ಯೋಜನೆ ಕೇವಲ ಕೆಲವು ಸಾಧ್ಯತೆಗಳು ಮಾತ್ರ. ಸಹಕಾರಿ ಸಂಘಗಳು ಬಡತನ ಪರಿಹಾರಕ್ಕೆ ಏನು ಮಾಡಬಹುದೆನ್ನುವುದು ಆಯಾ ಪ್ರದೇಶದ ಜನ ಸಮುದಾಯ ನಿರ್ದಿಷ್ಟ ಸಮಯದಲ್ಲಿ ಯಾವ ಸಮಸ್ಯೆ ಎದುರಿಸುತ್ತಿರುತ್ತಾರೆ, ಅವರ ಅಗತ್ಯಗಳೇನು ಎನ್ನುವುದನ್ನು ಅವಲಂಬಿಸಿರುತ್ತದೆ. ಜಗತ್ತಿನಾದ್ಯಂತ ಸಹಕಾರಿ ಸಂಸ್ಥೆಗಳು 'ಬಡವರ ಪರವಾದ ಸಂಘಟನೆಗಳು' ಎಂದೇ ಗುರುತಿಸಲ್ಪಡುತ್ತಿವೆ. ಜಗತ್ತಿನ ಪ್ರಥಮ ಸಹಕಾರಿ ಸಂಘ ಇಂಗ್ಲೆಂಡ್‌ನಲ್ಲಿ ಆರಂಭವದ್ದು ಅಂದಿನ ಬಡ ಶ್ರಮಿಕವರ್ಗದ ಏಳಿಗೆಗಾಗಿ ಎನ್ನುವುದನ್ನು ಸಹಕಾರಿ ಸಂಸ್ಥೆಗಳು ಮರೆಯಬಾರದು. ನಮ್ಮ ದೇಶದಲ್ಲಿ ಬಡತನ ನಿರ್ಮೂಲನೆಯ ಬಗೆಗಿನ 2030ರ ಗುರಿಯನ್ನು ಸಾಧಿಸಬೇಕಾದರೆ ಬೇರೆಲ್ಲ ಕ್ಷೇತ್ರಕ್ಕಿಂತ ಸಹಕಾರಿ ಕ್ಷೇತ್ರದ ಪಾತ್ರ ಹಿರಿದಾದುದು ಎನ್ನುವ ಪೂರ್ಣ ಪರಿಜ್ಞಾನದಿಂದ ಯೋಜನೆಗಳನ್ನು ರೂಪಿಸಬೇಕಾದುದು ಎಲ್ಲ ಸಹಕಾರಿ ಸಂಸ್ಥೆಗಳ ಜವಾಬ್ದಾರಿ.

# ಎಸ್‌ಡಿಜಿ 2 – ಹಸಿವಿನ ಅಂತ್ಯ, ಆಹಾರ ಭದ್ರತೆಯ ಸಾಧನೆ

ಹಸಿವಿನ ಅಂತ್ಯ, ಆಹಾರ ಭದ್ರತೆಯ ಸಾಧನೆ ಮತ್ತು ಉತ್ತಮ ಪೋಶಣೆ ಹಾಗೂ ಸುಸ್ಥಿರ ಕೃಷಿಗೆ ಉತ್ತೇಜನ (End hunger, achieve food security and improved nutrition and promote sustainable agriculture) ಇವು ಸುಸ್ಥಿರ ಅಭಿವೃದ್ಧಿಯ ಎರಡನೆ ಗುರಿಯಲ್ಲಿ ಒತ್ತು ನೀಡಿರುವ ಪ್ರಮುಖ ಅಂಶಗಳು. ಮೊದಲ ಗುರಿಗೆ ಪೂರಕವಾಗಿರುವ ಈ ಎರಡನೆಯ ಗುರಿಯು ಜಗತ್ತಿನ ಯಾವ ಭಾಗದಲ್ಲಿಯೂ ಜನ ಹಸಿವಿನಿಂದ ಬಳಲಬಾರದೆಂಬ ಉದ್ದೇಶ ಹೊಂದಿದೆ. 2030ರೊಳಗೆ ಪ್ರತಿಯೊಬ್ಬರಿಗು ವರ್ಷ ಪೂರ್ತಿ ಸುರಕ್ಷಿತ ಮತ್ತು ಪೋಶಕತ್ವ ಭರಿತ ಆಹಾರವು ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತಾಗಬೇಕೆಂದು ಈ ಗುರಿಯು ಬಯಸುತ್ತದೆ. ನಿರ್ದಿಷ್ಠವಾಗಿ ಈ ಗುರಿಯು ಎಲ್ಲ ಬಗೆಯ ಅಪೋಷಕತೆಯನ್ನು ಕೊನೆಗಾಣಿಸಬೇಕೆಂದು ಮತ್ತು ವಿಶೇಶವಾಗಿ ಮಕ್ಕಳಲ್ಲಿ, ಹದಿವಯಸ್ಕರಲ್ಲಿ, ಗರ್ಭಿಣಿ ಮತ್ತು ಹಾಲುಣಿಸುವ ಮಹಿಳೆಯರಲ್ಲಿ ಅಪೋಷಕತೆಯ ಸಮಸ್ಯೆಯನ್ನು ನಿವಾರಿಸಬೇಕೆಂದು ವಿಧಿಸುತ್ತದೆ. ಇದೇ ಅವಧಿಯಲ್ಲಿ ಕೃಷಿ ಉತ್ಪಾದನೆಯನ್ನು ಮತು ಕೃಷಿ ಆದಾಯವನ್ನು ದ್ವಿಗುಣಗೊಳಿಸಬೇಕೆಂದೂ, ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿ, ಕೃಷಿ ಸಂಬಂಧಿತ ಮಾರುಕಟ್ಟೆ ಮತ್ತು ಇತರ ಸವಲತ್ತುಗಳು, ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ದೊರೆಯುವಂತಾಗಬೇಕೆಂದೂ ಈ ಗುರಿಯಲ್ಲಿ ಹೇಳಲಾಗಿದೆ. ಜನರಿಗೆ ಆಹಾರ ಭದ್ರತೆಯು ದೊರೆಯಬೇಕೆಂದಾದಲ್ಲಿ ಕೃಷಿ ಕ್ಷೇತ್ರವು ಸುಸ್ಥಿರವಾಗಿರಬೇಕೆಂದೂ ಈ ಗುರಿಯು ಗುರುತಿಸುತ್ತದೆ. ಆದುದರಿಂದ ಕೃಷಿ ಪರಿಕರಗಳ ಉತ್ಪಾದನೆ ಮತ್ತು ಅವುಗಳು ರೈತರಿಗೆ ಸುಲಭವಾಗಿ ದೊರೆಯುವಂತಾಗುವುದು, ಸ್ಥಳೀಯ ಬೆಳೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಬೀಜಗಳ ರಕ್ಷಣೆ, ಕೃಷಿಯ ಪೂರಕ ಪರಿಸರವನ್ನು ಕಾಪಾಡುವುದು, ಭೂಮಿ ಮತ್ತು ಮಣ್ಣಿನ ಗುಣಮಟ್ಟವನ್ನು ಉತ್ತಮಪಡಿಸುವುದು, ಪ್ರಕೃತಿ ವಿಕೋಪಗಳಿಂದ ರಕ್ಷಣೆ, ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಹೂಡಿಕೆ ಮಾಡುವುದು ಮತ್ತು ಕೃಷಿ ಕ್ಷೇತ್ರದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು, ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ಎಲ್ಲ ರೀತಿಯ ಅಡೆತಡೆಗಳನ್ನು ನಿವಾರಿಸುವುದು, ಕೃಷಿಉತ್ಪನ್ನಗಳಿಗೆ ಸಂಬಂಧಿಸಿದ ಕಮಾಡಿಟಿ ಮಾರುಕಟ್ಟೆ ಮತ್ತು ಡಿರೈವೇಟಿವ್ ಮಾರುಕಟ್ಟೆಗಳನ್ನು ಸುಧಾರಿಸುವುದು ಇವೇ ಮುಂತಾದ ಕಾರ್ಯಗಳಿಗೂ ಸಮಯಾಧಾರಿತ ಗುರಿಗಳ್ನು ನಿಗದಿಮಾಡಲಾಗಿದೆ.

ಕಳೆದ ಶತಮಾನಕ್ಕೆ ಹೋಲಿಸಿದರೆ ಜಗತ್ತಿನಲ್ಲಿ ಒಟ್ಟಾರೆ ಹಿಸಿವು ಮತ್ತು ಅಪೋಷಕತೆಯಿಂದ ಬಳಲುತ್ತಿರುವ ಜನಸಂಖ್ಯೆಯಲ್ಲಿ ಇಳಿಕೆಯಾಗಿದೆಯಾದರೂ, ಇತ್ತೀಚಿನ ಎರಡು ದಶಕದಲ್ಲಿ ಈ ಸಮಸ್ಯೆಯು ನಿರೀಕ್ಷಿಸಿದಷ್ಟು ಕಡಿಮಯಾಗುತ್ತಿಲ್ಲ. ಚಿಂತೆಯ ವಿಷಯವೆಂದರೆ 2015ರಲ್ಲಿ 777 ಮಿಲಿಯನ್ ಇದ್ದ ಅಪೋಷಕತ್ವ ಸಮಸ್ಯೆ ಇರುವ ಜನಸಂಖ್ಯೆ 2016 ರಲ್ಲಿ 815 ಮಿಲಿಯನ್‌ಗೆ ಏರಿಕೆಯಾಗಿದೆ ಮತ್ತು ಇಂದಿಗೂ ಇದೇ ದಿಕ್ಕಿನಲ್ಲಿ ಮುಂದುವರೆದಿದೆ. ಹಲವು ದೇಶಗಳಲ್ಲಿ ಅಂಥ:ಕಲಹ, ಪ್ರಾಕೃತಿಕ ವಿಕೋಪಗಳು ಮುಂತಾದುವುಗಳು ಹೆಚ್ಚಾಗಿರುವುದರಿಂದ, ಈ ಸಂಖ್ಯೆ ಕಡಿಮೆಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಪ್ರಪಂಚದಲ್ಲಿ ಆಹಾರೋತ್ಪನ್ನ ಬೆಳೆಯುತ್ತಿರುವ ಕೃಷಿಕರಲ್ಲಿ ಶೇಕಡ 90 ಭಾಗ ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದು ಇವರು ಒಟ್ಟು ಆಹಾರೋತ್ಪನ್ನದ ಶೇಕಡ 80ರಷ್ಟನ್ನು ಉತ್ಪಾದಿಸುತ್ತಿದ್ದಾರೆ. ಈ ಸಮುದಾಯಕ್ಕೆ ಅಗತ್ಯ ಬಂಡವಾಳ ಒದಗಿಸುವ ಮತ್ತು ಇತರೆ ಕೃಷಿ ಸಂಬಂಧಿ ಪರಿಕರಗಳನ್ನು ಒದಗಿಸುವ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಹಾಗೆಯೇ, ಪೌಷ್ಟಿಕ ಆಹಾರವು ಜನಸಾಮಾನ್ಯರಿಗೆ ಸುಲಭವಾಗಿ ದೊರೆಯುವಂತೆಯೂ ಮಾಡಬೇಕಾಗಿದೆ. ಇಂತಹ

ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕಾದರೆ ಕೃಷಿಕರೇ ಭಾಗವಹಿಸಲು ಸಾಧ್ಯವಾಗುವ, ಪ್ರಜಾಸತ್ತಾತ್ಮಕ ನೆಲೆಯ, ಸ್ವಸಹಾಯ ಮಾದರಿಯ ಸಂಸ್ಥೆಗಳೇ ಸೂಕ್ತ ಎಂಬುದು ಜಗತ್ತಿನ ಬಹುತೇಕ ತಜ್ಞರು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳ ಅಭಿಪ್ರಾಯವಾಗಿದೆ. ಆದುದರಿಂದಲೇ ಹಸಿವು ಮತ್ತು ಅಪೌಷ್ಟಿಕತೆಯನ್ನು ಅಂತ್ಯಗೊಳಿಸುವಲ್ಲಿ ಸಹಕಾರಿ ಸಂಘಗಳ ಸಂಘಟಿತ ಪಾತ್ರ ಬಹು ಮುಖ್ಯವಾಗಿದೆ.

ಹಸಿವಿನ ಅಂತ್ಯ ಸಾಧ್ಯವಾಗಬೇಕಾದರೆ ಸಾಕಷ್ಟು ಆಹಾರ ಲಭ್ಯವಾಗಬೇಕು, ಆಹಾರ ಲಭ್ಯವಾಗಬೇಕಾದರೆ ಕೃಷಿಕ್ಷೇತ್ರ ಸುಸ್ಥಿರತೆ ಸಾಧಿಸಬೇಕು. ಪ್ರಪಂಚದೆಲ್ಲೆಡೆ ಈಗ ಕೃಷಿ ಕ್ಷೇತ್ರ ಸಂಕಷ್ಟ ಎದುರಿಸುತ್ತಿದೆ. ರೈತರು ಬಂಡವಾಳದ ಅಲಭ್ಯತೆ, ಕೃಷಿ ಪರಿಕರಗಳ ಅಸಮರ್ಪಕ ಪೂರೈಕೆ, ಹವಾಮಾನ ವೈಪರೀತ್ಯ ಇತ್ಯಾದಿ ಉತ್ಪಾದನಾ ಪೂರ್ವ ಸಮಸ್ಯೆಗಳನ್ನೂ ಬೆಳೆಗಳ ಏರಿಳಿತ, ಬೆಳೆವಿಮೆಯ ಅಲಭ್ಯತೆ, ಸೂಕ್ತ ಮಾರುಕಟ್ಟೆ ಮತ್ತು ಗೋದಾಮು ವ್ಯವಸ್ಥೆಗಳಲ್ಲಿಲ್ಲದಂತಹ ಉತ್ಪಾದನೋತ್ತರ ಸಮಸ್ಯೆಗಳನ್ನೂ ಎದುರಿಸುತ್ತಿದ್ದಾರೆ. ಇನ್ನೊಂದೆಡೆ, ಆಹಾರ ಅಗತ್ಯವಿರುವ ಜನ ಸೂಕ್ತ ಸಮಯಕ್ಕೆ ಆಹಾರೋತ್ಪನ್ನಗಳು ಲಭ್ಯವಿಲ್ಲದಿರುವುದು, ಉತ್ಪನ್ನಗಳ ಗುಣಮಟ್ಟ, ಬೆಲೆಗಳ ಏರಿಳಿತ ಮುಂತಾದ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಈ ಸಮಸ್ಯೆಗಳು ಹೆಚ್ಚು ಎದ್ದು ಕಾಣುತ್ತಿವೆ. ಹಸಿವಿನ ಸಮಸ್ಯೆಯನ್ನು ಎದುರಿಸುವ ನಿಟ್ಟಿನಲ್ಲಿ ಹಲವು ಸಂಘಟನೆಗಳ ಸಂಚಿತ ಪ್ರಯತ್ನಗಳು ಇಂದಿನ ತುರ್ತು ಅಗತ್ಯ. ಆದರೆ ಸುಸ್ಥಿರ ಅಭಿವೃದ್ಧಿಯ ಈ ಗುರಿಯ ಸಾಧನೆಗೆ ಸಂಯುಕ್ತ ರಾಷ್ಟ್ರ ಸಂಸ್ಥೆ ಗುರುತಿಸಿರುವ ವಿವಿಧ ಅಗತ್ಯಗಳ ಹಿನ್ನೆಲೆಯಲ್ಲಿ ನೋಡಿದಾಗ ಬಹುಷ: ಸಹಕಾರಿ ಸಂಸ್ಥೆಗಳೇ ಈ ಗಂಭೀರ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ಅತ್ಯಂತ ಸೂಕ್ತ ಸಾಂಸ್ಥಿಕ ಪರಿಹಾರಗಳೆಂದು ಅನ್ನಿಸದಿರದು.

ಹಾಗೆ ನೋಡಿದರೆ ಈ ಎರಡನೆ ಗುರಿಯ ಸಾಧನೆ ಬಹುಮೊದಲಿನಿಂದಲೂ ಸಹಕಾರಿ ಸಂಘಟನೆಗಳ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ. "ಕೃಷಿ ಉತ್ಪಾದನೆಯನ್ನು ಮತು ಕೃಷಿ ಆದಾಯವನ್ನು ಹೆಚ್ಚಿಸುವುದು, ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿ, ಕೃಷಿ ಸಂಬಂಧಿತ ಮಾರುಕಟ್ಟೆ ಮತ್ತು ಇತರ ಸವಲತ್ತುಗಳು ಮತ್ತು ವಿಶೇಷವಾಗಿ ಇವು ಸಣ್ಣ ಮತ್ತು ಅತಿ ಸಣ್ಣ ಕೃಷಿಕರಿಗೆ ದೊರೆಯುವಂತಾಗಬೇಕೆಂಬ" ಗುರಿಯನ್ನೇ ಸಹಕಾರಿ ಸಂಘಟನೆಗಳು ಹಿಂದಿನಿಂದಲೂ ತಮ್ಮ ಗುರಿಯನ್ನಾಗಿಸಿಕೊಂಡಿವೆ. ಅಂತೆಯೇ ಪ್ರಪಂಚದಾದ್ಯಂತ ಇರುವ ಸಹಕಾರಿ ಸಂಘಟನೆಗಳಲ್ಲಿ ಬಹುಭಾಗ ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಗಮನಿಸುತ್ತೇವೆ.

ಸಾಂಸ್ಥಿಕ ಮೌಲ್ಯಗಳು, ಅನುಭವ ಮತು ಪರಿಣಿತಿ ಈ ಎಲ್ಲವನ್ನೂ ಗಮನಿಸಿದಾಗ ಹಸಿವಿನ ಅಂತ್ಯವನ್ನು ಸಾಧ್ಯವಾಗಿಸಬೇಕಾದರೆ ಸಹಕಾರಿ ಸಂಘಗಳ ಮೂಲಕ ಮಾತ್ರವೇ ಸಾಧ್ಯ ಎನ್ನುವ ಪರಿಸ್ಥಿತಿ ಇದೆ. "ಒಂದು ದಿನದ ಊಟ ಕೊಡುವುದರಿಂದ ಹಸಿವನ್ನು ಅಂತ್ಯಮಾಡಲು ಸಾಧ್ಯವಿಲ್ಲ, ಬದಲಿಗೆ ದಿನದ ಆಹಾರ ಗಳಿಸುವ ಸಾಮರ್ಥ್ಯ ನೀಡಿದಾಗ ಹಸಿವಿನ ಅಂತ್ಯವಾಗುತ್ತದೆ" ಎನ್ನುವ ಸತ್ಯವನ್ನು ನಮ್ಮ ಸಹಕಾರಿ ಸಂಘಗಳು ಅರಿತು, ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಬೇಕಿದೆ. ಈ ಕಠಿಣ ಕಾರ್ಯ ಕೇವಲ ಕೃಷಿ ಪತ್ತಿನ ಸಹಕಾರ ಸಂಘಗಳು ಅಥವ ಮಾರುಕಟ್ಟೆ ಸಹಕಾರಿ ಸಂಘಗಳಿಂದ ಮಾತ್ರ ಸಾಧ್ಯವಾಗುವಂತಹುದಲ್ಲ. ಎಲ್ಲ ರೀತಿಯ ಸಹಕಾರಿ ಸಂಸ್ಥೆಗಳ – ಸಹಕಾರಿ ಸಂಘಗಳ ನಡುವಿನ ಸಹಕಾರದಿಂದ ಮಾತ್ರವೇ ಇದು ಸಾಧ್ಯ. ಈ ನಿಟ್ಟಿನಲ್ಲಿ ನಮ್ಮ ಸಹಕಾರಿ ಸಂಘಟನೆಗಳು ಈ ಕೆಳಗಿನಂತೆ ಕಾರ್ಯೋನ್ಮುಖವಾಗಬಹುದಾಗಿದೆ.

1. ಮೊಟ್ಟ ಮೊದಲನೆಯದಾಗಿ ದೇಶದ ಎಲ್ಲೆಡೆ ಕೃಷಿ ಸಹಕಾರಿಸಂಘಗಳನ್ನು ಸಧೃಡವಾಗುವಂತೆ ಮಾಡಬೇಕಿದೆ.

ಇದರಲ್ಲಿ ರಾಜ್ಯ ಸರಕಾರಗಳು ಮತ್ತು ಸಹಕಾರಿ ಮಹಾಮಂಡಳಗಳ ಪಾತ್ರ ಮಹತ್ತರವಾದುದು. ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ನಿರತವಾದ ಸಹಕಾರಿ ಸಂಸ್ಥೆಗಳಿಗೆ ಅಗತ್ಯ ಕಾರ್ಯ ಸ್ವಾತಂತ್ರ ನೀಡುವುದು, ಅವುಗಳ ವ್ಯವಹಾರಕ್ಕೆ ಪೂರಕ ಪರಿಸರ ನಿರ್ಮಿಸುವುದು, ಇಂತಹ ಸಹಕಾರ ಸಂಘಗಳ ಸಿಬ್ಬಂದಿಗೆ ಅಗತ್ಯ ತಾಂತ್ರಿಕ ತರಬೇತಿ ನೀಡುವುದು ಇತ್ಯಾದಿಗಳನ್ನು ತ್ವರಿತವಾಗಿ ಮಾಡಬೇಕಾಗಿದೆ.

2. ಕೃಷಿ ಸಹಕಾರಿ ಸಂಘಗಳು ಕೃಷಿಕ ಸದಸ್ಯರ ಎಲ್ಲ ಅಗತ್ಯಗಳನ್ನು ಪೂರೈಸುವಂತೆ ವೈವಿಧ್ಯ ಚಟುವಟಿಕೆಗಳನ್ನು ಆರಂಭಿಸಬೇಕು. ಎಂದರೆ ಪ್ರತಿ ಕೃಷಿ ಸಹಕಾರಿ ಸಂಘವು ವಿವಿಧೋದ್ದೇಶ ಸಹಕಾರಿ ಸಂಘದಂತೆ ಕಾರ್ಯ ನಿರ್ವಹಿಸಬೇಕು.

3. ಒಂದು ಪ್ರದೇಶದಲ್ಲಿರುವ ವಿವಿಧ ಸಹಕಾರಿ ಸಂಘಗಳು ಪರಸ್ಪರ ಸಹಕಾರದಿಂದ ಸದಸ್ಯರ ಅಗತ್ಯಗಳನ್ನು ಪೂರೈಸಲು ಕಾರ್ಯಕ್ರಮ ರೂಪಿಸಬೇಕು. ಉದಾಹರಣೆಗೆ ರೈತ ಕುಟುಂಬಗಳು ಕೃಷಿಪತ್ತಿನ ಸಹಕಾರಿ ಸಂಘ, ಕೃಷಿ ಉತ್ಪನ್ನ ಮಾರಾಟ ಸಹಕಾರಿ ಸಂಘ, ಹಾಲು ಉತ್ಪಾದಕ ಸಹಕಾರಿ ಸಂಘ, ಹೀಗೆ ಹಲವು ಸಹಕಾರಿ ಸಂಘಗಳ ಸದಸ್ಯರಾಗಿರುತ್ತವೆ. ಈ ಎಲ್ಲ ಸಹಕಾರಿ ಸಂಘಗಳು ಪರಸ್ಪರ ಸಹಕರಿಸುವುದರಿಂದ ಈ ಸದಸ್ಯ ಕುಟುಂಬಗಳಿಗೆ ನೆರವು ನೀಡುವುದು ಸುಲಭವಾಗುತ್ತದೆ.

4. ಕೃಷಿಕರು ತಮ್ಮ ಕೃಷಿ ಚಟುವಟಿಕೆಗಳ ಜೊತೆಗೇ ಕಡಿಮೆ ಅವಧಿಯಲ್ಲಿ ಆದಾಯ ನೀಡುವ ಇತರ ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ – ಉದಾಹರಣೆಗೆ ಹೈನುಗಾರಿಕೆ, ಜೇನುಸಾಕಣೆ, ಹಣ್ಣು/ತರಕಾರಿಗಳನ್ನು ಬೆಳೆಯುವುದು, ಕೃಷಿ ಉತ್ಪನ್ನಗಳ ಮೌಲ್ಯ ವೃದ್ಧಿ ಚಟುವಟಿಕೆಗಳು ಇತ್ಯಾದಿ – ತೊಡಗಲು ಅಗತ್ಯವಾದ ನೆರವನ್ನು ಸಹಕಾರಿ ಸಂಘಗಳು ನೀಡಬಹುದು.

5. ಕೃಷಿಯ ಉತ್ಪಾದಕತೆಯನ್ನು ವೃದ್ಧಿಸುವುದು ಅತ್ಯಂತ ಮುಖ್ಯ ಅಗತ್ಯ. ಈ ನಿಟ್ಟಿನಲ್ಲಿ ಸಹಕಾರಿ ಸಂಘಗಳು ಉತ್ತಮ ಬೀಜ, ಗೊಬ್ಬರ ಮುಂತಾದ ಪರಿಕರಗಳನ್ನು ಕ್ಲುಪ್ತ ಸಮಯದಲ್ಲಿ ದೊರೆಯುವಂತೆ ಮಾಡುವುದು, ಕೃಷಿಕರಿಗೆ ಅಗತ್ಯ ತಾಂತ್ರಿಕ ಮಾಹಿತಿ/ಪರಿಣಿತಿ ನೀಡಲು ಕಾರ್ಯಕ್ರಮ ರೂಪಿಸುವುದು, ಕೃಷಿ ಚಟುವಟಿಕೆಗಳ ವೆಚ್ಚ ಕಡಿಮೆಯಾಗುವಂತೆ ಕೃಷಿಕ ಸದಸ್ಯರು ಕೃಷಿ ಪರಿಕರಗಳನ್ನು ಸಾಮೂಹಿಕ ನೆಲೆಯಲ್ಲಿ ಉಪಯೋಗಿಸುವಂತಹ ಯೋಜನೆಗಳನ್ನು ರೂಪಿಸುವುದು ಮುಂತಾದುವುಗಳನ್ನು ಆದ್ಯತೆಯ ಮೇಲೆ ನಡೆಸಬೇಕು.

6. ಆಹಾರದ ಅಲಭ್ಯತೆಯ ಸಮಸ್ಯೆಗಿಂತ ಪ್ರಮುಖವಾದುದು ಆಹಾರದ ಪೌಷ್ಟಿಕತೆಯ ಸಮಸ್ಯೆ. ಬಡವರ, ಅದರಲ್ಲೂ ಗ್ರಾಮೀಣ ಭಾಗದ ಬಡವರು ಉಪಯೋಗಿಸುವ ಆಹಾರದಲ್ಲಿ ಅಗತ್ಯ ಪೌಷ್ಟಿಕಾಂಶಗಳು ಇರುವಂತೆ ಮಾಡುವಲ್ಲಿ ಸಹಕಾರಿ ಸಂಘಗಳು ಮಹತ್ತರ ಪಾತ್ರ ನಿರ್ವಹಿಸಬಹುದು. ಉದಾಹರಣೆಗೆ ಸ್ಥಳೀಯವಾಗಿ ದೊರೆಯುವ ಪೌಷ್ಟಿಕ ಆಹಾರೋತ್ಪನ್ನಗಳನ್ನು ಗುರುತಿಸಿ ಅವುಗಳ ಸೇವನೆಯನ್ನು ಉತ್ತೇಜಿಸುವುದು, ಹಾಲು, ಮೊಸರು, ಹಣ್ಣು ಇತ್ಯಾದಿಗಳು ಸುಲಭ ಬೆಲೆಯಲ್ಲಿ ಸಿಗುವಂತೆ ಸಹಕಾರಿ ಮಾದರಿಯ ಉತ್ಪಾದನೆ ಮತ್ತು ಮಾರಾಟ ಚಟುವಟಿಕೆ ನಡೆಸುವುದು ಇತ್ಯಾದಿ. ನಮ್ಮ ನೆರೆಯ ಬಡ ರಾಷ್ಟ್ರವಾದ ಬಾಂಗ್ಲಾದೇಶದಲ್ಲಿ ಗ್ರಾಮೀಣ್ ಬ್ಯಾಂಕ್‌ನ ನೇತೃತ್ವದಲ್ಲಿ ನಡೆಯುತ್ತಿರುವ ಇಂತಹ ಕಾರ್ಯಕ್ರಮದಿಂದಾಗಿ ಅಲ್ಲಿಯ ಗ್ರಾಮೀಣ ಪ್ರದೇಶದಲ್ಲಿ ಅಪೌಷ್ಟಿಕತೆಂ ು ಪ್ರಮಾಣ ಕಡಿಮೆಯಾಗಿರುವುದನ್ನು ಮಾದರಿಯಾಗಿ ತೆಗೆದುಕೊಳ್ಳಬಹುದಾಗಿದೆ.

7. ಸಹಕಾರಿ ಸಂಘಗಳು ಅದರಲ್ಲೂ ಕೃಷಿ ಸಹಕಾರಿ ಸಂಘಗಳು ಪ್ರಾಕೃತಿಕ ಕೃಷಿ ಪದ್ಧತಿಗೆ ಉತ್ತೇಜನ ಕೊಡುವಂತಹ ಯೋಜನೆಗಳನ್ನು ರೂಪಿಸುವುದು. ಉದಾಹರಣೆಗೆ ಸಾವಯವ ಗೊಬ್ಬರದ ಮಾರಾಟ, ಸ್ಥಳೀಯವಾಗಿ ಅಭಿವೃದ್ಧಿ ಪಡಿಸಿದ ಬೀಜಗಳ ಮಾರಾಟ, ನೈಸರ್ಗಿಕ ಕೃಷಿ ಮಾಡುವವರಿಗೆ ಕಡಿಮೆ ಬಡ್ಡಿಯ ಸಾಲ ನೀಡಿಕೆ, ನೈಸರ್ಗಿಕ ಕೃಷಿಯ ಮೂಲಕ ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಒದಗಿಸುವುದು ಇತ್ಯಾದಿಗಳನ್ನು ಮಾಡಬಹುದು.

8. ತರಕಾರಿ, ಹಣ್ಣು ಮುಂತಾದ ಬೆಳೆಗಳನ್ನು ಸಂಸ್ಕರಿಸಿ, ಮೌಲ್ಯ ವೃದ್ಧಿಗೊಳಿಸಿ ಮಾರಲು ಅನುವಾಗುವಂತೆ ಸಂಸ್ಕರಣ ಘಟಕಗಳನ್ನು ಆರಂಭಿಸುವುದು ಅಥವ ಅಂತಹ ಘಟಕಗಳನ್ನು ಆರಂಭಿಸಲು ಸ್ಥಳೀಯರಿಗೆ ಉತ್ತೇಜನ ನೀಡುವುದು.

9. ಕೃಷಿಯಲ್ಲಿ ತಂತ್ರಜ್ಞಾನದ ಬಳಕೆಗೆ ಅನುವು ಮಾಡಿಕೊಡಲು ಅಂತಹ ತಂತ್ರಜ್ಞಾನ ಖರೀದಿಸ ಬಯಸುವ ರೈತರಿಗೆ ಸಹಾಯ ಯೋಜನೆಗಳನ್ನು ರೂಪಿಸುವುದು ಮತ್ತು/ಅಥವ ಅಂತಹ ತಂತ್ರಜ್ಞಾನವನ್ನು ಸಹಕಾರಿ ಸಂಘವೇ ಖರೀದಿಸಿ (ಉದಾಹರಣೆಗೆ ಟಿಲ್ಲರ್, ಟ್ರಾಕ್ಟರ್, ಸಸಿನೆಡುವ ಯಂತ್ರ, ಕಳೆಕೀಳುವ ಯಂತ್ರ, ಕಟಾವು ಯಂತ್ರ ಹೀಗೆ) ಅದನ್ನು ರೈತ ಸದಸ್ಯರಿಗೆ ಬಾಡಿಗೆಯ ಆಧಾರದಲ್ಲಿ ಉಪಯೋಗಿಸಲು ನೀಡುವುದು.

10. ಶೀತಲ ಗೋದಾಮುಗಳಂತಹ ಅತ್ಯಂತ ಅಗತ್ಯದ ಮೂಲ ಪರಿಕರಗಳನ್ನು ಒದಗಿಸಲು ಪ್ರಯತ್ನಿಸುವುದು.

11. ಕೃಷಿಕರ ಸಹಾಯಕ್ಕಾಗಿ/ಉಪಯೋಗಕ್ಕಾಗಿ ಸರಕಾರ, ಬ್ಯಾಂಕುಗಳು, ವಿಮಾ ಕಂಪನಿಗಳು ಅಥವ ಇನ್ನಾವುದೇ ವ್ಯವಹಾರ ಸಂಸ್ಥೆಗಳು ಆರಂಭಿಸುವ ಯೋಜನೆಗಳ ಲಾಭವನ್ನು ಸದಸ್ಯರಿಗೆ ತಲುಪಿಸಲು ಅನುವಾಗುವಂತೆ ಮತ್ತು ಸಂಘಕ್ಕೆ ಆದಾಯ ಗಳಿಕೆಯೂ ಆಗುವಂತೆ, ಅಂತಹ ಯೋಜನೆಗಳ ಏಜೆನ್ಸಿಗಳನ್ನು ಪಡೆದು ಸೇವೆಗಳನ್ನು ಒದಗಿಸಬಹುದು.

ಆಹಾರೋತ್ಪಾದನೆಯ ಪ್ರಮಾಣ ಹೆಚ್ಚಾಗಬೇಕಿದೆ. ಈ ಆಹಾರೋತ್ಪಾದನೆಯನ್ನು ಜನರ ಆರೋಗ್ಯ ಮತ್ತು ಕೊಳ್ಳುವ ಶಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಿದೆ. ಬೆಳೆದ ಆಹಾರವನ್ನು ಕ್ಲುಪ್ತ ಸಮಯದಲ್ಲಿ ಅಗತ್ಯವಿರುವ ಜನಸಮುದಾಯಕ್ಕೆ ತಲುಪಿಸಬೇಕಾಗಿದೆ. ಜನರ ಆಹಾರ ಸೇವನೆಯು ಪೌಷ್ಟಿಕತೆಯ ಅಗತ್ಯಗಳ ಅನುಸಾರ ನಡೆಯುವಂತೆ ಮಾಡಬೇಕಿದೆ. ಈ ಎಲ್ಲವನ್ನೂ ಇಂದಿನ ಅಗತ್ಯಾನುಸಾರ ಮಾಡುವುದು ಸರಕಾರಿ ಸಂಸ್ಥೆಗಳಿಗಾಗಲೀ, ಖಾಸಗೀ ಸಂಸ್ಥೆಗಳಿಗಾಗಲೀ ಪೂರ್ಣವಾಗಿ ಸಾಧ್ಯವಿಲ್ಲ. ಸಹಕಾರಿ ಕ್ಷೇತ್ರದ ಪೂರ್ಣ ಸಹಕಾರವಿದ್ದಲ್ಲಿ ಮಾತ್ರವೇ 2030ರೊಳಗೆ ಹಸಿವು ಮತ್ತು ಅಪೌಷ್ಟಿಕತೆಯ ಸಮಸ್ಯೆಯ ಪರಿಹಾರಕ್ಕೆ ನಿಗದಿಯಾದ ಗುರಿಯನ್ನು ತಲುಪುವುದು ಸಾಧ್ಯ.

# ಎಸ್‌ಡಿಜಿ 3 – ಆರೋಗ್ಯ ಮತ್ತು ಪುರೋಭಿವೃದ್ಧಿ

ಆರೋಗ್ಯವಂತ ಜೀವನವನ್ನು ಖಚಿತಪಡಿಸುವುದು ಮತ್ತು ಎಲ್ಲ ವಯಸ್ಸಿನ ಎಲ್ಲ ಜನರ ಪುರೋಭಿವೃದ್ಧಿಯನ್ನು ಉತ್ತೇಜಿಸುವುದು (Ensure healthy lives and promote well-being for all at all ages) ಸುಸ್ಥಿರ ಅಭಿವೃದ್ಧಿ ಪ್ರಕ್ರಿಯೆಯ ಒಂದು ಪ್ರಮುಖ ಒತ್ತಾಸೆಯಾಗಿದೆ. ಉತ್ತಮ ಆರೋಗ್ಯ ಮನುಷ್ಯನ ಅತ್ಯಮೂಲ್ಯ ಆಸ್ತಿಗಳಲ್ಲಿ ಒಂದೆನ್ನಬಹುದು. ಆರೋಗ್ಯವಂತ ಜನರು ಅವರ, ಅವರ ಕುಟುಂಬದ ಮತ್ತು ಸಮಾಜದ ವಿವಿಧ ಅಗತ್ಯಗಳಿಗೆ ಸ್ಪಂದಿಸುವುದು ಸಾಧ್ಯ. ಆದುದರಿಂದಲೇ ಜಾಗತಿಕ ಮಟ್ಟದಲ್ಲಿ ವಿವಿಧ ಬಗೆಯ ಸಮಸ್ಯೆಗಳನ್ನು ನಿರ್ಮೂಲನೆ ಮಾಡಲು ಮತ್ತು ಸಾರ್ವತ್ರಿಕ ಶಾಂತಿಯನ್ನು ಬಲಪಡಿಸಲು ಆರೋಗ್ಯವಂತ ಜನಸಮುದಾಯದ ಅಗತ್ಯವಿದೆ. ಬಡತನ ಮತ್ತು ಹಸಿವಿನ ನಿರ್ಮೂಲನೆಯ ಜೊತೆಗೆ ಉತ್ತಮ ಆರೋಗ್ಯವು ಲಿಂಗ ತಾರತಮ್ಯ ವಿಲ್ಲದೆ ಎಲ್ಲ ಪ್ರದೇಶದ, ಎಲ್ಲ ವಯಸ್ಸಿನ ಎಲ್ಲ ಜನರಿಗೆ ದೊರೆಯಬೇಕೆಂಬುದು ಎಸ್‌ಡಿಜಿ 3 ರ ಆಶಯವಾಗಿದೆ. ಈ ಗುರಿಯು ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯದ ರಕ್ಷಣೆಯ ಮೂಲಕ ಅವರ ಜೀವಿತಾವಧಿಯನ್ನು ವಿಸ್ತರಿಸುವ ಉದ್ದೇಶ ಹೊಂದಿದೆ. ಗುಣಮಟ್ಟದ ಅರೋಗ್ಯ ಸೇವೆಗಳ ಲಭ್ಯತೆ, ಜೀವ ರಕ್ಷಕ ಮತ್ತು ಆರೋಗ್ಯ ಕವಚ ಒದಗಿಸಬಲ್ಲ ಲಸಿಕೆಗಳು ಎಲ್ಲ ಜನರಿಗೂ ಒದಗುವಂತೆ ಮಾಡುವುದು, ಕೈಗೆಟಕುವ ದರದಲ್ಲಿ ಔಷಧಿಗಳು ದೊರೆಯುವಂತೆ ಮಾಡುವುದು, ಹೀಗೆ ಸಾರ್ವತ್ರಿಕ ಆರೋಗ್ಯ ರಕ್ಷಣೆಯನ್ನು ಸಾಧಿಸುವತ್ತ ಈ ಗುರಿಯು ಒತ್ತು ನೀಡುತ್ತದೆ.

2030ರ ವೇಳೆಗೆ ಜಗತ್ತಿನಾದ್ಯಂತ ಮತ್ತು ವಿಶೇಷವಾಗಿ ಬಡ ದೇಶಗಳಲ್ಲಿ ನವಜಾತ ಮಕ್ಕಳ ಮತ್ತು ಬಾಣಂತಿಯರ ಸಾವನ್ನು ನಿಯಂತ್ರಿಸಿ ಪ್ರತಿ ಒಂದು ಲಕ್ಷದಲ್ಲಿ 70ಕ್ಕಿಂತ ಹೆಚ್ಚು ಸಾವು ಸಂಭವಿಸದಂತೆ ತಡೆಯಬೇಕೆಂದು ಈ ಗುರಿಯು ನಿಗದಿಪಡಿಸಿದೆ. ಯಾವುದೇ ಆರ್ಥಿಕ, ಸಾಮಾಜಿಕ ಅಥವ ಧಾರ್ಮಿಕ ಅಂಶಗಳ ಆಧಾರದಲ್ಲಿ ತಾರತಮ್ಯವಿಲ್ಲದೆ ಪ್ರತಿಯೊಬ್ಬರಿಗು ಕುಟುಂಬ ಯೋಜನೆ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಕುರಿತ ಮಾಹಿತಿ ಮತ್ತು ಜ್ಞಾನ ನೀಡಿಕೆ ಅಗತ್ಯವೆಂದೂ ಈ ಗುರಿಯು ವಿಧಿಸುತ್ತದೆ. ಸಾಂಕ್ರಾಮಿಕ ರೋಗಗಳ ವಿರುದ್ಧ ರಕ್ಷಣೆ ಮತ್ತು ಅಂತಹ ರೋಗಗಳು ಹರಡದಂತೆ ಮಾಡಲು ಸರಕಾರಗಳು ಮತ್ತು ವಿವಿಧ ಸಂಘಟನೆಗಳು ನಿರ್ವಹಿಸಬೇಕಾದ ಪಾತ್ರ, ಹಾಗೂ ಸಾಂಕ್ರಾಮಿಕವಲ್ಲದ ಆದರೆ ಜೀವಹಾನಿಗೆ ಕಾರಣವಾಗಬಲ್ಲ ಎಚ್‌ಐವಿ/ಏಡ್ಸ್, ಕ್ಯಾನ್ಸರ್, ಮಧುಮೇಹ ಮುಂತಾದ ಕಾಯಿಲೆಗಳನ್ನು ತಡೆಯುವ ಬಗೆಗಿನ ಕಾರ್ಯತಂತ್ರಗಳ ಬಗ್ಗೆಯೂ ಗುರಿಗಳನ್ನು ನಿಗದಿಮಾಡಲಾಗಿದೆ. ಹಾಗೆಯೇ ಆರೋಗ್ಯಕ್ಕೆ ಹಾನಿಕಾರಕವಾದ ಧೂಮಪಾನ, ಮಧ್ಯಪಾನ ಮತ್ತು ಪ್ರಮುಖವಾಗಿ ಮಾದಕದ್ರವ್ಯಗಳ ಸೇವನೆಗಳನ್ನು ತಡೆಗಟ್ಟಲು ಕ್ರಮ ತೆಗದೆದುಕೊಳ್ಳುವ ಬಗ್ಗೆಯೂ ಈ ಗುರಿಯಲ್ಲಿ ಗಮನಹರಿಸಲಾಗಿದೆ.

ಆರೋಗ್ಯ ಸಮಸ್ಯೆ ವಿವಿಧ ದೇಶಗಳ ಸುಸ್ಥಿರ ಅಭಿವೃದ್ಧಿಯಲ್ಲಿ ದೊಡ್ಡ ತೊಡಕಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಕಳೆದ ಒಂದೆರಡು ದಶಕಗಳಲ್ಲಿ ಜಗತ್ತಿನ ಸರಾಸರಿ ಆರೋಗ್ಯ ಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆಯಾಗಿದ್ದರೂ ವಿವಿಧ ದೇಶಗಳ ನಡುವೆ ಮತ್ತು ಹಲವು ದೇಶಗಳಲ್ಲಿ ವಿವಿಧ ಪ್ರದೇಶಗಳ ನಡುವೆ ಆರೋಗ್ಯ ಸ್ಥಿತಿ ಮತ್ತು ಆರೋಗ್ಯ ಪರಿಕರಗಳ ಲಭ್ಯತೆಯ ವಿಷಯದಲ್ಲಿ ಸಾಕಷ್ಟು ಅಂತರವಿರುವುದು ಒಂದು ದೊಡ್ಡ ಸವಾಲಾಗಿದೆ. ಈ ಸವಾಲನ್ನು ಮೀರಿ ಸಾರ್ವತ್ರಿಕ ಆರೋಗ್ಯ ಕವಚವೊಂದನ್ನು ನಿರ್ಮಿಸಬೇಕಾದರೆ ವ್ಯಕ್ತಿಗಳು ಮತ್ತು ಸಂಸ್ಥೆಗಳು ಪರಸ್ಪರ ಸಹಕಾರದಿಂದ ಕಾರ್ಯ ನಿರ್ವಹಿಸುವುದು ಅಗತ್ಯ. "ಸಹಕಾರವೇ ಆರೋಗ್ಯ ರಕ್ಷಣೆಯ ಮೂಲ ಮಂತ್ರ" ಎಂದು ಜಾಗತಿಕ ಆರೋಗ್ಯ

ಸಂಸ್ಥೆಯು ಅಭಿಪ್ರಾಯ ಪಟ್ಟಿರುವುದು ಈ ಹಿನ್ನೆಲೆಯಲ್ಲಿಯೇ.

**ಸಹಕಾರಿ ಸಂಘಟನೆಗಳ ಪಾತ್ರ :**

ಐಸಿಎ ಮತ್ತು ಯುರಿಕ್ ಸಂಸ್ಥೆಗಳ ಸಹಯೋಗದಲ್ಲಿ 2018ರಲ್ಲಿ ನಡೆದ ಅಧ್ಯಯನವೊಂದರ ಪ್ರಕಾರ ಕಳೆದ ಎರಡು ದಶಕಗಳಲ್ಲಿ ಜಗತ್ತಿನಾದ್ಯಂತ ಆರೋಗ್ಯ ಸಹಕಾರ ಸಂಘಗಳು ವೇಗವಾಗಿ ಬೆಳೆಯುತ್ತಿರುವುದು ಗಮನಕ್ಕೆ ಬಂದಿದೆ. ಇದು ಸರಕಾರೀ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳಿಗೆ ಪೂರಕವಾಗಿ ಮತ್ತು ಹಲವೆಡೆ ಪರ್ಯಾಯವಾಗಿ ಜನರು ಸ್ವಸಹಾಯ ನೆಲೆಯಲ್ಲಿ ಆರೋಗ್ಯ ರಕ್ಷಣೆಯ ಬಗ್ಗೆ ವಹಿಸುತ್ತಿರುವ ಕಾಳಜಿ ಮತ್ತು ಆರೋಗ್ಯ ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸಲು ಇರುವ ಅವಕಾಶಗಳನ್ನು ತೋರಿಸುತ್ತದೆ. ಹಾಗೆಯೇ ಆರೋಗ್ಯ ಸೇವೆಗಳಿಗೆ ಇರುವ ಬೇಡಿಕೆ ಹೆಚ್ಚುತ್ತಿರುವುದರಿಂದ ಹಾಲಿ ಇರುವ ಆರೋಗ್ಯ ರಕ್ಷಣಾ ಸಂಸ್ಥೆಗಳು ಅಗತ್ಯ ಸೇವೆಗಳನ್ನು ಎಲ್ಲರಿಗೂ ಒದಗಿಸಲು ಸಾಧ್ಯವಿಲ್ಲ ಎನ್ನುವುದೂ ಅರಿವಿಗೆ ಬರುತ್ತದೆ. ಭಾರತದಂತಹ ದೇಶದಲ್ಲಿ ಒಂದೆಡೆ ಸರಕಾರೀ ಆಸ್ಪತ್ರೆಗಳ ಅವ್ಯವಸ್ಥೆ, ಇನ್ನೊಂದೆಡೆ ಖಾಸಗಿ ಆಸ್ಪತ್ರೆಗಳಲ್ಲಿನ ಅಧಿಕ ವೆಚ್ಚ ಇವುಗಳನ್ನು ಗಮನಿಸಿದಾಗ ಸಹಕಾರಿ ಮಾದರಿಯ ಆರೋಗ್ಯ ಸೇವೆಯನ್ನು ಆರಂಭಿಸಲು ದೊಡ್ಡ ಅವಕಾಶವಿರುವುದು ಸ್ಪಷ್ಟವಾಗುತ್ತದೆ.

2001ರ ನಂತರ ಅದರಲ್ಲೂ ವಿಶೇಷವಾಗಿ 2007–08ರ ಆರ್ಥಿಕ ಕುಸಿತದ ನಂತರ ಹಲವಾರು ದೇಶಗಳಲ್ಲಿ ವೈದ್ಯಕೀಯ ಸೇವೆಗೆ ಸಹಕಾರಿ ಮಾರ್ಗವನ್ನು ಅನುಸರಿಸುವುದು ಹೆಚ್ಚಾಗಿದ್ದು, ಇಂದು ಅನೇಕ ದೇಶಗಳಲ್ಲಿ ವೈದ್ಯಕೀಯ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವು ಕೆಲವೆಡೆ ವೈದ್ಯರ ಸಹಕಾರಿ ಸಂಘದ ರೂಪದಲ್ಲಿದ್ದರೆ, ಇನ್ನು ಕೆಲವೆಡೆ ವೈದ್ಯಕೀಯ ಕೆಲಸಗಾರರ ಸಹಕಾರಿ ಸಂಘವಾಗಿ ಮತ್ತು ಹಲವೆಡೆ ವೈದ್ಯರು, ವೈದ್ಯಕೀಯ ಕಾರ್ಮಿಕರು ಮತ್ತು ಸಾರ್ವಜನಿಕರು ಒಟ್ಟಾಗಿ ಕಟ್ಟಿಕೊಂಡಿರುವ ಸಹಕಾರಿ ಸಂಘಗಳಾಗಿವೆ. ಉದಾಹರಣೆಗೆ ಬ್ರೆಜಿಲ್‌ನಲ್ಲಿ ವೈದ್ಯರ ಸಹಕಾರಿ ಮಾದರಿ ವ್ಯಾಪಕವಾಗಿದೆ. ಯುನಿಡೊಮೆಡ್ ಡೊ ಬ್ರೆಸಿಲ್ 1,14,000 ವೈದ್ಯ ಸದಸ್ಯರನ್ನು, ಸುಮಾರು ಒಂದು ಲಕ್ಷದಷ್ಟು ಕೆಲಸಗಾರರನ್ನು ಹೊಂದಿದ್ದು, 18 ಮಿಲಿಯನ್ ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ. ಆಸ್ಟ್ರೇಲಿಯಾದ ರಾಷ್ಟ್ರೀಯ ಆರೋಗ್ಯ ಸಹಕಾರಿ ಸಂಸ್ಥೆಯು ವೈದ್ಯಕೀಯ ಕಾರ್ಮಿಕರ ಸಹಕಾರಿ ಸಂಘವಾಗಿದ್ದು, ಇದು ಶ್ರಮಿಕ ಸಮುದಾಯಕ್ಕೆ ಕೈಗೆಟಕುವ ದರಗಳಲ್ಲಿ ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ. ಇದು ಕ್ಯಾನ್ಬೆರ ಪ್ರದೇಶದ ಅತಿದೊಡ್ಡ ವೈದ್ಯಕೀಯ ಸೇವೆಗಳ ಪೂರೈಕೆದಾರ ಸಂಸ್ಥೆಯಾಗಿದ್ದು ವರ್ಷಕ್ಕೆ ಸುಮಾರು 43,000 ರೋಗಿಗಳಿಗೆ ಸೇವೆ ಒದಗಿಸುತ್ತಿದೆ. ಲೆಸೊಥೋದಲ್ಲಿ ಗ್ರಾಮೀಣ ಆರೋಗ್ಯ ಕಾರ್ಮಿಕರ ಸಹಕಾರಿ ಸಂಘವು ಹಲವು ಉಳಿತಾಯ ಮತು ಸಾಲ ಯೋಜನೆಗಳ ಮೂಲಕ ಗ್ರಾಮೀಣ ಪ್ರದೇಶಗಳ ಕಡಿಮೆ ಆದಾಯ ವರ್ಗದ ಜನರಿಗೆ ಮೂಲಭೂತ ಆರೋಗ್ಯ ಸೇವೆಗಳನ್ನು ತಲುಪಿಸುವ ಕೆಲಸದಲ್ಲಿ ನಿರತನಾಗಿದೆ.

ಆರೋಗ್ಯ ಸೇವೆಗೆ ಸಂಬಂಧಿಸಿದಂತೆ ಇರುವ ಇನ್ನೊಂದು ಪ್ರಮುಖ ಸಹಕಾರಿ ಮಾದರಿ ಎಂದರೆ ಆಂಬುಲೆನ್ಸ್ ಸಹಕಾರಿ ಸಂಘಗಳು. ಈ ಪ್ರಕಾರದ ಸಹಕಾರಿ ಸಂಘದ ಉತ್ತಮ ಉದಾಹರಣೆ ಎಂದರೆ ಕೆನಡದ ಕ್ವಿಬೆಕ್ ಪ್ರದೇಶದಲ್ಲಿರುವ 'ಲಾ ಕೋಆಪರೇಟಿವ್ ಡೆಸ್ ಟೆಕ್ನಿಷಿಯನ್ಸ್ ಆಂಬುಲಾನ್ಸಿಯರ್ಸ್ ಡು ಕ್ವಿಬೆಕ್. 1980ರಲ್ಲಿ ಹಲವು ಖಾಸಗಿ ಸಂಸ್ಥೆಗಳು ಪುನರ್‌ಸಂಘಟಿಸಲ್ಪಟ್ಟಾಗ ಕಾರ್ಮಿಕರು ಸೇರಿ ರಚಿಸಿದ ಈ ಸಹಕಾರಿ ಸಂಘ ಇಂದು ಕೆನೆಡ ದೇಶದ ಅತ್ಯಂತ ಪ್ರತಿಷ್ಠಿತ ಆಂಬುಲೆನ್ಸ್ ಸೇವಾ ಸಂಸ್ಥೆಯಾಗಿದೆ. ಈ ಸಹಕಾರಿ ಸಂಘವು ಕಾರ್ಮಿಕ ಸಹಕಾರಿ ಸಂಘವಾಗಿರುವುದರಿಂದ ಸದಸ್ಯರೇ ಕೆಲಸಗಾರರಾಗಿ ನಡೆಸಿಕೊಂಡು ಬರುತ್ತಿರುವ ಉತ್ತಮ ಸಹಕಾರಿ ಮಾದರಿಯಾಗಿದೆ.

ಔಷಧೀಯ ಸಹಕಾರಿ ಸಂಘಗಳು (ಫಾರ್ಮಸಿಟಿಕಲ್ ಕೋಆಪರೇಟಿವ್ಸ್), ಆರೋಗ್ಯ ಸೇವೆಗೆ ಸಂಬಂಧಿಸಿದಂತೆ

ಯೂರೋಪಿನ ಬೆಲ್ಜಿಯಂ, ಸ್ಪೇನ್ ಮತ್ತು ಇಟಲಿ ದೇಶಗಳಲ್ಲಿ ಕಂಡುಬರುವ ಇನ್ನೊಂದು ಬಗೆಯ ಸಹಕಾರಿ ಸಂಘಗಳು. ಮೂಲಭೂತವಾಗಿ ಇವು ಔಷಧಿ ಉತ್ಪಾದನಾ ಮತ್ತು ವಿತರಣಾ ಚಟುವಟಿಕೆಗಳಲ್ಲಿ ನಿರತವಾಗಿವೆ. 'ಆಫೀಸ್ ಡೆಸ್ ಫಾರ್ಮಸೀಸ್ ಕೋಆಪರೇಟಿವ್ ಡೆ ಬೆಲ್ಜಿಕ್', 616 ಔಷಧಿ ಉತ್ಪಾದಕ ಸಂಸ್ಥೆಗಳ ಫೆಡರಲ್ ಸಹಕಾರಿಯಾಗಿದ್ದು ಬೆಲ್ಜಿಯಂನ ಔಷಧಿ ಮಾರುಕಟ್ಟೆಯ ಶೇಕಡ 12ರಷ್ಟು ವ್ಯವಹಾರ ಹೊಂದಿದೆ. ಈ ಸಹಕಾರಿಯು ವಾರ್ಷಿಕ ಸುಮಾರು 2.2 ಮಿಲಿಯನ್ ಜನರಿಗೆ ಔಷಧಿಗಳನ್ನು ಪೂರೈಸುತ್ತಿದ್ದು, ಸುಮಾರು 600 ಮಿಲಿಯನ್ ಯೂರೋಗಳಷ್ಟು ವಹಿವಾಟು ನಡೆಸುತ್ತಿದೆ.

ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ ಸಹಕಾರಿ ಮಾರ್ಗದ ಇನ್ನೊಂದು ಪ್ರಮುಖ ಪ್ರಕಾರವೆಂದರೆ ಆರೋಗ್ಯ ಸೇವೆಗಳ ಗ್ರಾಹಕ ಸಹಕಾರಿ ಸಂಘಗಳು. ಸಾಧಾರಣವಾಗಿ, ಸುಲಭವಾಗಿ ಆರೋಗ್ಯಸೇವೆ ಲಭ್ಯವಾಗದ ಪ್ರದೇಶಗಳಲ್ಲಿ (ಉದಾಹರಣೆಗೆ ಗ್ರಾಮೀಣ ಪ್ರದೇಶ) ವಾಸಿಸುವ ಜನ, ಹಿರಿಯ ನಾಗರೀಕರು, ದೀರ್ಘಾವಧಿ ವೈದ್ಯಕೀಯ ಸೇವೆ ಬೇಕಾಗುವ ಕಾಯಿಲೆಗಳಿಗೆ ತುತ್ತಾದವರು ಮುಂತಾದವರು ಸದಸ್ಯರಾಗಿ ಗ್ರಾಹಕ ಸಹಕಾರಿ ಸಂಘಗಳ ಮಾದರಿಯಲ್ಲಿ ನಡೆಯುತ್ತಿರುವ ಈ ಸಹಕಾರಿ ಸಂಸ್ಥೆಗಳು ಮುಖ್ಯವಾಗಿ ಕೆನಡ ಮತ್ತು ಜಪಾನ್ ದೇಶಗಳಲ್ಲಿ ಕಂಡುಬರುತ್ತವೆ.

ಕೆನಡದಲ್ಲಿ ಗ್ರಾಹಕ ಸಹಕಾರಿ ಸಂಘಗಳು ಬಹು ಹಿಂದಿನಿಂದಲೂ (1947ರಿಂದ) ವಿವಿಧ ವೈದ್ಯಕೀಯ ಸೇವೆಗಳನ್ನು ಸದಸ್ಯ ಗ್ರಾಹಕರಿಗೆ ಒದಗಿಸುತ್ತಾ ಬಂದಿವೆ. ಇತ್ತೀಚಿನ ವರ್ಷಗಳಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಹೊಸ ಆವಿಷ್ಕಾರಗಳನ್ನು ಮಾಡಿರುವ ದೇಶವೆಂದರೆ ಜಪಾನ್. ಜಪಾನಿನ 111 ವೈದ್ಯಕೀಯ ಸಹಕಾರಿ ಸಂಘಗಳು ಸೇರಿ ಆರೋಗ್ಯ ಸಹಕಾರಿ ಒಕ್ಕೂಟವನ್ನು ಸ್ಥಾಪಿಸಿಕೊಂಡಿದ್ದು ಸುಮಾರು 3 ಮಿಲಿಯನ್ ಸದಸ್ಯರಿಗೆ ಆರೋಗ್ಯ ಸೇವೆ ಒದಗಿಸುತ್ತಿವೆ. ಒಕ್ಕೂಟದಡಿಯಲ್ಲಿ ಹಾಲಿ 75 ಆಸ್ಪತ್ರೆಗಳು, 337 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 70 ದಂತ ವೈದ್ಯಕೀಯ ಕೇಂದ್ರಗಳು ಮತ್ತು 28 ವಿಶೇಷ ಶುಶ್ರೂಷಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಈ ಆರೋಗ್ಯ ಸಹಕಾರಿ ಸಂಘಗಳು ಮುಖ್ಯವಾಗಿ ಹಿರಿಯ ನಾಗರೀಕರು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಸೇವೆಗಳನ್ನು ಒದಗಿಸುತ್ತಿವೆ.

ಆರೋಗ್ಯ ಸಹಕಾರ ಸಂಘಗಳ ಮುಖ್ಯ ಲಕ್ಷಣವೆಂದರೆ ವೈದ್ಯರು, ದಾದಿಯರು, ಇತರ ವೈದ್ಯಕೀಯ ವೃತಿಪರರು, ರೋಗಿಗಳು ಹೀಗೆ ಎಲ್ಲರ ಭಾಗವಹಿಸುವಕೆ ಮತ್ತು ಸದಸ್ಯತ್ವ ಇರುವುದು. ಈ ವೈದ್ಯಕೀಯ ಸಂಸ್ಥೆಗಳು ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದೊಂದಿಗೆ ನಿಕಟ ಸಂಪರ್ಕ ಹೊಂದಿ ಕೆಲಸ ನಿರ್ವಹಿಸುತ್ತವೆ. ಸಧಾರಣವಾಗಿ ಆರೋಗ್ಯ ಸೇವೆಯಿಂದ ಹೊರಗುಳಿಯುವ ಎಚ್ಐವಿ/ಏಡ್ಸ್ ರೋಗಿಗಳು, ಲೈಂಗಿಕ ರೋಗಿಗಳು ಅದರಲ್ಲೂ ವಿಶೇಷವಾಗಿ ಲೈಂಗಿಕ ಕಾರ್ಯಕರ್ತರು, ನಿರಾಶ್ರಿತರು ಮತ್ತು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿರುವ ನಗರ ಮತ್ತು ಗ್ರಾಮೀಣ ಪ್ರದೇಶದ ಬಡಜನರು ಮುಂತಾದವರಿಗೆ ಆರೋಗ್ಯ ಸೇವೆಯನ್ನು ತಲುಪಿಸುವ ಅತ್ಯಂತ ಯಶಸ್ವಿ ಪ್ರಕಾರವಾಗಿ ಆರೋಗ್ಯ ಸಹಕಾರಿ ಸಂಘಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಕೆಲಸಮಾಡುತ್ತಾ ಬಂದಿವೆ. ಆದುದರಿಂದಲೇ ಎಸ್ಡಿಜಿ 3ರ ಗುರಿಗಳನ್ನು ತಲುಪಬೇಕಾದರೆ ಸಹಕಾರಿ ಮಾದರಿ ಆರೋಗ್ಯಸೇವೆಯು ಬಹು ಅಗತ್ಯವಾಗಿದೆ.

ಭಾರತದಲ್ಲಿ ವೈದ್ಯಕೀಯ ಸೇವೆಯ ಅಗತ್ಯ ಮತ್ತು ಬೇಡಿಕೆ ಬಹಳವಿದ್ದು, ಆರೋಗ್ಯ ಸವಲತ್ತುಗಳ (ಹೆಲ್ತ್ ಇನ್ಫ್ರಾಸ್ಟ್ರಕ್ಚರ್) ಲಭ್ಯತೆ ಕಡಿಮೆ ಇದೆ. ಆದಾಗ್ಯೂ ಸಹಕಾರಿ ಕ್ಷೇತ್ರದ ಭಾಗವಹಿಸುವಿಕೆ ಅಷ್ಟಾಗಿ ಕಂಡು ಬರುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೇರಳ ರಾಜ್ಯದಲ್ಲಿ ಹಲವು ವೈದ್ಯಕೀಯ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕದಲ್ಲೂ ಕೆಲವು ಸಹಕಾರಿ ಆರೋಗ್ಯ ಸಂಸ್ಥೆಗಳಿವೆ, ಆದರೆ ಅವಕಾಶಗಳು ಮತ್ತು ಅಗತ್ಯವನ್ನು ಗಮನಿಸಿದಾಗ ಈ ಕ್ಷೇತ್ರ ಇನ್ನೂ ಬೆಳೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದರೆ ನಮ್ಮ ಸಹಕಾರಿ ಕ್ಷೇತ್ರವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

1. ಎಲ್ಲ ಸಹಕಾರಿ ಯೂನಿಯನ್/ಮಹಾಮಂಡಳಗಳು ಆರೋಗ್ಯ/ವೈದ್ಯಕೀಯ ಸಹಕಾರಿ ಸಂಘಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು.
2. ರಾಜ್ಯ ಸರಕಾರಗಳು ಆರೋಗ್ಯ ಸಹಕಾರ ಸಂಘಗಳಿಗೆ ವಿಶೇಷ ಸಹಾಯ ಯೋಜನೆಗಳನ್ನು ಚಾಲ್ತಿಗೆ ತರಬೇಕು
3. ಹಲವು ಸಹಕಾರಿ ಸಂಘಗಳು ಒಟ್ಟಾಗಿ ಹೊಸ ಆರೋಗ್ಯ ಸಹಕಾರಿ ಸಂಘಗಳನ್ನು ಸ್ಥಾಪಿಸುವ ಕುರಿತು ಯೋಜನೆ ರೂಪಿಸಬಹುದು.
4. ವಿವಿಧ ಬಗೆಯ ಸಹಕಾರಿ ಸಂಘಗಳು ವೈದ್ಯಕೀಯ ಸೇವೆಗಳನ್ನು ತಮ್ಮ ವ್ಯವಹಾರ ಚಟುವಟಿಕೆಗಳಲ್ಲಿ ಸೇರಿಸಿಕೊಳ್ಳಬೇಕು. ಉದಾಹರಣೆಗೆ ಔಷಧಿ ಮಾರಾಟ, ಆರೋಗ್ಯ ಉಪಕರಣಗಳ ಮಾರಾಟ, ವೈದ್ಯಕೀಯ ತಪಾಸಣೆಗೆ ಪ್ರಯೋಗಾಲಯ ಸ್ಥಾಪನೆ ಇತ್ಯಾದಿ ಸೇವೆಗಳನ್ನು ಆರಂಭಿಸಬಹುದು
5. ಮೇಲಿನ ಸೇವೆಗಳನ್ನು ಗ್ರಾಹಕರ ಮನೆಯ ಬಳಿಯಲ್ಲಿಯೇ ಸೇವಾ ಸೌಲಭ್ಯ ದೊರೆಯುವಂತೆ ಮೊಬೈಲ್ ವ್ಯಾನ್‌ಗಳ ಮೂಲಕವೂ ಮಾಡಿದರೆ ಇನ್ನೂ ಉತ್ತಮ.
6. ದೊಡ್ಡ ಸಹಕಾರಿ ಸಂಸ್ಥೆಗಳು ಆಸ್ಪತ್ರೆಗಳನ್ನು ಆರಂಭಿಸುವುದು ಮತ್ತು/ಅಥವ ವೈದ್ಯರ ಸಮಾಲೋಚನಾ ಸೇವೆಗಳನ್ನು ಸದಸ್ಯ ಕುಟುಂಬದ ಸದಸ್ಯರಿಗೆ ಒದಗಿಸಬಹದು.
7. ನಗರ ಪ್ರದೇಶಗಳಲ್ಲಿರುವ ಸಹಕಾರಿ ಸಂಸ್ಥೆಗಳು ಫಿಟ್ನೆಸ್ ಸೆಂಟರ್‌ಗಳನ್ನು ಆರಂಭಿಸಬಹುದು
8. ಸಹಕಾರಿ ಸಂಘಗಳು ಸದಸ್ಯ ಕುಟುಂಬದವರಿಗೆ, ವಿಶೇಷವಾಗಿ ಗ್ರಾಮೀಣ ಜನರಿಗೆ ಶುಧ್ಧ ಕುಡಿಯುವ ನೀರನ್ನು ಸರಬರಾಜು ಮಾಡಬಹುದು ಮತ್ತು ಶುಧ್ಧ ನೀರಿನ ಘಟಕಗಳನ್ನು ಸ್ಥಾಪಿಸಬಹುದು
9. ಸಹಕಾರಿ ಸಂಘಗಳು ಸದಸ್ಯರ ಆರೋಗ್ಯ ನಿಧಿಯೊಂದನ್ನು ಸ್ಥಾಪಿಸಿ, ವೈದ್ಯಕೀಯ ನೆರವು ಅಗತ್ಯವಿರುವ ಸದಸ್ಯರಿಗೆ ನೆರವು ನೀಡಬಹುದು.
10. ಸಹಕಾರಿ ಮಾದರಿಯಲ್ಲಿ ಆರೋಗ್ಯ ವಿಮೆ ಯೋಜನೆಯನ್ನು ಆರಂಭಿಸಬಹುದು.
11. ಶುಚಿತ್ವ ಆರೋಗ್ಯದ ಇನ್ನೊಂದು ಮುಖ. ಹಲವು ಆರೋಗ್ಯ ಸಮಸ್ಯೆಗಳ ಮೂಲವೆ ನೈರ್ಮಲ್ಯದ ಕೊರತೆ. ಆದುದರಿಂದ ಸಹಕಾರಿ ಸಂಘಗಳು ಶುಚಿತ್ವ ಮತ್ತು ನೈರ್ಮಲ್ಯ ಕುರಿತಂತೆ ಜಾಗೃತಿ, ಶಿಕ್ಷಣ ನೀಡುವ ಕೆಲಸ ಮಾಡಬಹುದು.
12. ಇದೀಗೆ ಕೊರೋನ ಪಿಡುಗಿನಿಂದಾಗಿ ಹಲವು ಬಗೆಯ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಹಲವಾರು ವಸ್ತುಗಳು ದಿನ ನಿತ್ಯದ ಬಳಕೆಯ ವಸ್ತುಗಳಾಗಿರುವುದರಿಂದ ಅಂತಹ ವಸ್ತುಗಳ ಉತ್ಪಾದನೆ ಮತ್ತು ಮಾರಾಟ ಮಾಡುವುದನ್ನು ಆರಂಭಿಸಬಹುದು

ಆರೋಗ್ಯ ರಕ್ಷಣೆ ಇಂದಿನ ಪ್ರಮುಖ ಅಗತ್ಯಗಳಲ್ಲಿ ಒಂದು. ವಿಶೇಷವಾಗಿ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಸಮುದಾಯಗಳಿಗೆ ಕೈಗೆಟಕುವ ದರಗಳಲ್ಲಿ, ಗುಣಮಟ್ಟದ ಆತೋಗ್ಯ ಸೇವೆ ಒದಗಿಸುವುದು ಅತ್ಯಂತ ಜರೂರಾಗಿದೆ. ಹೀಗಾಗಿ ಸಮುದಾಯದ ಆರೋಗ್ಯಕ್ಕೆ ಪೂರಕವಾದ ಯಾವುದೇ ಚಟುವಟಿಕೆಯನ್ನು ವ್ಯವಹಾರದ ಭಾಗವಾಗಿ ಅಥವ ಸಾಮಾಜಿಕ ಜವಾಬ್ದಾರಿಯ ರೂಪದಲ್ಲಿ ಮಾಡುವುದರ ಮೂಲಕ ಸಹಕಾರಿ ಸಂಸ್ಥೆಗಳು ಎಸ್ಡಿಜಿ 3ರ ಗುರಿ ತಲುಪಲು ಸಹಕರಿಸಬಹುದಾಗಿದೆ.

4 QUALITY EDUCATION

# ಎಸ್‌ಡಿಜಿ 4 –ಗುಣಮಟ್ಟದ ಶಿಕ್ಷಣ

ಗುಣಮಟ್ಟದ ಶಿಕ್ಷಣವು ಎಲ್ಲರನ್ನೂ ಒಳಗೊಂಡಂತೆ ಮತ್ತು ಸಮಾನ ಅವಕಾಶಗಳ ನೆಲೆಯಲ್ಲಿ ದೊರೆಯುವಂತೆ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳು ದೊರೆಯುವಂತೆ ಮಾಡುವುದು (Ensure inclusive and equitable quality education and promote lifelong learning opportunities for all) ಸುಸ್ಥಿರ ಅಭಿವೃದ್ಧಿಯ ಪ್ರಮುಖ ದ್ಯೋತಕಗಳಲ್ಲಿ ಒಂದಾಗಿದೆ. ಎಸ್‌ಡಿಜಿ 4ರಲ್ಲಿ ಸುಸ್ಥಿರ ಅಭಿವೃದ್ಧಿಯ ಪ್ರಾಥಮಿಕ ಅಗತ್ಯಗಳಲ್ಲೊಂದಾದ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಗುರಿಗಳನ್ನು ಗೊತ್ತುಪಡಿಸಲಾಗಿದೆ. 2030ರ ವೇಳೆಗೆ ಎಲ್ಲಾ ಹುಡುಗಿಯರು ಮತ್ತು ಹುಡುಗರು ಗುಣಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಉಚಿತವಾಗಿ ಮತ್ತು ನ್ಯಾಯಸಮ್ಮತವಾಗಿ ಪಡೆಯುವಂತಾಗಬೇಕು. ಹಾಗೆಯೇ ಉನ್ನತ ಶಿಕ್ಷಣ ಬಯಸುವ ಪ್ರತಿಯೊಬ್ಬರಿಗೂ ವಿಶ್ವವಿದ್ಯಾನಿಲಯ ಸೇರಿದಂತೆ ಉತ್ತಮ ಗುಣಮಟ್ಟದ ತಾಂತ್ರಿಕ, ವೃತ್ತಿಪರ ಮತ್ತು ಕಲಾ ಪ್ರಕಾರಗಳ ಶಿಕ್ಷಣ ದೊರೆಯುವಂತಾಗಬೇಕು ಮತ್ತು ಈ ಎಲ್ಲ ಪ್ರಕಾರಗಳಿಗೆ ಸಂಬಂಧಿಸಿದ ಸೂಕ್ತ ಕೌಶಲ್ಯಾಭಿವೃದ್ಧಿಯೂ ನಡೆಯಬೇಕೆಂದು ಈ ಗುರಿಯಲ್ಲಿ ತಿಳಿಸಲಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಲ್ಲ ಬಗೆಯ ಲಿಂಗ, ಪ್ರಾದೇಶಿಕ ಅಥವ ಇನ್ನಾವುದೇ ರೀತಿಯ ತಾರತಮ್ಯಗಳನ್ನು ನಿವಾರಿಸುವುದು, ಶಿಕ್ಷಣದ ಮೂಲಕ ಜಾಗತಿಕ ಪೌರತ್ವವನ್ನು ಸಾಧ್ಯವಾಗಿಸುವುದು, ಶಿಕ್ಷಿತ ಜನರಲ್ಲಿ ಸುಸ್ಥಿರ ಜೀವನಶೈಲಿಯನ್ನು ಉತ್ತೇಜಿಸುವುದು, ಶಿಕ್ಷಕರ ತರಬೇತಿಯನ್ನು ಹೆಚ್ಚಿಸುವುದು ಮತ್ತು ಪರಿಣಾಮಕಾರಿಯಾಗಿಸುವುದು, ಶಿಕ್ಷಣ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ವಿನಿಮಯವನ್ನು ವೃದ್ಧಿಸುವುದು ಮುಂತಾದುವುಗಳಮೇಲೆ ಎಸ್‌ಡಿಜಿ 3 ಒತ್ತು ನೀಡುತ್ತದೆ.

ಉತ್ತಮ ಗುಣಮಟ್ಟದ ಶಿಕ್ಷಣದ ಮೇಲೆ ಹೂಡಿಕೆ ಮಾಡುವುದರ ಮೂಲಕ ಮಾನವ ಬಂಡವಾಳವನ್ನು (ಹ್ಯುಮನ್ ಕ್ಯಾಪಿಟಲ್) ಉನ್ನತೀಕರಿಸುವುದು ಸುಸ್ಥಿರ ಅಭಿವೃದ್ಧಿ ಸಾಧನೆಗೆ ಅಡಿಪಾಯವಾಗಿದೆ. ಜಗತ್ತಿನಾದ್ಯಂತ ಸರಕಾರಗಳು ಮತ್ತು ಖಾಸಗಿ ವಲಯದ ಎಲ್ಲ ಪ್ರಯತ್ನದ ನಡುವೆಯೂ ಎಲ್ಲರಿಗೂ ಎಲ್ಲ ಮಟ್ಟದ ಶಿಕ್ಷಣ ದರೊರೆಯುವಂತೆ ಮಾಡುವುದು ಸಾಧ್ಯವಾಗಿಲ್ಲ. ಜಗತ್ತಿನಲ್ಲಿ ಶಿಕ್ಷಣಕ್ಕೆ ಅರ್ಹರಾಗಿರುವ ಜನಸಂಖ್ಯೆಯಲ್ಲಿ ಶೇಕಡ 91 ಜನರಿಗೆ ಪ್ರಾಥಮಿಕ ಶಿಕ್ಷಣ, ಶೇಕಡ 84 ಜನರಿಗೆ ಪ್ರೌಢ ಶಿಕ್ಷಣ ಮತ್ತು ಶೇಕಡ 60 ಜನರಿಗೆ ಮಾತ್ರ ಉನ್ನತ ಶಿಕ್ಷಣ ಲಭ್ಯವಿದೆ ಎಂಬುದು ಇತ್ತೀಚಿನ ಅಂಕಿ ಅಂಶಗಳಿಂದ ತಿಳಿಯುತ್ತದೆ. ಸುಮಾರು 61 ದಶಲಕ್ಷ ಮಕ್ಕಳನ್ನೂ ಸೇರಿದಂತೆ ಒಟ್ಟಾರೆಯಾಗಿ ತಮ್ಮ ವಯೋಮಾನಕ್ಕೆ ತಕ್ಕ ಶಿಕ್ಷಣ ಪಡೆಯಲು ಸಾಧ್ಯವಾಗದಿರುವವರ ಸಂಖ್ಯೆ ಸುಮಾರು 263 ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ಲಿಂಗ, ವಸತಿ ಪ್ರದೇಶ, ಜನಾಂಗ/ಜನಾಂಗೀಯತೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ಈ ಅಸಮಾನತೆ ನೆಲೆಸಿದೆ. ಆಫ್ರಿಕದ ಹಲವು ದೇಶಗಳು ಮತ್ತು ದಕ್ಷಿಣ ಏಶ್ಯಾ ದೇಶಗಳಲ್ಲಿ ಈ ಸಮಸ್ಯೆ ಅತ್ಯಂತ ತೀವ್ರವಾಗಿದೆ ಎನ್ನುವುದೂ ಅಂಕಿಅಂಶಗಳಿಂದ ತಿಳಿಯುತ್ತದೆ. ಭಾರತದ ಪರಿಸ್ಥಿತಿಯನ್ನು ನೋಡಿದಾಗ ನಮ್ಮ ದೇಶವು ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಜಗತ್ತಿನ ಸರಾಸರಿಗೆ ಸನಿಹದಲ್ಲಿದ್ದರೂ, ಪ್ರೌಢ ಶಿಕ್ಷಣ ಮತ್ತು ಉನ್ನತ ಶಿಕ್ಷಣಗಳೆರಡರಲ್ಲೂ ಬಹಳ ಹಿಂದಿರುವುದು ಗಮನಕ್ಕೆ ಬರುತ್ತದೆ. ಆದುದರಿಂದ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಮಾಡುವ ಜವಾಬ್ದಾರಿ ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಬಹುಮುಖ್ಯವಾಗಿದೆ.

**ಸಹಕಾರಿ ಕ್ಷೇತ್ರದ ಪಾತ್ರ:**

ಶಿಕ್ಷಣ ಮತ್ತು ಮಾಹಿತಿ ಸಹಕಾರಿ ಕ್ಷೇತ್ರದ ಮೂಲ ತತ್ವಗಳಲ್ಲೊಂದು. ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ಕಾರ್ಮಿಕರಿಗೆ ಮತ್ತು ಎಲ್ಲ ರೀತಿಯ ಪಾಲುದಾರರಿಗೆ (ಸ್ಟೇಕ್‌ಹೋಲ್ಡರ್ಸ್) ಸೂಕ್ತ ಶಿಕ್ಷಣ ಮತ್ತು ಮಾಹಿತಿ ನೀಡಲು ಬದ್ಧರಾಗಿರುತ್ತವೆ. ಆದುದರಿಂದ ಶಿಕ್ಷಣ ಕ್ಷೇತ್ರ ಸಹಕಾರಿಗಳಿಗೆ ಹೊಸತೇನಲ್ಲ. ಈಗಾಗಲೇ ಬಹುತೇಕ ಎಲ್ಲ ಸಹಕಾರ ಸಂಸ್ಥೆಗಳು ವಿಶೇಷವಾಗಿ ಸಹಕಾರಿ ಯುನಿಯನ್/ಮಹಾಮಂಡಳಗಳು ವಿವಿಧ ಬಗೆಯ ಶಿಕ್ಷಣ/ತರಬೇತಿಗಳನ್ನು ನಡೆಸುತ್ತಲೇ ಬಂದಿವೆ. ಪ್ರತಿ ಸಹಕಾರಿ ಸಂಸ್ಥೆಯು ತಮ್ಮ ಲಾಭಾಂಶದಲ್ಲಿ ಒಂದು ಭಾಗವನ್ನು ಶಿಕ್ಷಣ ನಿಧಿಗಾಗಿ ನೀಡುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅಂತೆಯೇ ಸಹಕಾರಿ ಸಂಸ್ಥೆಗಳು ತಮ್ಮ ಶಿಕ್ಷಣ ನೀಡಿಕೆಯ ತತ್ವದನುಸಾರ, ತಮಗಿರುವ ಅನುಭವ ಮತ್ತು ತಮ್ಮ ಲಾಭದ ಒಂದಂಶವನ್ನು ಶಿಕ್ಷಣಕ್ಕೆ ವಿನಿಯೋಗಿಸುವ ಸಂಪ್ರದಾಯದ ಲಾಭವನ್ನು ತಮ್ಮ ಕಾರ್ಯಕ್ಷೇತ್ರದ ಪ್ರದೇಶದ ಇಡೀ ಸಮುದಾಯಕ್ಕೆ ನೀಡಲು ಕ್ರಮ ಕೈಗೊಂಡಲ್ಲಿ ಅದು ಎಸ್‌ಡಿಜಿ 4ರ ಗುರಿತಲುಪಲು ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ತಮ್ಮ ಪ್ರದೇಶದ ಸಾಮಾನ್ಯ ನಾಗರೀಕರಿಗೆ ಶಿಕ್ಷಣ ಸೌಲಭ್ಯವನ್ನು ಆಸ್ಥೆಯಿಂದ ಒದಗಿಸುತ್ತಿರುವ ಹಲವು ಸಹಕಾರಿ ಪ್ರಯತ್ನಗಳನ್ನು ಜಗತ್ತಿನಾದ್ಯಂತ ನೋಡಬಹುದು. ಸಹಕಾರಿ ಮಾದರಿಯ ಶಾಲಾ ಕಾಲೇಜುಗಳಿಂದ ಹಿಡಿದು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವನ್ನು ನೀಡುತ್ತಿರುವ ಸಹಕಾರಿ ವಿದ್ಯಾಸಂಸ್ಥೆಗಳು ಹಲವಿವೆ. ಗ್ವಾಟೆಮಾಲಾದಲ್ಲಿ ಮಹಿಳೆಯರೇ ಆರಂಭಿಸಿರುವ ಕರಕುಶಲ ಸಹಕಾರಿ ಸಂಘವಾದ ಯುಪಿಎವಿಐಎಂ, 1994ರಲ್ಲಿ ತನ್ನ ಸದಸ್ಯರ ಮಕ್ಕಳಿಗಾಗಿ ಶಿಶುವಿಹಾರವೊಂದನ್ನು ಆರಂಭಿಸಿತು. ಇಂದು ಅದು ದೇಶದ ಅತ್ಯುತ್ತಮ ಮಾಂಟೆಸರಿ ಶಾಲೆಗಳಲ್ಲಿ ಒಂದಾಗಿದ್ದು, ಸದಸ್ಯರ ಮಕ್ಕಳಿಗೆ ಕಡಿಮೆ ಶುಲ್ಕ ಮತ್ತು ಸದಸ್ಯರಲ್ಲದವರಿಗೆ ಹೆಚ್ಚಿನ ಶುಲ್ಕ ವಿಧಿಸುತ್ತಾ, ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ನೀಡುತ್ತಿದೆ. ರಾಹ್-ಎ-ರೋಶ್ದ್, ಇರಾನ್‌ನ ಟೆಹರಾನ್‌ನಲ್ಲಿರುವ ದೇಶದ ಮೊದಲ ಮತ್ತು ಅತಿದೊಡ್ಡ ಸಹಕಾರಿ ಶಾಲೆಯಾಗಿದೆ. 1985ರಲ್ಲಿ ಶಿಶುವಿಹಾರವಾಗಿ ಆರಂಭವಾದ ಈ ಶಾಲೆ ಇಂದು ದೇಶದಲ್ಲಿ ಹೆಣ್ಣು ಮಕ್ಕಳಿಗೆ ಪ್ರೌಢಶಾಲೆಯವರೆಗಿನ ಶಿಕ್ಷಣ ನೀಡುವ ಪ್ರಮುಖ ಸಂಸ್ಥೆಯಾಗಿದೆ. ಸುಮಾರು 2400 ವಿದ್ಯಾರ್ಥಿಗಳಿರುವ ಈ ಶಾಲೆ ಶಿಕ್ಷಣದ ಜೊತೆಗೇ ಸಹಕಾರಿ ಪ್ರರ್ಯಾಯದ ಬಗ್ಗೆ ಯುವಜನರಿಗೆ ತಿಳಿಹೇಳುವ ಹಾಗೂ ಲಿಂಗ ಸಮಾನತೆ ಮತ್ತು ಮಹಿಳೆಯರ ಆರ್ಥಿಕ ಸಬಲೀಕರಣದಂತಹ ಚಟುವಟಿಕೆಗಳಲ್ಲಿ ನಿರತವಾಗಿದೆ. ಇಂಗ್ಲೆಂಡ್‌ನಲ್ಲಿ 2006ರ ಶಿಕ್ಷಣ ಮತ್ತು ತಪಾಸಣೆ ಕಾಯ್ದೆ ಜಾರಿಗೆ ಬಂದಾಗಿನಿಂದ ನೂರಾರು ಸಹಕಾರಿ ಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಶಾಲೆಗಳು ಸಹಕಾರಿ ತತ್ವಗಳ ನೆಲೆಯಲ್ಲಿ, ಪೋಷಕರು, ಸಿಬ್ಬಂದಿ, ವಿದ್ಯಾರ್ಥಿಗಳು, ಸ್ಥಳೀಯ ಸಮುದಾಯದ ಇತರರನ್ನು ಸದಸ್ಯರನ್ನಾಗಿ ಹೊಂದಿ, ಉತ್ತಮ ಆಡಳಿತ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಹೆಸರುವಾಸಿಯಾಗಿವೆ. 'ಕೋಟ್ ಡಿ ಐವೋರ್'ನಲ್ಲಿರುವ ಕೋಕೋ ಮತ್ತು ಕಾಫಿ ಮಾರಾಟ ಸಹಕಾರ ಸಂಘವಾದ 'ಕೋಆಪರೇಟಿವ್ ಅಗ್ರಿಕೋಲ್ ಕವೊಕಿವಾ ಡುಹಾತ್ ಸಸಂದ್ರ'ವು ಬಾಲ ಕಾರ್ಮಿಕರ ರಕ್ಷಣೆಗಾಗಿ ಶಾಲೆಯನ್ನು ತೆರೆದಿದ್ದು ಸುಮಾರು 1800 ಬಾಲ ಕಾರ್ಮಿಕರನ್ನು ರಕ್ಷಿಸಿ ಶಿಕ್ಷಣ ನೀಡಿದೆ. ತಾಂಜೇನಿಯಾದ ಉತ್ತರ ಕಿಲಿಮಂಜಾರೊ ಪ್ರದೇಶದ ಕಿಲಿಮಂಜಾರೋ ಸ್ಥಳೀಯ ಸಹಕಾರಿ ಒಕ್ಕೂಟವು ಎಚ್‌ಐವಿ/ಏಡ್ಸ್ ಪೀಡಿತರ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನಗಳನ್ನು ಆರಂಭಿಸಿದೆ. ಈ ವಿದ್ಯಾರ್ಥಿವೇತನಕ್ಕೆ ಒಕ್ಕೂಟವು ತನ್ನ ಲಾಭದ ಒಂದಂಶವನ್ನು ನೀಡುವುದರ ಜೊತೆಗೆ ಆರ್ಥಿಕವಾಗಿ ಸಧೃಢವಾಗಿರುವ ಸದಸ್ಯರು ದೇಣಿಗೆ ನೀಡುವುದನ್ನೂ ಪ್ರೋತ್ಸಾಹಿಸುತ್ತದೆ. ಕೆನಡದ ಒಟ್ಟಾವದಲ್ಲಿರುವ ವೈಓಎಮ್ ಸಹಕಾರಿ ಕೇಂದ್ರವು 35 ವರ್ಷಗಳಿಂದ ಭೌದ್ಧಿಕ ವಿಕಲಾಂಗತೆ ಹೊಂದಿರುವ ಮಕ್ಕಳಿಗೆ ಜೀವನ ಕೌಶಲ್ಯ ಮತ್ತು ವೃತ್ತಿ ತರಬೇತಿ ಕೇಂದ್ರವನ್ನು ನಡೆಸುತ್ತಿದೆ. ಬಹುಷ: ಶಿಕ್ಷಣ ಕ್ಷೇತ್ರಕ್ಕೆ ಬಹುದೊಡ್ಡ ಕಾಣಿಕೆ ನೀಡುತ್ತಿರುವ ಸಂಸ್ಥೆಯೆಂದರೆ ಸ್ಪೇನ್‌ನ ಮಾಂಡ್ರೆಗಾನ್ ಸಹಕಾರಿ ಸಮೂಹ. ಸುಮಾರು 266

ಅಂಗಸಂಸ್ಥೆಗಳ ಒಕ್ಕೂಟವಾದ ಮಾಂಡ್ರೆಗಾನ್ ಸಹಕಾರಿಯು ಸುಮಾರು ಒಂದು ಲಕ್ಷ ಕೆಲಸಗಾರರನ್ನು ಹೊಂದಿದ್ದು ಕೈಗಾರಿಕೆ, ಹಣಕಾಸು, ಚಿಲ್ಲರೆ ವ್ಯಾಪಾರ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದೆ. ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆಯಾಗಿ ತನ್ನದೇ ವಿಶ್ವವಿದ್ಯಾನಿಲಯವನ್ನು ಆರಂಭಿಸಿರುವ ಮಾಂಡ್ರೆಗಾನ್ ಸಹಕಾರಿಯು ವೈದ್ಯಕೀಯ, ತಂತ್ರಜ್ಞಾನ, ಮಾನವಿಕ, ವ್ಯವಹಾರ ಅಧ್ಯಯನ ಮತ್ತು ಆಹಾರ ವಿಜ್ಞಾನಗಳಿಗೆ ಸಂಬಂಧಿಸದಂತೆ ಪದವಿ ಶಿಕ್ಷಣವನ್ನು ನೀಡುತ್ತಿದೆ. ಜೊತೆಗೆ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಹಾಗೂ ಆವಿಷ್ಕಾರ (ಇನ್ನೊವೇಶನ್) ಕೇಂದ್ರಗಳನ್ನು ಆರಂಭಿಸಿ ಅದರ ಮೂಲಕ ಯುವಜನರಿಗೆ ಜ್ಞಾನಾಧಾರಿತ ವ್ಯವಹಾರಗಳನ್ನು ಆರಂಭಿಸಲು ಸಹಕರಿಸುತ್ತಿದೆ.

ಭಾರತದಲ್ಲಿಯೂ ಸಹಕಾರಿ ಸಂಘಟನೆಗಳು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಹಲವು ಉದಾಹರಣೆಗಳಿವೆ. ಬಹುತೇಕ ಎಲ್ಲಾ ರಾಜ್ಯ ಸಹಕಾರೀ ಮಹಾಮಂಡಳಗಳು ಮತ್ತು ಕೆಲವು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಮಹಾಮಂಡಳಗಳು (ಉದಾಹರಣೆಗೆ ಸಹಕಾರಿ ಬ್ಯಾಂಕಿಂಗ್ ಮಹಾಮಂಡಳ) ಸಹಕಾರ ಅಥವ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಡಿಪ್ಲೊಮ ಶಿಕ್ಷಣವನ್ನು ನೀಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹಾಗೆಯೇ ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ಅಂಗ ಸಂಸ್ಥೆಗಳು ಹಲವು ಸಹಕಾರಿ ವ್ಯವಸ್ಥಾಪನಾ ಸಂಸ್ಥೆಗಳನ್ನು ನಡೆಸುತ್ತಿದ್ದು ಇವುಗಳು ವಿಷಯವಾರು ತರಬೇತಿಯ ಜೊತೆಗೆ ಸಹಕಾರಿ ವಿಷಯದಲ್ಲಿ ಡಿಪ್ಲೊಮ ಶಿಕ್ಷಣ ಮತ್ತು ಹಲವು ವಿಶ್ವವಿದ್ಯಾನಿಲಯಗಳ ಸಂಯೋಜನೆ ಪಡೆದು ಎಂಬಿಎ ಪದವಿ ಶಿಕ್ಷಣವನ್ನೂ ನಡೆಸುತ್ತಿವೆ. ಇದಲ್ಲದೆ ಕೆಲವು ದೊಡ್ಡ ಸಹಕಾರಿ ಸಂಘಗಳು ಪ್ರತ್ಯೇಕವಾಗಿ ಟ್ರಸ್ಟ್‌ಗಳನ್ನು ಆರಂಭಿಸಿ ಅದರ ಮೂಲಕ ಶಾಲಾ ಕಾಲೇಜುಗಳನ್ನು ಆರಂಭಿಸಿವೆ (ಉದಾಹರಣೆಗೆ ಮಹಾರಾಷ್ಟ್ರದ ವಾರ್ಣ ಸಹಕಾರಿ ಸಮೂಹ). ಇನ್ನು ಕೆಲವು ಸಹಕಾರಿ ಸಂಘಗಳು (ಉದಾಹರಣೆಗೆ ಕೃಷಿಕ್ ಭಾರತಿ ಸಹಕಾರಿ ಸಂಸ್ಥೆ) ತಮ್ಮ ಸಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಗವಾಗಿ ಶಾಲಾ ಕಾಲೇಜುಗಳಿಗೆ ಆರ್ಥಿಕ ಸಹಾಯ ನೀಡುವುದು, ತರಗತಿ ಕೊಠಡಿಗಳನ್ನು ನಿರ್ಮಿಸಿಕೊಡುವುದು, ಗ್ರಂಥಾಲಯಗಳಿಗೆ ಪುಸ್ತಕಗಳನ್ನು ನೀಡುವುದು ಇಂತಹುವುಗಳ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡಿವೆ. ಆರೋಗ್ಯ ಕ್ಷೇತ್ರದಲ್ಲಿದ್ದಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಸಹಕಾರಿ ಸಂಸ್ಥೆಗಳು ನೇರವಾಗಿ ತೊಡಗಿಕೊಂಡಿರುವ ಉದಾಹರಣೆ ಕೇರಳ ರಾಜ್ಯದಲ್ಲಿ ಕಾಣುತ್ತದೆ. ಕೇರಳದಲ್ಲಿ ಸಹಕಾರಿ ಕಾಯಿದೆಯಡಿಯಲ್ಲಿ ನೋಂದಾಯಿಸಲ್ಪಟ್ಟ ಒಂದು ನೂರಕ್ಕಿಂತ ಹೆಚ್ಚು 'ಸಹಕಾರಿ ಶಿಕ್ಷಣ ಸಂಸ್ಥೆಗಳು' ಕೆಲಸ ನಿರ್ವಹಿಸುತ್ತಿದ್ದು ಇವುಗಳಲ್ಲಿ ಪ್ರಾಥಮಿಕ ಶಾಲೆಗಳಿಂದ ಹಿಡಿದು ವೃತ್ತಿಪರ ಪದವಿಗಳನ್ನು ನೀಡುತ್ತಿರುವ ಸಂಸ್ಥೆಗಳಿವೆ (ಉದಾಹರಣೆಗೆ ಕೋಆಪರೇಟಿವ್ ಪಬ್ಲಿಕ್ ಸ್ಕೂಲ್, ಪಡುಕ್ಕಾಡ್, ವೈಯೂರ್, ತ್ರಿಶೂರ್  ಛಿಂ–ಠಿಜಡಿಚಿಣುತಜಠಿಣಛಟುಛಿಛಿಂಠಟ.ಠಡಿಂ; ಕೋಆಪರೇಟಿವ್ ಸ್ಕೂಲ್ ಆಫ್ ಲಾ, ಇಡುಕಿ – ಛಿಟ.ಚಿಛಿ.ಟಿ; ಕೋಆಪರೇಟಿವ್ ಅಕಾಡೆಮಿ ಫಾರ್ ಪ್ರೊಫೆಶನಲ್ ಎಜುಕೇಶನ್, ತಿರುವನಂತಪುರಂ – ಛಿಚಿಠಿಜಇಜಡಿಚಿಟಚಿ.ಠಡಿಂ ಇತ್ಯಾದಿ)

ಮೇಲಿನಂತಹ ಹಲವು ಉದಾಹರಣೆಗಳು ಲಭ್ಯವಿದ್ದರೂ, ಶಿಕ್ಷಣ ಕ್ಷೇತ್ರದಲ್ಲಿ 2030ರೊಳಗೆ ಸಾಧಿಸಬೇಕಾದ ಗುರಿಗಳ ಹಿನ್ನೆಲೆಯಲ್ಲಿ ನೋಡಿದರೆ ಸಹಕಾರಿ ಸಂಘಗಳು ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಸಕ್ರಿಯವಾಗಬೇಕಾದ ಅಗತ್ಯವಿದೆ. ಕೇವಲ ಸಹಕಾರಿ ಶಿಕ್ಷಣ ಮಾತ್ರವಲ್ಲದೆ ಸಾಮಾನ್ಯ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರಿ ಸಂಘಗಳು ನೆರವು ನೀಡಬೇಕಾಗಿದೆ. ಇಂತಹ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಸಹಕಾರಿ ಸಂಘಟನೆಗಳು ಕೆಳಗೆ ತಿಳಿಸಿರುವಂತೆ ಕ್ರಮ ಕೈಗೊಳ್ಳಬಹುದಾಗಿದೆ.

1. ಸಹಕಾರಿ ಸಂಸ್ಥೆಗಳು ಪ್ರತಿವರ್ಷ ತಮ್ಮ ಲಾಭಾಂಶದ ಒಂದಂಶವನ್ನು ಅಗತ್ಯವಿರುವ ಸ್ಥಳೀಯ ಶಿಕ್ಷಣ ಸಂಸ್ಥೆಗಳಿಗೆ

ಧನಸಹಾಯದ ರೂಪದಲ್ಲಿ ನೀಡಬಹುದು

2. ಬಡ ವಿದ್ಯಾರ್ಥಿಗಳಿಗೆ ಶಿಷ್ಯವೇತನಗಳನ್ನು ನೀಡುವುದರ ಮೂಲಕ ಕಲಿಕೆಯ ಸಾಧ್ಯತೆಗಳನ್ನು ಹೆಚ್ಚಿಸಬಹುದು
3. ಹೊಸ ಶಿಕ್ಷಣ ಸಂಸ್ಥೆಗಳು ಆರಂಭವಾಗುವಾಗ ಸಹಕಾರಿ ಸಾಂಸ್ಥಿಕ ರಚನೆಯ ಮೂಲಕ ಮಾಡುವಂತೆ ಪ್ರೇರೇಪಿಸಬಹುದು
4. ದೊಡ್ಡ ಸಹಕಾರಿ ಸಂಘಗಳು ಅಥವ ಹಲವು ಸಹಕಾರಿ ಸಂಘಗಳು ಒಟ್ಟಾಗಿ ಸ್ಥಳೀಯ ಅಗತ್ಯಗಳ ಅನುಸಾರ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಬಹುದು
5. ಅಗತ್ಯದ ಆಧಾರದಲ್ಲಿ ಯಾವುದಾದರೊಂದು ಶಿಕ್ಷಣ ಸಂಸ್ಥೆಯನ್ನು ದತ್ತು ಸ್ವೀಕರಾರ ಮಾಡಿ ಆ ಶಾಲೆಯ ಅಭಿವೃದ್ಧಿಗೆ ದೂರಗಾಮೀ ನೆಲೆಯಲ್ಲಿ ಸಹಕರಿಸಬಹುದು
6. ಸಹಕಾರೀ ಸಂಸ್ಥೆಗಳ ಸದಸ್ಯರಿಗೆ ಮತ್ತು ಸಿಬ್ಬಂದಿಗೆ ವೃತ್ತಿಪರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳಿಗೆ ವಿಶ್ವವಿದ್ಯಾನಿಲಯಗಳ ಸಂಯೋಜನೆ ಪಡೆದು ನಡೆಸಬಹುದು
7. ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ ಕಾರ್ಯಕ್ರಮಗಳನ್ನು ಆರಂಭಿಸಬಹುದು
8. ಸಹಕಾರೀ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ವೃದ್ಧಿಪಡಿಸಲು ಅಗತ್ಯವಾದ ಕಿರು ಅವಧಿ ಮತ್ತು ದೀರ್ಘಾವಧಿ ಕೋರ್ಸ್‌ಗಳನ್ನು ಆರಂಭಿಸಬಹುದು
9. ಸಹಕಾರಿ ಸಂಘಗಳ ಸದಸ್ಯರುಗಳು ಸೇರಿ ಅನಕ್ಷರಸ್ಥರಿಗೆ ಶಿಕ್ಷಣ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು
10. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರಕಾರವು ಆಗಿಂದಾಗ್ಗೆ ಚಾಲ್ತಿಗೆ ತರುವ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬಹುದು.
11. ಸಹಕಾರಿ ಮಾದರಿಯಲ್ಲಿ ಉನ್ನತ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣದ ಸಂಸ್ಥೆಗಳನ್ನು ಆರಂಭಿಸಬಹುದು.
12. ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸಹಕಾರಿ ಆಂದೋಲನದ ಬಗೆಗೆ ಮಾಹಿತಿ ಮತ್ತು ಜ್ಞಾನ ಒದಗಿಸುವ ನೆಲೆಯಲ್ಲಿ ಪಠ್ಯಗಳನ್ನು ಸೇರ್ಪಡೆಮಾಡಲು ಸಹಕಾರಿ ಫೆಡರೇಶನ್‌ಗಳು ಪ್ರಯತ್ನಿಸಬಹುದು.

ಎಲ್ಲರೂ ಶಿಕ್ಷಿತರಾಗುವುದು ಮತ್ತು ಆಯಾ ಸಂದರ್ಭದ ಅಗತ್ಯಗಳ ಅನುಸಾರ ಉತ್ತಮ ಶಿಕ್ಷಣ ಎಲ್ಲರಿಗೂ ಸಿಗುವಂತಾಗುವುದು ಸುಸ್ಥಿರ ಅಭಿವೃದ್ಧಿಯ ಅಗತ್ಯಗಳಲ್ಲೊಂದು. ಈ ಸಂಬಂಧದ ಗುರಿಯನ್ನು ತಲುಪಲು ಸಹಕಾರಿ ಸಂಸ್ಥೆಗಳು ಪ್ರಾಥಮಿಕ ನೆಲೆಯಲ್ಲಿ ಮತ್ತು ಮಹಾಮಂಡಳಗಳ ನೆಲೆಯಲ್ಲಿ ಪ್ರಯತ್ನಮಾಡಬೇಕು. ಭಾರತದಂತಹ ದೇಶದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಧಿಸಬೇಕಾದುದು ಇನ್ನೂ ಬಹಳಷ್ಟಿದೆ. ಸಹಕಾರಿ ಸಂಘಟನೆಗಳಿಗೆ ಶಿಕ್ಷಣ ಪ್ರಾಥಮಿಕ ತತ್ವಗಳ ಭಾಗವಾಗಿರುವುದರಿಂದ, ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತಮ್ಮ ದೇಣಿಗೆ ನೀಡುವುದು ಎಲ್ಲ ಸಕಾರಿಗಳ ಕರ್ತವ್ಯವಾಗಿದೆ.

5 GENDER EQUALITY

# ಎಸ್‌ಡಿಜಿ 5 – ಲಿಂಗ ಸಮಾನತೆ

ಸುಸ್ಥಿರ ಅಭಿವೃದ್ಧಿಯ ಐದನೆಯ ಗುರಿಯು ಲಿಂಗ ಸಮಾನತೆ ಮತ್ತು ಎಲ್ಲ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಸಬಲೀಕರಣವನ್ನು (Achieve gender equality and empower all women and girls) ಸಾಧಿಸಬೇಕೆಂಬ ಆಶಯವನ್ನು ಹೊಂದಿದೆ. ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿಂತೆ ಇರುವ ಗುರಿಗಳಲ್ಲಿ ಪ್ರಸ್ತುತ ಪರಿಸ್ಥಿತಿಯಲ್ಲಿ ಅತಿ ಮುಖ್ಯವಾದ ಗುರಿ ಎಂದರೆ ಲಿಂಗಸಮಾನತೆಯನ್ನು ಸಾಧಿಸುವುದು. ಪುರುಷ ಮತ್ತು ಸ್ತ್ರೀಯರು ಸಮಾನ ಹಕ್ಕು ಮತ್ತು ಅವಕಾಶಗಳನ್ನು ಪಡೆದಾಗ ಒಟ್ಟಾರೆ ಉತ್ಪಾದಕತೆ ಮತ್ತು ಒಟ್ಟಾರೆ ಜೀವನ ಗುಣಮಟ್ಟದಲ್ಲಿ ವೃದ್ಧಿಯಾಗುತ್ತದೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಸಿದ ಅಧ್ಯಯನವೊಂದರ ಪ್ರಕಾರ ಪುರುಷ ಮತ್ತು ಸ್ತ್ರೀಯರಿಗೆ ಅವರುಗಳು ಯಾರರೀತಿಯ ಗುಂಪಿನಲ್ಲಿ ಕೆಲಸಮಾಡಲು ಇಚ್ಛಿಸುತ್ತಾರೆ ಎಂದು ಕೇಳಿದಾಗ ಬಹುತೇಕ ಪುರುಷರು, ಕೇವಲ ಪುರುಷರು ಮಾತ್ರ ಇರುವ ಗುಂಪನ್ನೂ ಮತ್ತು ಬಹುತೇಕ ಮಹಿಳೆಯರು, ಕೇವಲ ಮಹಿಳೆಯರು ಮಾತ್ರ ಇರುವ ಗುಂಪನ್ನೂ ಆಯ್ಕೆಮಾಡಿದರೂ ಯಾವ ರೀತಿಯ ಕೆಲಸದ ಗುಂಪುಗಳು ಹೆಚ್ಚು ಉತ್ಪಾದಕತೆ ಸಾಧಿಸುತ್ತವೆ ಎನ್ನುವುದನ್ನು ನೋಡಿದಾಗ ಕೇವಲ ಪುರುಷರ ಅಥವ ಕೇವಲ ಮಹಿಳೆಯರು ಕೆಲಸ ನಿರ್ವಹಿಸುವ ಗುಂಪುರಳಿಗಿಂತ ಪುರುಷರು ಮತ್ತು ಮಹಿಳೆಯರು ಒಟ್ಟಾಗಿ ಕೆಲಸ ನಿರ್ವಹಿಸುವ ಗುಂಪುಗಳಲ್ಲಿ ಬಹು ಹೆಚ್ಚಿನ ಉತ್ಪಾದಕತೆ ಇರುವುದು ಗಮನಕ್ಕೆ ಬಂದಿದೆ. ಅಂತೆಯೇ ಲಿಂಗಸಮಾನತೆಯು ಅಭಿವೃದ್ಧಿಗೆ ಪೂರಕ ಅಂಶವೆಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಲಿಂಗ ಸಮಾನತೆ ಸಾಧ್ಯವಾಗಬೇಕಾದರೆ ಈಗಿರುವ ಲಿಂಗ ತಾರತಮ್ಯ ನಿಲ್ಲಬೇಕು ಮತ್ತು ಈ ತಾರತಮ್ಯಕ್ಕೆ ತುತ್ತಾಗಿರುವವರ ಸಬಲೀಕರಣ ನಡೆಯಬೇಕು. ಆದುರರಿಂದ ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ ಈ ಕೆಳಗಿನ ಪ್ರಮುಖ ಅಂಶಗಳನ್ನು ಒತ್ತಿ ಹೇಳಲಾಗಿದೆ.

2030ರೊಳಗೆ ಎಲ್ಲ ಮಹಿಳೆಯರು ಮತ್ತು ಹೆಣ್ಣುಮಕ್ಕಳ ವಿರುದ್ಧದ ಎಲ್ಲ ರೀತಿಯ ತಾರತಮ್ಯವನ್ನು ಕೊನೆಗೊಳಿಸಬೇಕು. ಲೈಂಗಿಕ ಮತ್ತು ಇತರ ರೀತಿಯ ಶೋಷಣೆ ಸೇರಿದಂತೆ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಮಹಿಳೆಯರ ಮೇಲಿನ ಎಲ್ಲ ರೀತಿಯ ಹಿಂಸಾಚಾರಗಳನ್ನು ನಿವಾರಿಸಬೇಕು. ಬಾಲ್ಯ ವಿವಾಹ, ಬಲವಂತದ ವಿವಾಹ, ಸ್ತ್ರೀ ಜನನಾಂಗದ ಊನಗೊಳಿಸುವಿಕೆಯಂಥಹ ಹಾನಿಕಾರಕ ಅಭ್ಯಾಸಗಳನ್ನು ಕೊನೆಗೊಳಿಸಬೇಕು ಮತ್ತು ಸರಕಾರಿ, ಸಾರ್ವಜನಿಕ ಹಾಗು ಖಾಸಗಿ ವಲಯದ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ಮತ್ತು ಪುರುಷರಿಗೆ ಮುಕ್ತ ಮತ್ತು ಸಮಾನ ಅವಕಾಶಗಳನ್ನು ನೀಡಬೇಕು ಎಂದು ಈ ಗುರಿಯು ವಿಧಿಸುತ್ತದೆ.

ಲಿಂಗ ಸಮಾನತೆ ಎನ್ನುವುದು ಯಾವುದೇ ಒಂದು ಬಣದ ಒಳಿತು ಮತ್ತು ಇನ್ನೊಂದು ಬಣದ ಕೆಡುಕಿನ ವಿಷಯವಲ್ಲ. ಅಂದರೆ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವುದು ಎಂದರೆ ಪುರುಷರನ್ನು ಅವಕಾಶ ವಂಚಿರನ್ನಾಗಿಸುವುದು ಎಂದು ಅರ್ಥವಲ್ಲ. ಎರಡೂ ಬಣದವರು ಎಲ್ಲ ರೀತಿಯ ಕೆಲಸಗಳನ್ನೂ ಮಾಡುವಂತಾಗಬೇಕೆನ್ನುವುದು ಇಲ್ಲಿಯ ಆಶಯ. ವಿಶೇಷವಾಗಿ ಪುರುಷ ಮತ್ತು ಸ್ತ್ರೀಯರು ಸಮಾನವಾಗಿ ಆಥಿಕ ನೆಲೆಯಲ್ಲಿ ಉತ್ಪಾದಕ ಚಟುವಟಿಕೆಗಳಲ್ಲಿ ಭಗವಹಿಸುವುದರಿಂದ ತಳ ಮಟ್ಟದಲ್ಲಿ ಕುಟುಂಬದ ಮತ್ತು ಮೇಲ್ಮಟ್ಟದಲ್ಲಿ ಇಡೀ ದೇಶದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗುತ್ತದೆ. ಆದರೆ ಇಂದಿನ ಪರಿಸ್ಥಿತಿ ಹೀಗಿಲ್ಲ. ಜಗತ್ತಿನ ಸರಾಸರಿ ನೋಡಿದಾಗ ಶಿಕ್ಷಣದ ವಿಷಯದಲ್ಲಿ ಪುರುಷ

ಮತ್ತು ಸ್ತ್ರೀಯರ ನಡುವೆ ದೊಡ್ಡ ಅಂತರವಿರದಿದ್ದರೂ, ಮಧ್ಯಮ ನಿರ್ವಹಣಾ ಹಂತದ ಕೆಲಸಗಳಲ್ಲಿರುವ ಮಹಿಳೆಯರ ಪ್ರಮಾಣ ಮೂರನೆ ಒಂದು ಭಾಗಕ್ಕಿಂತ ಕಡಿಮೆ. ಪತಿ–ಪತ್ನಿ ಇಬ್ಬರೂ ಆರ್ಥಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದರೂ ಮತ್ತು ಪತ್ನಿಯ ವರಮಾನ ಪತಿಗಿಂತ ಹೆಚ್ಚಿರುವ ಸಂಧರ್ಭದಲ್ಲಿ ಕೂಡ, ಪತ್ನಿಯರು ಕೆಲಸ ತೊರೆದು ಮನೆಯಲ್ಲಿ ಉಳಿಯುವ ಪ್ರಮಾಣ ಶೇಕಡ 80ಕ್ಕಿಂತ ಹೆಚ್ಚು. ಇಂತಹ ತಾರತಮ್ಯಗಳನ್ನು ನಿವಾರಿಸಬೇಕಾದರೆ ಮಹಿಳೆಯರಿಗೆ ಭಾಗವಹಿಸುವಿಕೆಯ ಅವಕಾಶಗಳನ್ನು ಸೃಷ್ಟಿಸಬಲ್ಲ ಸಾಂಸ್ಥಿಕ ರಚನೆಗಳು ಬಲಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಬಹುತೇಕ ತಜ್ಞರು ಸಹಕಾರಿ ಸಂಘಟನೆಗಳು ಮಹಿಳಾ ಸಬಲೀಕರಣಕ್ಕೆ ಉತ್ತಮ ಪರಿಸರ ಒದಗಿಸಬಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಸಹಕಾರಿ ಸಂಘಟನೆಗಳ ಪಾತ್ರ:**

ಸಹಕಾರಿ ಸಂಘಟನೆಗಳು ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವಲ್ಲಿ ಮೂರು ಮುಖ್ಯ ವಿಧಾನದಲ್ಲಿ ಸಹಕಾರಿಯಾಗಿವೆ ಎಂದು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ವರದಿಯು ತಿಳಿಸುತ್ತದೆ. ಅವುಗಳೆಂದರೆ, ಉದ್ಯೋಗ ಮತ್ತು ಆದಾಯದ ಅವಕಾಶಗಳನ್ನು ನೀಡುವುದು, ಆರ್ಥಿಕ ಭಾಗವಹಿಸುವಿಕೆಯನ್ನು (ಎಕೊನೊಮಿಕ್ ಡೆಮೋಕ್ರಸಿ) ಸಕ್ರಿಯಗೊಳಿಸುವುದು ಮತ್ತು ನಿರ್ವಹಣಾ ಅನುಭವವನ್ನು ನೀಡುವುದು ಹಾಗು ತಮ್ಮದೇ ಆದ ಆರ್ಥಿಕ ಸಂಘಟನೆಗಳನ್ನು ಕಟ್ಟಿಕೊಳ್ಳಲು ಸಹಕರಿಸುವುದು.

ಸಹಕಾರಿ ಚಳುವಳಿಯು ವಿಶೇಷವಾಗಿ ಅನೌಪಚಾರಿಕ ಆರ್ಥಿಕ ಕ್ಷೇತ್ರದಲ್ಲಿ ತೊಡಗಿಕೊಂಡ ಮಹಿಳೆಯರನ್ನು ಸಂಘಟಿಸಲು ನೆರವಾಗಿದೆ. ಉದಾಹರಣೆಗೆ ಮನೆಗೆಲಸ ಮಾಡುವವರು, ಮನೆಯಲ್ಲೇ ತಿಂಡಿ ತಿನಿಸುಗಳನ್ನು ಮಾಡಿ ಮಾರವವರು, ಗೃಹಾಧಾರಿತ ಸಣ್ಣ ಕೈಗಾರಿಕೆ/ಉದ್ಯಮಗಳಲ್ಲಿ ನಿರತರಾಗಿರುವವರು ಇತ್ಯಾದಿ ಮಹಿಳೆಯರು ಒಟ್ಟು ಸೇರಿ ಜೀವನೋಪಾಯ ಕಂಡುಕೊಳ್ಳಲು ಸಹಕಾರಿ ಮಾರ್ಗ ಉತ್ತಮವೆಂದು ಏಶ್ಯಾ ಮತ್ತು ಆಫ್ರಿಕದ ಹಲವು ದೇಶಗಳ ಉದಾಹರಣೆಗಳಿಂದ ತಿಳಿಯುತ್ತದೆ. ಹೀಗೆಯೇ ತಮ್ಮ ತಾತ್ವಿಕ ನೆಲೆಗಟ್ಟಿನಿಂದಾಗಿ ಸಹಕಾರಿ ಸಂಸ್ಥೆಗಳು ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವುದು, ಅವರ ಭಾಗವಹಿಸುವಿಕೆಗೆ ಅನುಕೂಲವಾಗುವ ವಾತಾವರಣ ಸೃಷ್ಟಿಸುವುದು, ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವುದು, ಅವರೇ ಸ್ವತಂತ್ರವಾಗಿ ಆರ್ಥಿಕ ಚಟುವಟಿಕೆಗಳನ್ನು ನಡೆಸುವಂತೆ ಮಾಡುವುದು ಮತ್ತು ಮಹಿಳೆಯರಲ್ಲಿ ವೃತ್ತಿಪರತೆ ಬೆಳೆಯಲು ಸಹಕರಿಸುವಂಥ ಚಟುವಟಿಕೆಗಳನ್ನು ಯಾವಾಗಲೂ ರೂಪಿಸುತ್ತವೆ.

ಸಹಕಾರಿ ಕ್ಷೇತ್ರದಿಂದಾಗಿ ಹಲವಾರು ಮಹಿಳೆಯರು ತಮ್ಮ ಸಬಲೀಕರಣವನ್ನು ತಾವೇ ಸಾಧಿಸುವಂತಹ ಹಲವಾರು ಉಪಕ್ರಮಗಳ ಉದಾಹರಣೆಳು ಲಭ್ಯವಿವೆ. ಉದಾಹರಣೆಗೆ 2008ರಲ್ಲಿ ಆರ್ಥಿಕ ಕುಸಿತದಿಂದಾಗಿ ತಮ್ಮ ಕುಟುಂಬಗಳು ಆರ್ಥಿಕ ಸಂಕಷ್ಟದಲ್ಲಿದ್ದಾಗ ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿ 17ಜನ ವಲಸೆಗಾರ ಮಹಿಳೆಯರು ಸೇರಿ 'ಬಿಯಾಂಡ್ ಕೇರ್ ಶಿಶುಪಾಲನಾ ಸಹಕಾರಿ ಸಂಘವನ್ನು' ಸ್ಥಾಪಿಸಿದರು. ಸದಸ್ಯರೇ ಕೆಲಸಗಾರರಾಗಿರುವ ಈ ಸಹಕಾರಿ ಸಂಸ್ಥೆ ಶಿಶುವಿಹಾರನ್ನು ನಡೆಸುವುದರ ಜೊತೆಗೆ ಶಿಶುಪಾಲನೆಗೆ ಸಂಬಂಧಿಸಿದಂತೆ ಹಲವು ತರಬೇತಿ ಕಾರ್ಯಕ್ರಮಗಳನ್ನೂ ಮಹಿಳೆಯರಿಗಾಗಿ ನಡೆಸುತ್ತಿದೆ. 1997ರಲ್ಲಿ ಇಟಲಿಯಲ್ಲಿ ಆರಂಭವಾದ 'ಕನ್ಸೋರ್ಜಿಯೋ ಕೋಪರ್ನಿಕೋ' ಆರು ಸಾಮಾಜಿಕ ಸಹಕಾರಿ ಸಂಸ್ಥೆಗಳು ಸೇರಿ ಸ್ಥಾಪಿಸಿದ ಒಕ್ಕೂಟವಾಗಿದ್ದು, ಒಟ್ಟಾರೆ ಸದಸ್ಯರು ಮತ್ತು ಕೆಲಸಗಾರರಲ್ಲಿ ಶೇಕಡ 76 ರಷ್ಟು ಮಹಿಳೆಯರನ್ನು ಹೊಂದಿದೆ. ಈ ಸಹಕಾರಿ ಒಕ್ಕೂಟವು ವಲಸಿಗರು, ಅನಾಥರು, ಸಾಮಾಜಿಕವಾಗಿ ಹಿಂದುಳಿದವರು, ಅಂಗವೈಕಲ್ಯ ಹೊಂದರುವವರು, ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾದ ಅಪರಾಧಿಗಳು ಮುಂತಾದವರುಗಳಿಗೆ ಉದ್ಯೋಗಾವಕಾಶ

ಮತ್ತು ವರಮಾನದ ಮೂಲಗಳನ್ನು ಸೃಷ್ಟಿಸುವ ಕೆಲಸ ಮಾಡುತ್ತಿದೆ.

ಬ್ರೆಜಿಲ್‌ನಲ್ಲಿರುವ ಬಬಾಸು ತೆಂಗು (ಬಬಾಸು ಎನ್ನುವುದು ತೆಂಗಿನ ಜಾತಿಗೆ ಸೇರಿದ, ಅದಕ್ಕಿಂತ ಗಾತ್ರದಲ್ಲಿ ಸಣ್ಣದಾಗಿರುವ ಒಂದು ಬಗೆಯ ಕಾಯಿಯಾಗಿದ್ದು, ಅದರ ಬೀಜದಿಂದ ಎಣ್ಣೆ ಯತಯಾರಿಸುವುದು ಮತ್ತು ಗಿಡದ ನಾರಿನಿಂದ ಹಗ್ಗ ಮಾಡುವುದು ಇತ್ಯಾದಿ ಮಾಡಲಾಗುತ್ತದೆ) ಒಡೆಯುವವರ ಅಂತಾರಾಜ್ಯ ಸಹಕಾರಿಯು ಮೂರು ಲಕ್ಷಕ್ಕೂ ಹೆಚ್ಚಿನ ಮಹಿಳೆಯರಿಗೆ ಕೆಲಸ ಮತ್ತು ಸ್ವ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಿದೆ. ಈ ಸಂಘಟನೆಯ ಪ್ರಯತ್ನದಿಂದಾಗಿ ಬಬಾಸುವಿನಿಂದ ವಿವಿಧ ವಸ್ತುಗಳನ್ನು ತಯಾರಿಸಲಾಗುತ್ತಿದ್ದು ಅವುಗಳೀಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ದೊರೆತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಬಬಾಸು ಬೆಳೆಯುವ ರೈತರಿಗೆ ಈ ಸಹಕಾರಿ ಸಂಘದಿಂದಾಗಿ ಉತ್ತಮ ಆದಾಯ ದೊರೆತು ಅವರ ಕುಟುಂಬಗಳು ನೆಮ್ಮದಿಯ ಜೀವನ ನಡೆಸುವಂತಾಗಿದೆ. ಹೀಗೆ ಸಹಕಾರಿ ಮಾರ್ಗದ ಮೂಲಕ ಮಹಿಳೆಯರು ತಮ್ಮ ಏಳಿಗೆಯ ಜೊತೆ ಜೊತೆಗೆ ರೈತ ಕುಟುಂಬಗಳ ಏಳಿಗೆಗೂ ಕಾರಣರಾಗಿದ್ದಾರೆ. ಮೆಕ್ಸಿಕೊದ ಅಲ್ವರಾಡೊ ಲಗೂನ್ ಪ್ರದೇಶದಲ್ಲಿ 2002ರಲ್ಲಿ ಹನ್ನೆರಡು ಜನ ಮಹಿಳೆಯರು ಸೇರಿ 'ಮುಜೇರೆಸ್ ಎಕ್ಸ್‌ಪೆರಿಮೆಂಟಾಡೊ ಸಹಕಾರಿ' ಯನ್ನು ಸ್ಥಾಪಿಸಿದರು. ಸಂಪೂರ್ಣವಾಗಿ ಮಹಿಳೆಯರೇ ಯೋಜಿಸಿ, ರಚಿಸಿ ಪರಸ್ಪರ ಭಾಗವಹಿಸುವಿಕೆಯ ಪ್ರಜಾಸತ್ತಾತ್ಮಕ ಮಾದರಿಯಲ್ಲಿ ಆರಂಭಿಸಿದ ಈ ಸಹಕಾರಿ ಸಂಘವು ಮಹಿಳೆಯರ ಭಾಗವಹಿಸುವಿಕೆಗೆ ಹೊಸಮಾದರಿಯೊಂದನ್ನು ಹುಟ್ಟುಹಾಕಿದ ಪರಿಣಾಮವಾಗಿ ಇಂದು ಈ ಮಾದರಿ ಸಹಕಾರಿ ಸಂಘಗಳು ಮೆಕ್ಸಿಕೋದ ಸಮುದ್ರ ತಟದ ಪ್ರದೇಶದಲ್ಲೆಲ್ಲ ಹಬ್ಬಲು ಕಾರಣವಾಯ್ತು. ಮನೆಯಲ್ಲಿ ಅಕ್ವೇರಿಯಂನಲ್ಲಿ ಸಾಕುವ ಸೌಂದರ್ಯದ ಮೀನುಗಳನ್ನು ಬೆಳೆಸಿ, ಅವುಗಳನ್ನು ಮಾರುವ ಚಟುವಟಿಕೆಯಲ್ಲಿ ತೊಡಗಿರುವ ಈ ಸಹಕಾರಿ ಸಂಘ ಮೆಕ್ಸಿಕೋದಲ್ಲಿ ಮಹಿಳೆಯರು ಎಂದೂ ಭಾಗವಹಿಸದಿದ್ದ ಆರ್ಥಿಕ ಚಟುವಟಿಕೆಯೊಂದು ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ನಡೆಸುವ ಉದ್ದಿಮೆಯಾಗಿ ಪರಿವರ್ತಿತವಾಗುವಂತೆ ಮಾಡಿದೆ.

ಸಹಕಾರಿ ಮಾರ್ಗದಲ್ಲಿ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಿದ ಮಹಿಳೆಯರ ಅತ್ಯುತ್ತಮ ಉದಾಹರಣೆ ಭಾರತದಲ್ಲಿಯೇ ದೊರೆಯುತ್ತದೆ. ಗುಜರಾತ್‌ನಲ್ಲಿ ಆರಂಭವಾದ ಸ್ವಯಂ ಉದ್ಯೋಗಿ ಮಹಿಳಾ ಸಂಘ – ಸೆಲ್ಫ್ ಎಂಪ್ಲಾಯ್ಡ್ ವುಮೆನ್ಸ್ ಅಸೋಸಿಯೇಶನ್ (SEWA) – ಇಂದು 14 ರಾಜ್ಯಗಳಲ್ಲಿ ಅನೌಪಚಾರಿಕ ಕ್ಷೇತದ 1.5 ದಶಲಕ್ಷ ಮಹಿಳಾ ಕಾರ್ಮಿಕರನ್ನು ಹೊಂದಿ ಕೆಲಸ ನಿರ್ವಹಿಸುತ್ತಿದೆ. ಹೊಸ ಹೊಸ ಮಹಿಳಾ ಸಹಕಾರಿ ಸಂಘಗಳನ್ನು ವಿವಿಧ ವ್ಯವಹಾರ ಕ್ಷೇತ್ರದಲ್ಲಿ ಆರಂಭಿಸಿ, 115 ಸಹಕಾರಿ ಸಂಸ್ಥೆಗಳ ಒಕ್ಕೂಟವನ್ನು ಸ್ಥಾಪಿಸಿ, ಕರಕುಶಲ ಸಾಮಗ್ರಿಗಳು, ಡೈರಿ, ಕೃಷಿ ಉತ್ಪನ್ನಗಳ ಸಂಸ್ಕರಣ, ಬ್ಯಾಂಕಿಂಗ್, ಮಾರಾಟ ಸೇವೆ ಹೀಗೆ ಹಲವು ರೀತಿಯ ವ್ಯವಹಾರಗಳನ್ನು ಯಶಸ್ವಿಯಾಗಿ ಖಇಘಂ ನಡೆಸುತ್ತಿದೆ.

ಮೇಲಿನವುಗಳೆಲ್ಲ ಮಹಿಳೆಯರೇ ನಡೆಸುವ ಸಹಕಾರಿ ಸಂಘಗಳು ಮತ್ತು ಅವುಗಳಿಂದ ಮಹಿಳೆಯರಿಗೆ ಆದ ಉಪಯೋಗಗಳ ಉದಾಹರಣೆಯಾದರೆ, ಜಪಾನಿನ ಗ್ರಾಹಕ ಸಹಕಾರಿ ಸಂಘಗಳು ಇನ್ನೊಂದು ಮಾದರಿಯನ್ನು ತೋರಿಸಿ ಕೊಟ್ಟಿವೆ. ಜಗತ್ತಿನ ಅತ್ಯಂತ ಶಕ್ತಿಯುತ ಗ್ರಾಹಕ ಸಹಕಾರಿ ಕ್ಷೇತ್ರವನ್ನು ಹೊಂದಿರುವ ಜಪಾನಿನಲ್ಲಿ ಈ ಸಹಕಾರಿ ಸಂಘಗಳ ಶೇಕಡ 75ಕ್ಕಿಂ ಹೆಚ್ಚು ಸದಸ್ಯರು ಮಹಿಳೆಯರು. ಪುರಷರಿಗೆ ಸರಿಸಮನಾಗಿ ಅಥವ ಅವರಿಗಿಂತ ಸಶಕ್ತವಾಗಿ ಸಹಕಾರಿ ಸಂಘಗಳ ಚಟುವಟಿಕೆಗಳನ್ನು ಮಹಿಳೆಯರು ಸಂಘಟಿಸುತ್ತ ಬಂದಿದ್ದಾರೆ. ಜಗತ್ತಿನೆಲ್ಲೆಡೆ ಖಾಸಗೀ ಚಿಲ್ಲರೆ ವ್ಯಾಪಾರದ ಬೆಳವಣಿಗೆ ದೊಡ್ಡರೀತಿಯಲ್ಲಿ ಬಳೆದು ಜೊತೆಗೆ ಇ–ಕಾಮರ್ಸ್ ಮೂಲಕ ಗ್ರಾಹಕರು ನೇರವಾಗಿ ಖರೀದಿ ಮಾಡುವುದು

ಹೆಚ್ಚಾಗಿ ಗ್ರಾಹಕ ಸಹಕಾರಿ ಸಂಘಗಳೆಲ್ಲ ಮುಚ್ಚಿಹೋಗುತ್ತಿದ್ದರೂ, ಇಂದಿಗೂ ಜಪಾನಿನ ಗ್ರಾಹಕ ಸಹಕಾರಿ ಸಂಘಗಳು ಸಶಕ್ತವಾಗಿರುವುದರ ಹಿಂದಿರುವುದು ಮಹಿಳಾ ಸದಸ್ಯರ ಧೃಡ ಸಂಕಲ್ಪ ಮತ್ತು ಸಹಕಾರಿ ಮಾರ್ಗದ ಬಗೆಗಿನ ಅವರ ನಂಬಿಕೆ.

ಲಿಂಗ ಸಮಾನತೆಯ ಪರಿಕಲ್ಪನೆ ಅದರ ಉದ್ದೇಶವನ್ನು ಸಾಧಿಸಬೇಕಾದರೆ, ಮಹಿಳೆಯರೇ ಭಾಗವಹಿಸುವ ಸಹಕಾರಿ ಸಂಘಗಳ ಸ್ಥಾಪನೆಗಿಂತ, ಎಲ್ಲರೂ ಭಾಗವಹಿಸುವ ಸಹಕಾರಿಗಳಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುವಂತೆ ಮಾಡುವುದು ಬಹು ಮುಖ್ಯ. ಮಹಿಳೆಯರು ಕೇವಲ ಗ್ರಾಹಕರಾಗಿ ಭಾಗವಹಿಸುವುದಲ್ಲದೆ, ಕೆಲಸಗಾರರಾಗಿ, ವ್ಯವಸ್ಥಾಪಕರಾಗಿ, ನಿರ್ದೇಶಕರಾಗಿ ಸಹಕಾರಿ ಸಂಸ್ಥೆಗಳಲ್ಲಿ ಭಾಗವಹಿಸುವುದು ಬಹು ಮುಖ್ಯ. ತಾತ್ವಿಕ ನೆಲೆಯಲ್ಲಿ, ಖಾಸಗಿ ಮತ್ತು ಸರಕಾರೀ ವಲಯದ ಸಂಸ್ಥೆಗಳಿಗಿಂತ ಸಹಕಾರಿಗಳು ಹೆಚ್ಚು ಲಿಂಗಸಮಾನತೆಯ ಪರವಾಗಿರುವ ಸಂಘಟನೆಗಳು. ಆದರೆ ಇದು ವಸ್ತುಸ್ಥಿತಿಯಲ್ಲೂ ನಡೆಯವಂತೆ ಮಾಡಬೇಕಿದೆ. ಈ ಎರಡೂ ಪ್ರಮುಖ ಮಾರ್ಗಗಳನ್ನು ಗಮನದಲ್ಲಿಟ್ಟು ನೋಡಿದಾಗ ನಮ್ಮ ಸಹಕಾರಿ ಸಂಘಟನೆಗಳು ಕೆಳಗಿನಂತೆ ಹಲವು ಕಾರ್ಯತಂತ್ರಗಳನ್ನು ಅನುಸರಿಸಬಹುದಾಗಿದೆ.

1. ವಿವಿಧ ಆರ್ಥಿಕ ಚಟುವಟಿಕೆಗಳನ್ನು ನಡೆಸಲು ಮಹಿಳೆಯರು ತಮ್ಮದೇ ಸಹಕಾರಿ ಸಂಘಗಳನ್ನು ರಚಿಸಿಕೊಳ್ಳಲು ಅನುವಾಗುವಂತೆ ಕಾನೂನಿನಲ್ಲಿ ಸೂಕ್ತ ಅವಕಾಶವನ್ನು ಸರಕಾರಗಳು ಕಲ್ಪಿಸಬೇಕು
2. ಇಂತಹ ಸಹಕಾರಿ ಸಂಘಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವು ಸುಲಭವಾಗಿ ದೊರೆಯುವಂತೆ ಯೋಜನೆಗಳನ್ನು ರೂಪಿಸಬೇಕು.
3. ಮಹಿಳಾ ಸಹಕಾರಿ ಸಂಘಗಳ ಸದಸ್ಯರು, ಆಡಳಿತ ಮಂಡಳಿ ಮತ್ತು ಉದ್ಯೋಗಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ರಚಿಸಿ ಅನುಷ್ಠಾನಗೊಳಿಸಲು ಮಹಾಮಂಡಳಗಳು ಮತ್ತು ಸಹಕಾರಿ ತರಬೇತಿ ಸಂಸ್ಥೆಗಳು ಕಾರ್ಯಪ್ರವೃತ್ತರಾಗಬೇಕು
4. ಗ್ರಾಮೀಣ ಪ್ರದೇಶದ ಮತ್ತು ಹೆಚ್ಚು ಶಿಕ್ಷಣ ಹೊಂದಿಲ್ಲದ, ವಿಶೇಷವಾಗಿ ಸಾಮಾಜಿಕ ಕಾರಣಗಳಿಗಾಗಿ ಯಾವುದೇ ಪೂರ್ಣಾವಧಿ ಉದ್ಯೋಗಕ್ಕೆ ಹೋಗಲಾರದ ಅಥವ ಮನೆಯಲ್ಲೇ ಉಳಿಯುವ ಮಹಿಳೆಯರು ಆರ್ಥಿಕ ಸ್ವಾವಲಂಬನೆ ಗಳಿಸಲು ಅನುವಾಗುವಂತೆ ಗೃಹ ಕೈಗಾರಿಕೆಗಳನ್ನು ಸಹಕಾರಿ ಮಾದರಿಯಲ್ಲಿ ಆರಂಭಿಸಲು ಸ್ಥಳೀಯ ಸಹಕಾರಿ ಸಂಘಗಳು, ಸಹಕಾರಿ ಮಹಾಮಂಡಳಗಳು ಮತ್ತು ಸರಕಾರದ ಇಲಾಖೆಗಳು ಕ್ರಮ ಕೈಗೊಳ್ಳಬೇಕು
5. ಎಲ್ಲ ಸಹಕಾರಿ ಸಂಘಗಳಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಂಡು ಕ್ರಮೇಣ ಶೇಕಡ 50 ರಷ್ಟು ಮಹಿಳಾ ಉದ್ಯೋಗಿಗಳು ಇರುವಂತೆ ಮಾಡಲು ಪ್ರಯತ್ನಿಸಬೇಕು
6. ಮಹಿಳಾ ಉದ್ಯೋಗಿಗಳಿಗೆ ತರಬೇತಿ ನೀಡಿ ಅವರು ವ್ಯವಸ್ಥಾಪನಾ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಅನುವುಮಾಡಿಕೊಡಬೇಕು ಮತ್ತು ಕನಿಷ್ಟ ಶೇಕಡ 30ರಷ್ಟು ವ್ಯವಸ್ಥಾಪನಾ ಹುದ್ದೆಗಳಿಗೆ ಮಹಿಳೆಯರನ್ನು ನೇಮಿಸಬೇಕು
7. ಎಲ್ಲ ಸಹಕಾರಿ ಸಂಸ್ಥೆಗಳ ನಿರ್ದೇಶಕ ಮಂಡಳಿಗಳಲ್ಲಿ ಕಾನೂನಿನಲ್ಲಿ ನಿಗದಿಪಡಿಸಿರುವ ಸಂಖ್ಯೆಯನ್ನು ಮೀರಿದಂತೆ ಮಹಿಳಾ ಸದಸ್ಯರಿಗೆ ಅವಕಾಶ ಕಲ್ಪಿಸಿ ಕ್ರಮೇಣ ಶೇಕಡ 40 ರಷ್ಟು ಮಹಿಳಾ ಸದಸ್ಯರು ಇರುವಂತೆ ಮಾಡಲು ಪ್ರಯತ್ನಿಸಬೇಕು

8. ಎಲ್ಲ ಸಹಕಾರಿ ಸಂಘಗಳೂ ಮಹಿಳಾ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಮತ್ತು ಮಹಿಳಾ ಸದಸ್ಯರಿಗೆ ವಿಶೇಷ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ನಡೆಸಬೇಕು.

9. ಸಹಕಾರಿ ಸಂಘಗಳು ಮಹಿಳೆಯರಿಗೆ ಆರ್ಥಿಕ ಚಟುವಟಿಕೆಗಳನ್ನು ನಡೆಸಲು ಅನುವಾಗುವಂತೆ ವಿಶೇಷ ಪತ್ತಿನ ಯೋಜನೆಗಳನ್ನು ರೂಪಿಸಬೇಕು

10. ಶಿಕ್ಷಣ ಮತ್ತು ಆರೋಗ್ಯದ ಅಗತ್ಯಗಳಿಗಾಗಿ ಹಣದ ಅಗತ್ಯವಿರುವ ಮಹಿಳೆಯರಿಗೆ ಕಡಿಮೆ ಬಡ್ಡಿದರದ ಸಾಲ ಯೋಜನೆಗಳನ್ನು ಆರಂಭಿಸಬೇಕು

11. ಮಹಿಳಾ ಸಬಲೀಕರಣಕ್ಕೆ ಸಹಕಾರಿ ಸಂಸ್ಥೆಗಳು ನೀಡುವ ವಿಶೇಷ ಸವಲತ್ತುಗಳ ಬಗ್ಗೆ ಜನರಿಗೆ ತಿಳಿಯುವಂತೆ ಪ್ರಚಾರ ನೀಡಬೇಕು

12. ಸರಕಾರದಿಂದ/ಸರಕಾರಿ ಸಂಸ್ಥೆಗಳಿಂದ ಮಹಿಳೆಯರಿಗಾಗಿ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಮಹಿಳೆಯರು ಮತ್ತು ಯುವತಿಯರಿಗಾಗಿ ಲಭ್ಯವಿರುವ ವಿವಿಧ ಯೋಜನೆಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ಅವರುಗಳಿಗೆ ತಲುಪಿಸುವ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಬೇಕು

13. ದೊಡ್ಡ ಸಹಕಾರಿ ಸಂಸ್ಥೆಗಳು ಮಹಿಳಾ ಸಬಲೀಕರಣ ಚಟುವಟಿಕೆಗಳನ್ನು ತಮ್ಮ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಅನುಷ್ಠಾನಗೊಳಿಸಬೇಕು

14. ಸಹಕಾರಿ ಸಂಸ್ಥೆಗಳ ಮಹಿಳಾ ಉದ್ಯೋಗಿಗಳು ಅಥವ ಸದಸ್ಯರು ಸಂಘದಲ್ಲಿ ಯಾವುದೇ ರೀತಿಯ ಶೋಷಣೆಗೆ ಒಳಗಾಗದಂತೆ ನಿಯಮಾವಳಿಗಳನ್ನು ರಚಿಸಿ ಚಾಲ್ತಿಗೆ ತರಬೇಕು

15. ಹೆಚ್ಚು ಲಿಂಗ ಸಮಾನತೆ ಸಾಧಿಸುವ ಸಹಕಾರಿ ಸಂಘಗಳನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಬೇಕು

ಸಹಕಾರಿ ಸಂಸ್ಥೆಗಳು ಮಹಿಳಾ ಪರ ಮತ್ತು ಮಹಿಳಾ ಸ್ನೇಹಿ ಸಂಸ್ಥೆಗಳೆಂದು ಜಗತ್ತಿನಾದ್ಯಂತ ಹೆಸರುಗಳಿಸಿವೆ. ಅಂತೆಯೇ ಸುಸ್ಥಿರ ಅಭಿವೃದ್ಧಿಯ ಲಿಂಗಸಮಾನತೆಯ ಗುರಿಯನ್ನು ಮುಟ್ಟುವಲ್ಲಿ ಸಹಕಾರಿ ಸಂಸ್ಥೆಗಳ ಜವಾಬ್ದಾರಿ ಬಹು ಮುಖ್ಯವಾದುದು. ಪುರುಷರು ಮತ್ತು ಮಹಿಳೆಯರ ನಡುವೆ ಇರುವ ತಾರತಮ್ಯವನ್ನು ಕಡಿಮೆ ಮಾಡುತ್ತ, ಎಲ್ಲರನ್ನೂ ಸಮಾನವಾಗಿ ಕಾಣುವ ವಾತಾವರಣವನ್ನು ಸೃಷ್ಟಿಸುತ್ತಾ, ಮಹಿಳೆಯರು ಸಹಕಾರಿ ಮಾದರಿಯನ್ನು ಸ್ವಇಚ್ಛೆಯಿಂದ ಆಯ್ದುಕೊಳ್ಳುವಂತೆ ಪ್ರೇರೇಪಿಸುತ್ತಾ ಸಾಗಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಹಕಾರಿ ಸಂಘಟನೆಗಳು ತಮ್ಮ ತಮ್ಮ ಪರಿಸರದ ಅಗತ್ಯಗಳನ್ನು ಅರಿತು ಸೂಕ್ತ ಕಾರ್ಯಕ್ರಮಗಳನ್ನು ಸಂಘಟಿಸಿದಲ್ಲಿ ಗುರಿ ಸಾಧನೆ ಸುಗಮವಾಗುವುದರಲ್ಲಿ ಸಂಶಯವಿಲ್ಲ.

# ಎಸ್‌ಡಿಜಿ 6 – ಶುದ್ಧ ನೀರು ಮತ್ತು ನೈರ್ಮಲ್ಯ

ಜಗತ್ತಿನೆಲ್ಲೆಡೆ, ಎಲ್ಲರಿಗೂ ಉತ್ತಮ ಗುಣಮಟ್ಟದ ನೀರು ಮತ್ತು ನೈರ್ಮಲ್ಯ ದೊರಯುವಂತೆ ಮಾಡುವುದು ಮತ್ತು ಅವುಗಳ ಸುಸ್ಥಿರ ವ್ಯವಸ್ಥಾಪನೆ (Ensure availability and sustainable management of water and sanitation for all) ಅಭಿವೃದ್ಧಿಯ ದ್ಯೋತಕಗಳಲ್ಲಿ ಒಂದೆಂಬುದನ್ನು ಈ ಗುರಿಯು ಸೂಚಿಸುತ್ತದೆ. ಈ ಗುರಿಯು ಸುಸ್ಥಿರ ಅಭಿವೃದ್ಧಿಯ ದ್ಯೋತಕವಾದ ಉತ್ತಮ ಆರೋಗ್ಯ ಮತ್ತು ಪೋಶಣೆಗೆ ಮೂಲಾಧಾರವಾದ ನೀರು ಮತ್ತು ನೈರ್ಮಲ್ಯದ ಬಗ್ಗೆ ನಿರ್ದಿಷ್ಟ ಸಾಧನೆಯನ್ನು ಅಪೇಕ್ಷಿಸುತ್ತದೆ. 2030ರ ಒಳಗೆ ಜಗತ್ತಿನೆಲ್ಲಡೆ ಎಲ್ಲ ಜನರಿಗೆ ಶುದ್ಧ ನೀರು ದೊರೆಯುವಂತೆ ಮಾಡಬೇಕೆಂದೂ ಮತ್ತು ಎಲ್ಲರ ಪರಿಸರ ಶಚಿತ್ವದಿಂದ ಕೂಡಿರುವಂತೆ ನೋಡಿಕೊಳ್ಳಬೇಕೆಂದೂ ಈ ಗುರಿಯು ವಿಧಿಸುತ್ತದೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸಾರ್ವತ್ರಿಕ ಮತ್ತು ಸಮಾನ ಪ್ರವೇಶ, ಎಲ್ಲರಿಗೂ ಸಮಾನ ನೈರ್ಮಲ್ಯದ ಸಾಧನೆ, ಮುಕ್ತ ಮಲವಿಸರ್ಜನೆಯ ಪೂರ್ಣ ನಿಲುಗಡೆ, ಮಾಲಿನ್ಯ ಮತ್ತು ಕೈಗಾರಿಕೆಗಳಿಂದ ಅಪಾಯಕಾರಿ ರಾಸಾಯನಿಕಗಳ ಬಿಡುಗಡೆಯನ್ನು ಈಗಿರುವ ಪ್ರಮಾಣದ ಆರ್ಧಕ್ಕೆ ಇಳಿಸುವುದು, ತ್ಯಾಜ್ಯ ನೀರಿನ ಮರುಸಂಸ್ಕರಣೆ ಮತ್ತು ಉಪಯೋಗವನ್ನು ಈಗಿನ ಪ್ರಮಾಣದ ದುಪ್ಪಟ್ಟುಗೊಳಿಸುವುದು, ನೀರಿನ ಸಮಸ್ಯೆಯಿಂದ ಬಳಲುತ್ತಿರುವ ಜನಸಂಖ್ಯೆಯ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವುದು ಮತ್ತು ಜಲ ಸಂಪನ್ಮೂಲ ನಿರ್ವಹಣೆಯ ಗುಣಮಟ್ಟವನ್ನು ಹೆಚ್ಚಿಸುವುವ ಕುರಿತಂತೆ ಗುರಿಗಳನ್ನು ನಿಗದಿಪಡಿಸಲಾಗಿದೆ. 2020ರ ವೇಳೆಗೆ ಪರ್ವತಗಳು, ಕಾಡುಗಳು, ಗದ್ದೆಗಳು, ನದಿಗಳು, ಜಲಚರಗಳು ಮತ್ತು ಸರೋವರಗಳನ್ನು ಸೇರಿದಂತೆ ನೀರಿನ ಸಂಬಂಧಿತ ಪರಿಸರ ವ್ಯವಸ್ಥೆಗಳನ್ನು ರಕ್ಷಿಸಿ ಪುನರ್‌ಸ್ಥಾಪಿಸುವ, 2030 ವೇಳೆಗೆ ನೀರಿನ ಕೊಯ್ಲು, ನೀರಿನ ದಕ್ಷ ಉಪಯೋಗ, ನೀರಿನ ಮರುಬಳಕೆಗಳಿಗೆ ಸಂಬಂಧಿಸಿದ ತಂತ್ರಜ್ಞಾನವನ್ನು ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಉತ್ತಮವಾಗಿ ಅಭಿವೃದ್ಧಿಪಡಿಸಿ ಎಲ್ಲರಿಗೂ ದೊರೆಯುವಂತೆ ಮಾಡುವ ಹಾಗೂ ನೀರು ಮತ್ತು ನೈರ್ಮಲ್ಯದ ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಯನ್ನು ಬೆಂಬಲಿಸಿ, ಉತ್ತೇಜಿಸುವ ಗುರಿಗಳನ್ನು ಎಸ್‌ಡಿಜಿ 6ರಲ್ಲಿ ನಿಗದಿಪಡಿಸಲಾಗಿದೆ.

ಸುಸ್ಥಿರ ಅಭಿವೃದ್ಧಿಯ ಒಂದು ಪ್ರಮುಖ ಲಕ್ಷಣವೆಂದರೆ ಸುಸ್ಥಿರ ಆರೋಗ್ಯ. ಅನಾರೋಗ್ಯಕ್ಕೆ ಕಾರಣವಾಗುವ ಅಂಶಗಳಲ್ಲಿ ಪ್ರಮುಖವಾದುದು ಅಶುಚಿಯಾದ ನೀರಿನ ಸೇವನೆ. ಜಗತ್ತಿನಲ್ಲಿ ಉತ್ತಮ ನೀರು ಮತ್ತು ನೈರ್ಮಲ್ಯ ದೊರೆಯದಿರವ ಜನಸಂಖ್ಯೆ ಇಂದಿಗೂ ಬಹಳ ದೊಡ್ಡದಾಗಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ವರದಿಯಲ್ಲಿ ಉಲ್ಲೇಖಿಸಿರುವಂತೆ ಜಗತ್ತಿನಾದ್ಯಂತ ಶುದ್ಧ ಕುಡಿಯುವ ನೀರನ್ನು ನಿರಂತರವಾಗಿ ಪಡೆಯಲಾಗದಿರುವ ಜನಸಂಖ್ಯೆ ಸುಮಾರು 663 ದಶಲಕ್ಷದಷ್ಟಿದ್ದರೆ, ಸುಮಾರು 1.8 ಬಿಲಿಯನ್ ಜನ ಅಶುದ್ಧ ನೀರನ್ನೇ ಬಳಸುತ್ತಿದ್ದಾರೆ. ಶೌಚಾಲಯಗಳಂತಹ ನೈರ್ಮಲ್ಯದ ಅಗತ್ಯಗಳನ್ನು ಹೊಂದಿಲ್ಲದ ಜನಸಂಖ್ಯೆ ಸುಮಾರು 2.4 ಬಿಲಿಯನ್‌ನಷ್ಟಿದೆ. 2025ರ ವೇಳೆಗೆ ಜಗತ್ತಿನ ಅರ್ಧದಷ್ಟು ಜನಸಂಖ್ಯೆ ಒಂದಲ್ಲ ಒಂದು ರೀತಿಯಲ್ಲಿ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುತ್ತದೆ ಎಂದೂ ಈ ವರದಿಯಲ್ಲಿ ತಳಿಸಲಾಗಿದೆ. ನೀರಿನ ಸಮಸ್ಯೆಗಳನ್ನು ಎದುರಿಸುತ್ತಿರುವ ಜನರಲ್ಲಿ ಗ್ರಾಮೀಣ ಜನತೆ ಮತ್ತು ನಗರವಾಸಿಗಳಿಬ್ಬರೂ ಸೇರಿದ್ದಾರಾದರೂ, ಈ ಎರಡೂ ಪ್ರದೇಶದಲ್ಲಿ ಸಮಸ್ಯೆ ಎದುರಿಸುತ್ತಿರುವವರೆಲ್ಲರೂ ಬಡಜನರು. ಆದುದರಿಂದ ನೀರು ಮತ್ತು ನೈರ್ಮಲ್ಯದ ಗುರಿಗಳನ್ನು ಸಾಧಿಸಬೇಕಾದರೆ ಎಲ್ಲ ದೇಶಗಳ ಎಲ್ಲ ಕ್ಷೇತ್ರಗಳೂ

ಕೈಜೋಡಿಸಬೇಕಾದ ಅಗತ್ಯವಿದೆ.

**ಸಹಕಾರಿ ಸಂಘಟನೆಗಳ ಪಾತ್ರ :**

ಸಹಕಾರಿ ಸಂಘಟನೆಗಳು 'ಸಮುದಾಯ ಕಾಳಜಿ' ಹೊಂದಿರುವ ಆರ್ಥಿಕ ಸಂಘಟನೆಗಳು. ಆದುದರಿಂದ ಸಮುದಾಯದ ಸಾರ್ವಜನಿಕ ಉಪಯೋಗದ ಯಾವುದೇ ಸೇವೆಯನ್ನು ಸಹಕಾರಿ ಸಂಘಗಳು ಸಮರ್ಪಕವಾಗಿ ನಿರ್ವಹಿಸಬಲ್ಲವು. ನೀರು ಬಹುಕಾಲದಿಂದ ಜನರ ಅಗತ್ಯದ ಮತ್ತು ಅಮೂಲ್ಯ ವಸ್ತುವಾಗಿದ್ದು ನೀರಿನ ಸಮರ್ಪಕ ವಿತರಣೆ ಮತ್ತು ಬಳಕೆಯಬಗ್ಗೆ ಸಹಕಾರಿ ಕ್ಷೇತ್ರವು ಮೊದಲಿನಿಂದಲೂ ಆಸಕ್ತಿ ವಹಿಸಿದೆ. ಹಲವು ದೇಶಗಳಲ್ಲಿ ಸಾರ್ವಜನಿಕ ನೀರು ವಿತರಣಾ ವ್ಯವಸ್ಥೆಯನ್ನು ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತಿವೆ. ಉದಾಹರಣೆಗೆ, ಅಮೇರಿಕೆಯಲ್ಲಿ ಸ್ಥಳೀಯ ಮುನಿಸಿಪಲ್ ಸಂಸ್ಥೆಗಳಷ್ಟೇ ಪ್ರಮುಖವಾಗಿ ನೀರಿನ ಸರಬರಾಜು ಜವಾಬ್ದಾರಿಯನ್ನು ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತಿವೆ.

ನೀರು ನಿರ್ವಹಣೆಯ ಹೊಣೆಹೊತ್ತ ಪ್ರಪಂಚದ ಅತಿ ದೊಡ್ಡ ಸಹಕಾರಿ ಸಂಘವು ಬೊಲಿವಿಯ ದೇಶದಲ್ಲಿದೆ. ಈ ದೇಶದ ಸಾಂಟ ಕ್ರುಜ್ ಡೆ ಲ ಸಿಯೆರ ಪ್ರಾಂತ್ಯದ 1.3 ದಶಲಕ್ಷ ಜನಸಂಖ್ಯೆಯಲ್ಲಿ ಶೇಕಡ 99ರಷ್ಟು ಜನಕ್ಕೆ ಇಡೀ ಲ್ಯಾಟಿನ್ ಅಮೆರಿಕೆಯಲ್ಲೆ ಅತ್ಯಂತ ಶುಚಿಯಾದ ನೀರನ್ನು ಒದಗಿಸುತ್ತಿರಿವ ಮತ್ತು ಒಳಚರಂಡಿ ವ್ಯತಸ್ಥೆಯನ್ನು ನೋಡಿಕೊಳ್ಳುತ್ತಿರುವ ಸಂಸ್ಥೆ ಖಂಉಗಂಕಂಅ ಸಹಕಾರಿ. ಈ ಸಹಕಾರಿ ಸಂಸ್ಥೆಯು ಕೇವಲ ಶುದ್ಧ ಕುಡಿಯುವ ನೀರನ್ನು ಒದಗಿಸುವುದಲ್ಲದೆ ಕ್ಯೋಟೋ ಪ್ರೋಟೋಕಾಲ್ ಅನ್ವಯ ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಬಳಸಿದ ನೀರನ್ನು ಪುನರ್ ಸಂಸ್ಕರಿಸಿ ಉಪಯೋಗಿಸುವ ತಂತ್ರಜ್ಞಾನವನ್ನೂ ಬಳಸುತ್ತಿದೆ. ಆಸ್ಟ್ರಿಯ ದೇಶದಲ್ಲಿ 5000ಕ್ಕೂ ಹೆಚ್ಚು ನೀರು ವ್ಯವಸ್ಥಾಪನಾ ಸಹಕಾರಿ ಸಂಘಗಳಿದ್ದು ಗ್ರಾಮೀಣ ಪ್ರದೇಶದಲ್ಲಿ ಶುದ್ಧ ನೀರನ್ನು ನೀಡುವ ಜವಾಬ್ದಾರಿ ನಿರ್ವಹಿಸುತ್ತಿವೆ. ಉದಾಹರಣೆಗೆ 'ಗ್ರಾಮಸ್ಟಟೆನ್ ನೀರಿನ ಸಹಕಾರಿಯು' ಸುಮಾರು 2000 ಗ್ರಾಮೀಣ ಕುಟುಂಬಗಳಿಗೆ ಶುದ್ಧ ನೀರನ್ನು ದೇಶದ ಸರಾಸರಿ ದರದ ಅರ್ಧದರದಲ್ಲಿ ಒದಗಿಸುತ್ತಿದೆ. ಹೀಗೆಯೇ ಬೇರೆ ಬೇರೆ ಸೇವೆಗಳಿಗಾಗಿ ಆರಂಭವಾದ ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಕ್ರಮ ತೆಗೆದುಕೊಂಡ ಉದಾಹರಣೆಗಳನ್ನೂ ಕಾಣಬಹುದು. ಘಾನಾ ದೇಶದ ಕೊಕೋ ಬೆಳೆಗಾರರ ಸಹಕಾರಿ ಸಂಘವಾದ 'ಕುವಪ ಕೊಕೋ ಸಹಕಾರಿ ಸಂಘವು' ದೇಶದ ಕುಗ್ರಾಮ ಪ್ರದೇಶಗಲ್ಲಿ ಕೋಕೋ ಬೆಳೆಯುತ್ತಿದ್ದು ಸಾರ್ವಜನಿಕ ಸೇವೆಗಳಿಂದ ವಂಚಿತರಾದ ರೈತರಿಗಾಗಿ ಸುಮಾರು 400 ಕೊಳವೆ ಭಾವಿಗಳನ್ನು ತಗೆದು ಸಮುದಾಯದ ಎಲ್ಲ ಕುಟುಂಬಗಳ ಮನೆಬಾಗಿಲಿನಲ್ಲಿ ಶುದ್ಧ ಕುಡಿಯುವ ನೀರು ದೊರೆಯುವಂತೆ ಮಾಡಿದೆ.

ನೀರಿನ ಸರಬರಾಜು ಮತ್ತು ವ್ಯವಸ್ಥಾಪನೆ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಸಹಕಾರಿ ಸಂಘಟನೆಗಳ ಉದಾಹರಣೆಗಳು ಭಾರತದಲ್ಲೂ ಲಭ್ಯವಿದೆ. ಕರ್ನಾಟಕದಲ್ಲಿ ಸರಕಾರದ ಜಲಸಂಪನ್ಮೂಲ ಸಚಿವಾಲಯದ ಯೋಜನೆಯಡಿಯಲ್ಲಿ ನೂರಾರು ನೀರು ಬಳಕೆದಾರರ ಸಹಕಾರಿ ಸಂಘಗಳನ್ನು ಆರಂಭಿಸಲಾಗಿದ್ದು, ಇವು ನೀರಿನ ಸೂಕ್ತ ಬಳಕೆಯಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಯನ್ನು ಸಾಧ್ಯವಾಗಿಸಿವೆ. ನೀರು ಸರಬರಾಜು ಸಹಕಾರಿ ಸಂಘಗಳಲ್ಲದೆ ಇತರೆ ಸೇವೆಯಲ್ಲಿ ತೊಡಗಿರುವ ಹಲವು ದೊಡ್ಡ ಸಹಕಾರಿ ಸಂಘಗಳು ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಒದಗಿಸುವ ಕೆಲಸಗಳನ್ನು ತಮ್ಮ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಡಿಯಲ್ಲಿ ಮಾಡಿವೆ. ಆದರೂ ಸಹಕಾರಿ ಕ್ಷೇತ್ರವು ನೀರು ಮತ್ತು ನೈರ್ಮಲ್ಯದ ಜವಾಬ್ದಾರಿಯನ್ನು ನಿರ್ವಹಿಸುವತ್ತ ದೊಡ್ಡ ಮಟ್ಟದ ಪ್ರಯತ್ನ ಮಾಡಿದಂತೆ ಕಾಣುವುದಿಲ್ಲ. ಅಂತೆಯೇ ಈ ಕ್ಷೇತ್ರದಲ್ಲಿ ಸಕ್ರಿಯವಾಗಲು ಸಾಕಷ್ಟು ಅವಕಾಶಗಳಿವೆ. ನಮ್ಮ

ದೇಶದ ಸಹಕಾರಿ ಚಳುವಳಿಯು ಈ ಕೆಳಗಿನ ಕೆಲವು ಸಲಹೆಗಳನ್ನು ಪರಿಗಣಿಸಹುದಾಗಿದೆ.

1. ಸರಕಾರವು ನೇರವಾಗಿ ನಡೆಸುತ್ತಿರುವ ನೀರು ಸರಭರಾಜು, ಒಳಚರಂಡಿ ಮತ್ತು ನೈರ್ಮಲ್ಯ, ವಿದ್ಯುಚ್ಛಕ್ತಿ ವಿತರಣೆ, ನಗರ ಮತ್ತು ಗ್ರಾಮೀಣ ಸಾರಿಗೆ ಮುಂತಾದ ಸೇವೆಗಳನ್ನು ಸಹಕಾರಿ ಮಾದರಿಯಲ್ಲಿ ನಡೆಸುವಂತೆ ಯೋಜನೆ ರೂಪಿಸಬೇಕಿದೆ. ವಿಶೇಷವಾಗಿ ಸರಕಾರವು ಇಂಥಹ ಸೇವೆಗಳನ್ನು ಖಾಸಗೀಕರಣಗೊಳಿಸುವ ಬದಲಿಗೆ ಸಹಕಾರೀಕರಣಗೊಳಿಸುವ ನೀತಿಯನ್ನು ಜಾರಿಗೆ ತರಲು ಪ್ರಯತ್ನಿಸಬೇಕು.

2. ಸಹಕಾರಿ ಮಾಹಾಮಂಡಳಗಳು ಸರಕಾರಕ್ಕೆ ಸೂಕ್ತ ಯೋಜನೆಗಳನ್ನು ಸಲ್ಲಿಸಿ ಸಾರ್ವಜನಿಕ ಸೇವೆಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ನೀಡುವ ನೀತಿ ಮತ್ತು ನಿಯಮಗಳನ್ನು ರಚಿಸಲು ಅನುವಾಗಬೇಕು.

3. ಸಾರ್ವಜನಿಕ ಸೇವೆಗಳನ್ನು ಒದಗಿಸುವ ಹೊಸ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಬಹುದು.

4. ಶುದ್ಧ ಕುಡಿಯುವ ನೀರಿನ ಸಮಸ್ಯೆಯಿರುವ ಪ್ರದೇಶಗಳಲ್ಲಿರುವ ಸಹಕಾರಿ ಸಂಘಗಳು ಸ್ಥಳೀಯ ಸಮುದಾಯಕ್ಕೆ ಉತ್ತಮ ನೀರು ಒದಗಿಸುವ ಮತ್ತು ಶೌಚಾಲಯ ನಿರ್ಮಿಸುವ ಕೆಲಸವನ್ನು ಒಂದು ಪ್ರಮುಖ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆ ಎಂದು ಪರಿಗಣಿಸಿ ಅನುಷ್ಠಾನಗೊಳಿಸಬಹುದು.

5. ಎಲ್ಲ ಸಹಕಾರಿ ಸಂಘಗಳೂ ಮಳೆಕೊಯ್ಲು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ಮತ್ತು ಉಪಯೋಗಿಸಿದ ನೀರನ್ನು ಸಂಸ್ಕರಿಸಿ ಉಪಯೋಗಿಸುವುದನ್ನು ಚಾಲ್ತಿಗೆ ತರಬೇಕು.

6. ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ ಮತ್ತು ಸಮುದಾಯದ ಎಲ್ಲರಿಗೆ ಶುದ್ಧ ನೀರಿನ ಬಳಕೆ ಮತ್ತು ನೀರಿನ ಮಿತವಾದ ಬಳಕೆಯ ಬಗೆಗೆ ಅಗತ್ಯ ಮಾಹಿತಿ ಮತ್ತು ತರಬೇತಿ ನೀಡುವ ಕಾರ್ಯಕ್ರಮಗಳನ್ನು ರೂಪಿಸಬಹುದು

7. ಸ್ಥಳೀಯವಾಗಿ ನೀರು ಮತ್ತು ನೈರ್ಮಲ್ಯದ ವ್ಯವಸ್ಥಾಪನೆಯ ಜವಾಬ್ದಾರಿಗಳನ್ನು ಸಹಕಾರಿ ಸಂಘಗಳು ವಹಿಸಿಕೊಳ್ಳಬಹುದು.

8. ಸಹಕಾರಿ ಸಂಘಗಳು ಗ್ರಾಮ ಮಟ್ಟದಲ್ಲಿ ನೀರು ಬಳಕೆದಾರರ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬಹುದು

9. ನೀರು ಮತ್ತು ನೈರ್ಮಲ್ಯಗಳಿಗೆ ಸಂಬಂಧಿಸಿಂತೆ ಸರಕಾರ ರೂಪಿಸುವ ವಿವಿಧ ಯೋಜನೆಗಳ ಬಗ್ಗೆ ಸಹಕಾರಿ ಸದಸ್ಯರಿಗೆ ತಿಳಿಸಿ ಅಂತಹ ಯೋಜನೆಗಳ ಉಪಯೋಗವನ್ನು ಪಡೆಯಲು ಸಹಕರಿಸಬಹುದು.

10. ಅಂತರ್ಜಲ ಮಟ್ಟವನ್ನು ಕಾಪಾಡಲು ಮತ್ತು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಅನುಸರಿಸುವಂತೆ ಜನರನ್ನು ಪ್ರೇರೇಪಿಸಬಹುದು.

ಹೀಗೆ ಸಹಕಾರಿ ಸಂಘಟನೆಗಳು ತಮ್ಮ ತಮ್ಮ ಪರಿಸರದಲ್ಲಿ ಸೂಕ್ತವಾಗುವಂತೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಸುಸ್ಥಿರ ಅಭಿವೃದ್ಧಿಯ ನೀರು ಮತ್ತು ನೈರ್ಮಲ್ಯದ ಬಗೆಗಿನ ಗುರಿಸಾಧನೆಗೆ ತಮ್ಮ ದೇಣಿಗೆ ನೀಡಬೇಕು.

# ಎಸ್‌ಡಿಜಿ 7: ಕೈಗಟಕುವ ಮತ್ತು ಸ್ವಚ್ಛ ಇಂಧನ

ಕೈಗೆಟಕುವ ದರದಲ್ಲಿ, ಸ್ವಚ್ಛವಾದ, ವಿಶ್ವಾಸಾರ್ಹವಾದ, ಸುಸ್ಥಿರವಾದ ಮತ್ತು ಆಧುನಿಕ ಇಂಧನವು ಎಲ್ಲರಿಗೂ ದೊರೆಯುವಂತೆ ಮಾಡುವುದು (Ensure access to affordable, reliable, sustainable and modern energy for all) ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ ಆದ್ಯತೆ ಪಡೆದಿದೆ. ನೀರು ಮತ್ತು ನೈರ್ಮಲ್ಯದಷ್ಟೇ ಪ್ರಮುಖವಾದ ಇನ್ನೊಂದು ದೈನಂದಿನ ಅಗತ್ಯವೆಂದರೆ ಇಂಧನ. ಇಂಧನದ ಉಪಯೋಗಕ್ಕೂ ಆರೋಗ್ಯ ಮತ್ತು ಪರಿಸರಕ್ಕೂ ನಿಕಟವಾದ ಸಂಬಂಧವಿದೆ. ಪಾರಂಪರಿಕ ಇಂಧನಗಳಲ್ಲಿ ಪ್ರಮುಖವಾದ ಕಟ್ಟಿಗೆಯನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಮರಗಳು ಮತ್ತು ಕಾಡಿನ ನಾಶಕ್ಕೆ ಕಾರಣವಾಗುವುದರ ಜೊತೆಗೆ, ಈ ಇಂಧನದಿಂದ ಹೊರಬರುವ ಹೊಗೆಯಿಂದಾಗಿ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತದೆ ಮತ್ತು ಪರಿಸರ ಹಾನಿಯೂ ಹೆಚ್ಚುತ್ತದೆ. ಆದುದರಿಂದ ಸುಸ್ಥಿರವಾದ ಆಧುನಿಕ ಇಂಧನದ ಅಗತ್ಯವಿದೆ. ಹೀಗೆಯೇ ಆಧುನಿಕ ಇಂಧನದಲ್ಲಿ ಅತಿ ಹೆಚ್ಚು ಬಳಕೆಯಲ್ಲಿರುವ ವಿದ್ಯುಚ್ಛಕ್ತಿಯು ಎಲ್ಲ ಪ್ರದೇಶದ ಎಲ್ಲ ಜನರಿಗೂ ಲಭ್ಯವಾಗುತ್ತಿಲ್ಲ. ಇದಕ್ಕೂ ಪರ್ಯಾಯಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಎಸ್‌ಡಿಜಿ 7ರಲ್ಲಿ ಎಲ್ಲರಿಗೂ ಸುಸ್ಥಿರ ಇಂಧನ ಒದಗಿಸುವ ಬಗ್ಗೆ ಒತ್ತು ನೀಡಲಾಗಿದೆ.

2030 ರ ಹೊತ್ತಿಗೆ ವಿಶ್ವಾಸಾರ್ಹ ಮತ್ತು ಆಧುನಿಕ ಇಂಧನವು ಸಾರ್ವತ್ರಿಕವಾಗಿ ಲಭ್ಯವಾಗುವಂತೆ ನೋಡಿಕೊಳ್ಳಬೇಕೆಂದು ವಿಧಿಸುವ ಈ ಗುರಿಯಲ್ಲಿ ನವೀಕರಿಸಬಹುದಾದ ಇಂಧನ ಶಕ್ತಿಯನ್ನು ಗಣನೀಯವಾಗಿ ಹೆಚ್ಚಿಸಬೇಕೆಂದೂ ಹಾಗೂ ಇದೇ ಅವಧಿಯಲ್ಲಿ ಇಂಧನದ ದಕ್ಷತೆಯ ಪ್ರಮಾಣವನ್ನು ದ್ವಿಗುಣಗೊಳಿಸಬೇಕೆಂದೂ ತಿಳಿಸಲಾಗಿದೆ. ಇವುಗಳನ್ನು ಸಾಧಿಸಲು ಅನುವಾಗುವಂತೆ ಶುದ್ಧ ಇಂಧನ ಕುರಿತಂತೆ ಸಂಶೋಧನೆಯನ್ನು ಹೆಚ್ಚಿಸಲು ಮತ್ತು ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಅಂತಾರಾಷ್ಟ್ರೀಯ ಸಹಕಾರ ಮತ್ತು ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವ ಕುರಿತಂತೆಯೂ ಈ ಗುರಿಯು ನಿರ್ದಿಷ್ಟ ಕಾರ್ಯಕ್ರಮಗಳನ್ನು ಬಯಸುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಸಣ್ಣ ದ್ವೀಪಗಳು, ಭೂಪ್ರದೇಶದಿಂದ ಸುತ್ತುವರಿಯಲ್ಪಟ್ಟ ದೇಶಗಳು ಮತ್ತು ಕಡುಬಡತನವಿರುವ ದೇಶಗಳಲ್ಲಿ, ಎಲ್ಲ ವರ್ಗದ ಜನರಿಗೂ ಆಧುನಿಕ ಮತ್ತು ಸುಸ್ಥಿರ ಇಂಧನ ಸೇವೆಗಳನ್ನು ವಿಸ್ತರಿಸಲು ಅಗತ್ಯವಾದ ಮೂಲಸೌಕರ್ಯ ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕೆಂದೂ ಈ ಗುರಿಯಲ್ಲಿ ವಿಧಿಸಲಾಗಿದೆ.

ಪ್ರಪಂಚದಾದ್ಯಂತ ಒಂದು ಶತಕೋಟಿಗೂ ಹೆಚ್ಚು ಜನರಿಗೆ ಇಂದಿಗೂ ವಿದ್ಯುತ್ ಸೌಲಭ್ಯ ಲಭ್ಯವಿಲ್ಲ. ಮೂರು ಶತಕೋಟಿಗೂ ಹೆಚ್ಚುಜನ ಪ್ರಾಥಮಿಕ ಇಂಧನ ಮೂಲವಾಗಿ ಇಂದಿಗೂ ಮರ, ಇದ್ದಿಲು, ಕಲ್ಲಿದ್ದಿಲು ಮತ್ತು ಸಗಣಿಯನ್ನೇ ಅವಲಂಬಿಸಿದ್ದಾರೆ. ಭಾರತದಲ್ಲಿ ಸುಮಾರು 23 ದಶಲಕ್ಷ ಕುಟುಂಬಗಳು ಮತ್ತು 200 ದಶಲಕ್ಷ ಜನರು ವಿದ್ಯುಚ್ಛಕ್ತಿಯ ಲಭ್ಯತೆಯಿಂದ ವಂಚಿತರಾಗಿದ್ದಾರೆ. ಕಳೆದ ಕೆಲವರ್ಷಗಳಲ್ಲಿನ ಕ್ರಮಗಳಿಂದಾಗಿ ದೇಶದ ಒಟ್ಟು ಗ್ರಾಮಗಳಲ್ಲಿ ಸುಮಾರು ಶೇಕಡ 80ಕ್ಕಿಂತ ಹೆಚ್ಚು ಗ್ರಾಮಗಳಿಗೆ ವಿದ್ಯುತ್ ಪೂರೈಕೆ ನೀಡಲಾಗಿದೆ ಮತ್ತು 2027ರ ಹೊತ್ತಿಗೆ ಪರ್ಯಾಯ ಮತ್ತು ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸುವ ಪ್ರಮಾಣವನ್ನು 72 ಗಿಗಾವ್ಯಾಟ್‌ಗೆ ಏರಿಸುವ ಯೋಜನೆ ಚಾಲ್ತಿಯಲ್ಲಿದೆ. ಆದರೆ ದೇಶದ ಎಲ್ಲ ಪ್ರದೇಶಗಳು ಮತು ಜನರು ಸಂಪೂರ್ಣವಾಗಿ ಆಧುನಿಕ ಮತ್ತು ಸುಸ್ಥಿರ ಇಂಧನವನ್ನು ಪಡೆಯಬೇಕಾದರೆ ಕೇವಲ ಸರಕಾರದ ಪ್ರಯತ್ನ ಮತ್ತು ಹೂಡಿಕೆಯಿಂದ ಸಾಧ್ಯವಿಲ್ಲ. ಸರಕಾರೇತರ ಸಂಸ್ಥೆಗಳೂ ಈ ಪ್ರಯತ್ನದಲ್ಲಿ ಭಾಗವಹಿಸಬೇಕಾದುದು ಅನಿವಾರ್ಯ. ಅಂತೆಯೇ ಸಮುದಾಯ ಕಾಳಜಿಯನ್ನು ತತ್ವಗಾಗಿರಿಸಿಕೊಂಡ ಸಹಕಾರಿ ಸಂಘಟನೆಗಳು ಈ ಜವಾಬ್ದಾರಿಯ ಕಡೆಗೂ ಗಮನಹರಿಸಬೇಕಾಗಿದೆ.

**ಸಹಕಾರಿ ಸಂಸ್ಥೆಗಳ ಪಾತ್ರ:**

ಸಹಕಾರಿ ಸಂಸ್ಥೆಗಳು ಎಸ್‌ಡಿಜಿ 7ರ ಗುರಿಗಳಿಗೆ ಸಂಭಂಧಿಸದಂತೆ ತಮ್ಮನ್ನು ಈಗಾಗಲೇ ತೊಡಗಿಸಿಕೊಂಡಿವೆ. ವಿದ್ಯುಚ್ಛಕ್ತಿ ಸಹಕಾರಿ ಸಂಘಗಳು ಹಲವಾರು ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಗ್ರಾಮೀಣ ಪ್ರದೇಶದ ಮತ್ತು ಖಾಸಗಿ ಸಂಸ್ಥೆಗಳು

ಸೇವೆ ನೀಡಲಾಗದ ಸ್ಥಳಗಳಲ್ಲಿ ವಿದ್ಯುಚ್ಛಕ್ತಿಯನ್ನು ವಿತರಿಸುತ್ತಿವೆ. ಬೆಲ್ಜಿಯಂನಲ್ಲಿರುವ ಖಇಖಥಿಂಂಠಿ.ಜಣ ಸುಮಾರು 1500 ನವೀಕರಿಸಬಹುದಾದ ಇಂಧನ ಸಹಕಾರಿ ಸಂಘಗಳ ಒಕ್ಕೂಟವಾಗಿದ್ದು ಇದು ಒಂದು ದಶಲಕ್ಷ ಗ್ರಾಹಕರನ್ನು ಹಂತ ಹಂತವಾಗಿ ಪಾರಂಪರಿಕ ಇಂಧನದಿಂದ ಆಧುನಿಕ ಮತ್ತು ಸುಸ್ಥಿರ ಇಂಧನಗಳಿಗೆ ಸ್ಥಿತ್ಯಂತರಗೊಳಿಸಲು ನೆರವಾಗುತ್ತಿದೆ. ಜೊತೆಗೆ ನವೀಕರಿಸಬಹದಾದ ಇಂಧನ ಪೂರೈಕೆಗೆ ಸಂಬಂಧಿಸಿದ ಹೊಸ ವ್ಯವಹಾರ ಸಂಸ್ಥೆಗಳಿಗೆ ಧನಸಹಾಯವನ್ನೂ ನೀಡುತ್ತಿದೆ. ಈ ಒಕ್ಕೂಟದ ಅತಿ ದೊಡ್ಡ ಸದಸ್ಯ ಸಹಕಾರಿ ಸಂಸ್ಥೆಯಾದ 'ಇಕೋಪವರ್', 50,000 ಸದಸ್ಯರನ್ನು ಹೊಂದಿದ್ದು, 17 ವಿಂಡ್‌ಮಿಲ್‌ಗಳು, 370 ಸೌರ ವಿದ್ಯುತ್ ಘಟಕಗಳು, ಮೂರು ಜಲವಿದ್ಯುತ್ ಘಟಕಗಳು ಹಾಗೂ ಒಂದು ರೇಪ್ ಬೀಜದ ಎಣ್ಣೆಯ ವಿದ್ಯುತ್ ಘಟಕವನ್ನು ಹೊಂದಿದ್ದು, ಪರಿಸರ ಪ್ರೇಮಿ ಇಂಧನವನ್ನು ಉತ್ಪಾದಿಸುತ್ತಾ ತನ್ನ ಸದಸ್ಯರಿಗೆ ಕಡಿಮೆದರದಲ್ಲಿ ವರ್ಷಪೂರ್ತಿ ಸುಸ್ಥಿರ ಇಂಧನವನ್ನು ಪೂರೈಸುತ್ತಿದೆ. ಇಂಗ್ಲೆಂಡ್‌ನಲ್ಲಿರುವ 'ಎನರ್ಜಿ ಫಾರ್ ಆಲ್ (ಇಟಿಜಡಿರಥಿ4ಂಟಟ), 23 ಸಹಕಾರಿ ಸಂಘಗಳ ಒಕ್ಕೂಟವಾಗಿದ್ದು, 13,500 ಸದಸ್ಯರನ್ನು ಹೊಂದಿ, ಸುಮಾರು 30 ಮೆಗವ್ಯಾಟ್‌ನಷ್ಟು ನವೀಕರಿಸಬಹುದಾದ ಇಂಧನವನ್ನು ಉತ್ಪಾದಿಸುತ್ತಿದೆ.

ಬಾಂಗ್ಲಾ ದೇಶದ ಗ್ರಾಮೀಣ ವಿದ್ಯುಚ್ಛಕ್ತಿ ನಿಗಮವು 1977ರಿಂದ ವಿದ್ಯುತ್ ಸಹಕಾರಿ ಸಂಘಗಳನ್ನು ಉತ್ತೇಜಿಸುತ್ತಿದ್ದು, ಹಾಲಿ 70 ಇಂತಹ ಸಹಕಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಹಕಾರಿ ಸಂಘಗಳು ಒಟ್ಟಾಗಿ ಸುಮಾರು 47,650 ಹಳ್ಳಿಗಳ 30 ದಶಲಕ್ಷ ಜನರಿಗೆ ವಿದ್ಯುತ್ ಸರಬರಾಜು ಮಾಡುತ್ತಿರುವುದಲ್ಲದೆ, 1,70,000 ಗ್ರಾಮೀಣ ನೀರಾವರಿ ಪಂಪ್‌ಸೆಟ್‌ಗಳ ಚಾಲನೆಗೆ ಕಾರಣವಾಗಿವೆ ಮತ್ತು ಸುಮಾರು 16,500 ಜನರಿಗೆ ಉದ್ಯೋಗವನ್ನೂ ಒದಗಿಸಿವೆ. 1999ರಲ್ಲಿ ಜಾಗತಿಕ ಬ್ಯಾಂಕ್‌ನ ಸಹಾಯದಿಂದ ಬಾಂಗ್ಲಾದೇಶದಲ್ಲಿ ಆರಂಭವಾದ 'ಕಡಲಪ್ರದೇಶದ ವಿದ್ಯುದೀಕರಣ ಮತ್ತು ಮಹಿಳಾ ಅಭಿವೃದ್ಧಿ ಸಹಕಾರಿ ಸಂಘವು' (ಗಃಔಓಗಖ) ಸೌರ ದೀಪಗಳನ್ನು ಉತ್ಪಾದಿಸುತ್ತಿದ್ದು, ವಿದ್ಯುತ್ ಗ್ರಿಡ್‌ಗೆ ಸೇರಿಲ್ಲದ ಪ್ರದೇಶಗಳು ಮತ್ತು ಬಾಂಗ್ಲಾ ದೇಶದ ದಕ್ಷಿಣ ಭಾಗದಲ್ಲೆಲ್ಲ ಸೌರ ವಿದ್ಯುತ್ ಬಳಕೆಯನ್ನು ಉತ್ತೇಜಿಸುತ್ತಿದೆ. ದಕ್ಷಿಣ ಸೂಡಾನ್‌ನಲ್ಲಿರುವ 'ಎಯ್ ವಿದ್ಯುತ್ ಸಹಕಾರಿಯು' (ಜಜು ಇಟಜಛಿಣಡಿಥಿ ಅಂಂಠಿ–ಜಡಿಚಿಣುತಜ) 16,000 ಜನರಿಗೆ ವಿದ್ಯುತ್ ಸರಬರಾಜಿನ ಗುಣಮಟ್ಟದ ಸೇವೆ ನೀಡುತ್ತಿದೆ. 2005ರಲ್ಲಿ ಬ್ರೆಝಿಲ್‌ನ ರಿಯೋ ಗ್ರಾಂಡೆ ಡೊ ಸುಲ್ ಪ್ರಾಂತ್ಯದಲ್ಲಿನ ಸಣ್ಣ ರೈತರು ಮತ್ತು ಭೂರಹಿತ ಕಾರ್ಮಿಕರು ಸೇರಿ ಆರಂಭಿಸಿರುವ 'ಕೋಆಪರ್ಬಿಯೋ' (ಅಔಔಕಇಖಃಖಔ) ಈ ದೇಶದ ಪ್ರಥಮ ಜೈವಿಕ ಇಂಧನ ಸಹಕಾರಿ ಸಂಘವಾಗಿದ್ದು, ಜೈವಿಕ ಡಿಸೆಲ್ ಮತ್ತು ಎಥೆನಾಲ್ ಉತ್ಪಾದನೆಯಲ್ಲಿ ತೊಡಗಿದೆ. ಹರಳೆಣ್ಣೆ ಬೀಜ, ಜತ್ರೋಪ, ಸೂರ್ಯಕಾಂತಿ ಮುಂತಾದ ಜೈವಿಕ ವಸ್ತುಗಳಿಂದ ಇಂಧನ ಉತ್ಪಾದಿಸಿ ತನ್ನ 25,000 ಸದಸ್ಯರ ಅಗತ್ಯಗಳನ್ನು ಈ ಸಹಕಾರಿಯು ಸರಬರಾಜು ಮಾಡುತ್ತಿದೆ.

ವಿದ್ಯುಚ್ಛಕ್ತಿ ಉತ್ಪಾದನೆ, ವಿತರಣೆ ಮತ್ತು ನವೀಕರಿಸಬಹದಾದ ಇಂಧನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಗಳು ನಮ್ಮ ದೇಶದಲ್ಲೂ ಲಭ್ಯವಿವೆ. ಉದಾಹರಣೆಗೆ 1974ರಲ್ಲಿ ಆಂಧ್ರಪ್ರದೇಶದಲ್ಲಿ ಆರಂಭವಾದ 'ಅನಕಪಲ್ಲೆ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು' ತನ್ನ ಕಾರ್ಯವ್ಯಾಪ್ತಿಯಲ್ಲಿ ಶೇಕಡ ನೂರರಷ್ಟು ಕುಟುಂಬಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಾ ಲಾಭದಾಯಕವಾಗಿ ಕಾರ್ಯನಿರ್ವಹಿಸುತ್ತಿದೆ. ಒರಿಸ್ಸದಲ್ಲಿರುವ ಸಿಂಗೂರ್ 'ಹರಿಪಾಲ್ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ' ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿರುವ ಇನ್ನೊಂದು ಸಹಕಾರಿ ಪ್ರಯತ್ನ. ಇತ್ತೀಚೆಗೆ ಗುಜರಾತ್‌ನ ಖೇಡ ಜಿಲ್ಲೆಯ ಧುಂಡಿ ಗ್ರಾಮದ ಕೆಲವು ರೈತರು ಸೇರಿ ಆರಂಭಿಸಿರುವ 'ಧುಂಡಿ ಸೌರ ವಿದ್ಯುತ್ ಉತ್ಪಾದನಾ ಸಹಕಾರಿ ಮಂಡಳಿಯು' ನವೀಕರಿಸಬಹದಾದ ಮೂಲಗಳಿಂದ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿರುವ ಭಾರತದ ಮೊದಲ ಸಹಕಾರಿ ಸಂಘವೆನ್ನಬಹುದು.

ಕರ್ನಾಟಕದ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವೂ ಹಲವು ದಶಕಗಳಿಂದ ಗ್ರಾಮೀಣ ಜನತೆಗೆ ವಿದ್ಯುತ್ ವಿತರಿಸುತ್ತಿರುವ ಉತ್ತಮ ಸಹಕಾರಿ ಸಂಘಗಳಲ್ಲೊಂದು. 1969ರಲ್ಲಿ ಆರಂಭವಾದ ಈ ಸಹಕಾರಿ ಸಂಘವು 2019ರ ವೇಳೆಗೆ 113 ಹಳ್ಳಿಗಳ 1,10,000 ಬಳಕೆದಾರರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿತ್ತು. ಈ ಸಹಕಾರಿ ಸಂಘವು ವಿದ್ಯುತ್ ವಿತರಣೆಯನ್ನೇ ಪ್ರಮುಖ ವ್ಯವಹಾರ ಚಟುವಟಿಕೆಯಾಗಿ ನಡೆಸುತ್ತಿದ್ದರೆ, ಮಾರುಕಟ್ಟೆ ಸಹಕಾರಿ ಸಂಘವಾದ ಕ್ಯಾಂಪ್ಕೋ ಇತ್ತೀಚೆಗೆ ನವೀಕರಿಸಬಹುದಾದ ಮೂಲವಾದ ವಿಂಡ್ ಮಿಲ್ ಮೂಲಕ ವಿದ್ಯುತ್ ಉತ್ಪಾದನಾ ಚಟುವಟಿಕೆಯನ್ನು

ಆರಂಭಿಸಿದೆ.

ಇಂತಹ ಹಲವು ಉದಾಹರಣೆಗಳು ನಮ್ಮಲ್ಲಿ ಲಭ್ಯವಿದ್ದರೂ ದೇಶದ ಸಹಕಾರಿ ಕ್ಷೇತ್ರದ ಗಾತ್ರ ಮತ್ತು ದೇಶದ ಅದರಲ್ಲೂ ಗ್ರಾಮೀಣ ಜನತೆಯ ಭರಿಸಲಾಗದಿರುವ ವಿದ್ಯುತ್ ಬೇಡಿಕೆಗಳ ಹಿನ್ನೆಲೆಯಿಂದ ನೋಡಿದರೆ, ಸಹಕಾರಿ ಕ್ಷೇತ್ರದ ಭಾಗವಹಿಸುವಿಕೆಯು ಅಗತ್ಯಕ್ಕಿಂತ ಬಹಳ ಕಡಿಮೆ ಇದೆ ಎನ್ನಬಹುದು. ಅಂತೆಯೇ ನಮ್ಮ ದೇಶದ ಸಹಕಾರಿ ಸಂಘಟನೆಗಳು ಈ ಕೆಳಗೆ ಸೂಚಿಸಿರುವ ಸಾಧ್ಯತೆಗಳನ್ನು ಪ್ರಯತ್ನಿಸಬಹುದು.

1. ಸರಕಾರೀ ವಿಭಾಗಗಳಿಂದ ವಿದ್ಯುತ್ ವಿತರಣೆಯು ನಿರೀಕ್ಷಿತ ಗುಣಮಟ್ಟದಲ್ಲಿಲ್ಲದಿರುವುದರಿಂದ ವಿದ್ಯುತ್ ವಿತರಣೆ ಮತ್ತು ನಿರ್ವಹಣೆಗಾಗಿ ಸಹಕಾರಿ ಸಂಸ್ಥೆಗಳನ್ನು ಆರಂಭಿಸುವ ಬಗ್ಗೆ ಸರಕಾರಗಳು ಮತ್ತು ಸಹಕಾರ ಮಹಾಮಂಡಳಗಳು ಪ್ರಯತ್ನಿಸಬೇಕು
2. ಈಗಾಗಲೇ ವಿದ್ಯುತ್ ವಿತರಣೆಯಲ್ಲಿ ತೊಡಗಿರುವ ಸಹಕಾರಿ ಸಂಘಗಳು ವಿದ್ಯುತ್ ಉತ್ಪಾದನಾ ಚಟುವಟಿಕೆಗಳನ್ನು ಆರಂಭಿಸಬಹುದು
3. ಎಲ್ಲ ಸಹಕಾರಿ ಸಂಘಗಳು ತಮ್ಮ ವಿವಿಧ ಕಟ್ಟಡಗಳಲ್ಲಿ ಸೌರ ವಿದ್ಯುತ್ ಘಟಕಗಳನ್ನು ನಿರ್ಮಿಸಿಕೊಂಡು ಪರ್ಯಾಯ ಇಂಧನದ ಬಳಕೆ ಹಾಗೂ ಅಧಿಕ ವಿದ್ಯುತ್ ಉತ್ಪಾದನೆಯಾದಲ್ಲಿ ಅದನ್ನು ಮಾರಾಟಮಾಡಬಹುದು
4. ನವೀಕರಿಸಬಹದಾದ ಇಂಧನವನ್ನು ಉತ್ಪಾದಿಸಲೆಂದೇ ಸಹಕಾರಿ ಸಂಘಗಳನ್ನು ಸ್ಥಾಪಿಸಬಹದು. ಉದಾರಗಣೆಗೆ ವಿದ್ಯುಚ್ಛಕ್ತಿ ಮಾತ್ರವಲ್ಲದೆ ಜೈವಿಕ ಅನಿಲ, ಜೈವಿಕ ಡಿಸೆಲ್ ಮತ್ತು ಎಥನಾಲ್ ಮುಂತಾದುವುಗಳ ಉತ್ಪಾದನೆ ಸಾಧ್ಯ.
5. ಎಲ್ಲ ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ ವಿವಿಧ ಅಧುನಿಕ ಸುಸ್ಥಿರ ಇಂಧನದ ಬಗ್ಗೆ ಮಾಹಿತಿ ನೀಡಿ ಅವರುಗಳು ಆ ಮೂಲಗಳನ್ನು ಬಳಸಲು ಉತ್ತೇಜಿಸಬಹುದು.
6. ನವೀಕರಿಸಬಹದಾದ ಮೂಲಗಳಿಂದ ವಿದ್ಯುತ್ ಅಥವ ಜೈವಿಕ ಇಂಧನಗಳನ್ನು ಉತ್ಪಾದಿಸ ಬಯಸುವವರಿಗೆ ಸಹಕಾರಿ ಸಂಘಗಳು ಕಡಿಮೆ ಬಡ್ಡಿದರದಲ್ಲಿ ಸಾಲನೀಡುವ ಯೋಜನೆಗಳನ್ನು ರೂಪಿಸಬಹುದು.
7. ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿದ್ದು ವಿದ್ಯುಚ್ಛಕ್ತಿ ಮತ್ತು ಇತರ ಇಂಧನ ಮೂಲಗಳು ಲಭ್ಯವಿಲ್ಲದ ಜನರಿಗೆ ಸೌರ ದೀಪಗಳು ಮತು ಜೈವಿಕ ಅನಿಲವನ್ನು ಒದಗಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬಹುದು
8. ತಮ್ಮ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆಗಳ ಅಂಗವಾಗಿ ಲಾಭಾಂಶದ ಒಂದಂಶವನ್ನು ಬಡಜನರಿಗೆ ಇಂಧನ ಮೂಲಗಳನ್ನು ಒದಗಿಸಲು ವಿನಿಯೋಗಿಸಬಹುದು.
9. ನವೀಕರಿಸಬಹುದಾದ ಇಂಧನಕ್ಕೆ ಸಂಬಂಧಿಸಿದಂತೆ ಸರಕಾರದ ವಿವಿಧ ಯೋಜನೆಗಳನ್ನು ಗಮನಿಸಿ ಅವುಗಳನ್ನು ಸದಸ್ಯರಿಗೆ ತಲುಪಿಸಲು ಪ್ರಯತ್ನಿಸಬಹುದು
10. ಪರಿಸರ ಜಾಗೃತಿ ಕಾರ್ಯಕ್ರಮಗಳ ಮೂಲಕ ಇಂಧನಕ್ಕಾಗಿ ಕಾಡು ಮತ್ತು ನೀರಿನ ಮೂಲಗಳ ದುರ್ಬಳಕೆಯನ್ನು ತಡೆಯಬಹುದು.

ಪರ್ಯಾಯ ಮತ್ತು ನವೀಕರಿಸಬಹುದಾದ ಮೂಲಗಳಿಂದ ಇಂಧನ/ಶಕ್ತಿಯನ್ನು ಪಡೆಯುವುದು ನಮ್ಮ ಪರಿಸರ ಮತ್ತು ಆರೋಗ್ಯದ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು. ಇಂದಿಗೂ ಆಧುನಿಕ ಇಂಧನ ಮೂಲಗಳ ಲಭ್ಯತೆ ಇಲ್ಲದಿರುವ ಜನರು ದೊಡ್ಡ ಸಂಖ್ಯೆಯಲ್ಲಿದ್ದಾರೆನ್ನುವುದನ್ನೂ ಮತ್ತು ಪಾರಂಪರಿಕ ಇಂಧನ ಮೂಲಗಳು ಬರಿದಾಗುತ್ತಿವೆ ಹಾಗೂ ನಮ್ಮ ಪರಿಸರವನ್ನು ಹಾಳುಗೆಡುವುತ್ತಿವೆ ಎನ್ನುವುದನ್ನೂ ಸಹಕಾರಿ ಸಂಘಟನೆಗಳು ಮನನಮಾಡಿಕೊಂಡು, ತಮ್ಮ ಸಮುದಾಯ ಕಾಳಜಿಯ ತತ್ವದ ಆಧಾರದಲ್ಲಿ ಹೊಸ ಪ್ರಯತ್ನಗಳನ್ನು ಮಾಡಿದರೆ ಎಸ್‌ಡಿಜಿ 7ರ ಸಾಧನೆಗೆ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ.

# ಎಸ್‌ಡಿಜಿ 8: ಯೋಗ್ಯ ಉದ್ಯೋಗ ಮತ್ತು ಆರ್ಥಿಕ ಬೆಳವಣಿಗೆ

ನಿರಂತರ, ಅಂತರ್ಗತ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ಪೂರ್ಣವಾದ, ಯೋಗ್ಯವಾದ ಮತ್ತು ಉತ್ಪಾದಕ ಉದ್ಯೋಗ ಹಾಗೂ ಎಲ್ಲರಿಗೂ ಯೋಗ್ಯವಾದ ಉದ್ಯೋಗ ದೊರೆಯುವುದನ್ನು ಸಾಧ್ಯವಾಗಿಸುವುದು (Promote sustained, inclusive and sustainable economic growth, full and productive employment and decent work for all) ಸುಸ್ಥಿರ ಅಭಿವೃದ್ಧಿಯ ಅಗತ್ಯಗಳಲ್ಲೊಂದು. ಅಭಿವೃದ್ಧಿಯ ಪ್ರಮುಖ ಮುಖವಾದ ಅರ್ಥಿಕ ಬೆಳವಣಿಗೆ (ಎಕೊನೊಮಿಕ್ ಗ್ರೋತ್) ಮತ್ತು ಪೂರ್ಣ ಉದ್ಯೋಗದ (ಫುಲ್ ಎಂಪ್ಲಾಯ್‌ಮೆಂಟ್) ಸಾಧನೆಯ ಬಗ್ಗೆ ಈ ಗುರಿಯು ಒತ್ತು ನೀಡುತ್ತದೆ. ಎಲ್ಲ ದೇಶಗಳೂ ಆರೋಗ್ಯಕರ ಆರ್ಥಿಕ ಬೆಳವಣಿಗೆಯನ್ನು ಸಾಧಿಸಬೇಕೆಂದೂ ಅದರಲ್ಲೂ ಅಭಿವೃದ್ಧಿಶೀಲ ದೇಶಗಳು ಕನಿಷ್ಠ ಶೇಕಡ 7ರ ದರದಲ್ಲಿ ತಮ್ಮ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಬೇಕೆಂದು ಈ ಗುರಿಯಲ್ಲಿ ನಿಗದಿಪಡಿಸಲಾಗಿದೆ. ಮೌಲ್ಯವರ್ಧಿತ ಮತ್ತು ಹೆಚ್ಚು ಉದ್ಯೋಗಾವಕಾಶ ಸೃಷ್ಟಿಸುವ ಕ್ಷೇತ್ರಗಳಮೇಲೆ ಒತ್ತು ನೀಡುತ್ತಾ ವೈವಿಧ್ಯೀಕರಣ, ತಾಂತ್ರಿಕ ಬೆಳವಣಿಗೆ ಮತ್ತು ಆಧುನಿಕ ಮೂಲಗಳ ಮೂಲಕ ಉನ್ನತಮಟ್ಟದ ಆರ್ಥಿಕ ಉತ್ಪಾದಕತೆಯನ್ನು (ಎಕೊನೊಮಿಕ್ ಪ್ರೊಡಕ್ಟಿವಿಟಿ) ಸಾಧಿಸಲು ಹಾಗೂ ಉತ್ಪಾದಕ ಚಟುವಟಿಕೆಗಳು ಉದ್ಯೋಗ ಸೃಷ್ಟಿ, ಉದ್ಯಮಶೀಲತೆ, ಸೃಜನಶೀಲತೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸಬೇಕೆಂದು ಈ ಗುರಿಯಲ್ಲಿ ಹೇಳಲಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಿಗೆ, 2030ರ ವೇಳೆಗೆ ಹಂತ ಹಂತವಾಗಿ ಆರ್ಥಿಕ ಬೆಳವಣಿಗೆಯನ್ನು ಪರಿಸರ ನಾಶ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಅತಿ ವಿನಿಯೋಗದಿಂದ ಬೇರ್ಪಡಿಸಿ ಜವಾಬಾರಿಯುತ ಅಭಿವೃದ್ಧಿಯನ್ನು ಸಾದಿಸಬೇಕೆಂಬ ಗುರಿಯನ್ನು ನಿಗದಿಪಡಿಸಲಾಗಿದೆ. ಎಲ್ಲ ದೇಶಗಳೂ ಯುವಕರು, ಮಹಿಳೆಯರು, ವಿಕಲಾಂಗರು ಮುಂತಾದವರಿಗೆ ಔದ್ಯೋಗಿಕ ಕುಶಲತೆಯ ತರಬೇತಿನೀಡಿ ಅವರು ಪೂರ್ಣ ಪ್ರಮಾಣದಲ್ಲಿ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಬೇಕೆಂದೂ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನದ ತತ್ವವನ್ನು ಪೂರ್ಣ ಪ್ರಮಾಣದಲ್ಲಿ ಚಾಲ್ತಿಗೆ ತರಬೇಕೆಂದೂ ಈ ಗುರಿಯಲ್ಲಿ ತಿಳಿಸಲಾಗಿದೆ.

ಸುಸ್ಥಿರ ಬೆಳವಣಿಗೆ ಮತ್ತು ಪೂರ್ಣ ಉದ್ಯೋಗ ಕುರಿತಾದ ಈ ಗುರಿಯು ವಿಸ್ತೃತ ನೆಲೆಯಲ್ಲಿ ಮನುಷ್ಯ, ಪರಿಸರ ಮತ್ತು ಸಂಪನ್ಮೂಲಗಳ ಸಮನ್ವಯ ಕುರಿತಂತೆ ಸಾಧಿಸಬೇಕಾದ ಅಂಶಗಳನ್ನು ಮುನ್ನೆಲೆಗೆ ತರಲೆತ್ನಿಸಿದೆ. ಬಲವಂತದ ಶ್ರಮಿಕತೆ (ಫೋರ್ಸ್‌ಡ್ ಲೇಬರ್), ಆಧುನಿಕ ಗುಲಾಮಗಿರಿ (ಮಾಡರ್ನ್ ಸ್ಲೇವರಿ), ಮಾನವ ಕಳ್ಳಸಾಗಣೆ, ಬಾಲ ಕಾರ್ಮಿಕರು ಮತ್ತು ಬಾಲ ಸೈನಿಕರ ನೇಮಕಾತಿ ಮುಂತಾದುವುಗಳನ್ನು ಎಲ್ಲ ದೇಶಗಳೂ ಪೂರ್ಣವಾಗಿ ನಿರ್ಮೂಲನೆ ಮಾಡಬೇಕೆಂದೂ, ಕಾರ್ಮಿಕ ಹಕ್ಕುಗಳನ್ನು ರಕ್ಷಿಸಿ ಎಲ್ಲ ರೀತಿಯ ಕಾರ್ಮಿಕರಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರು, ವಲಸೆ ಕಾರ್ಮಿಕರು ಮತ್ತು ಅನಿಶ್ಚಿತ/ಅಪಾಯಕಾರಿ ಉದ್ಯೋಗದಲ್ಲಿರುವವರಿಗೆ ಸಂಪೂರ್ಣ ರಕ್ಷಣೆ ದೊರೆಯುವಂತೆ ಮಾಡಬೇಕೆಂದೂ ಈ ಗುರಿಯಲ್ಲಿ ನಿಗದಿಪಡಿಸಲಾಗಿದೆ. ಸ್ಥಳೀಯ ಪರಿಸರ ಮತ್ತು ಸಂಸ್ಕೃತಿಗೆ ತೊಂದರೆಯಾಗದಂತೆ ಆರ್ಥಿಕ ಚಟುವಟಿಕೆಗಳು ಅದರಲ್ಲೂ ಮುಖ್ಯವಾಗಿ ಪ್ರವಾಸೋದ್ಯಮದ ಸುಸ್ಥಿರ ಅಭಿವೃದ್ಧಿ, ಎಲ್ಲರಿಗೂ ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ಸೇವೆಗಳ ಲಭ್ಯತೆ, ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ತಾಂತ್ರಿಕ ಸಹಾಯ, ಅಂತಾರಾಷ್ಟ್ರೀಯ ನೆಲೆಯಲ್ಲಿ ಉದ್ಯೋಗ ಸೃಷ್ಟಿಗಾಗಿ ಕಾರ್ಯತಂತ್ರ ರೂಪಿಸುವುದು ಮುಂತಾದುವುಗಳನ್ನು ಆದ್ಯತೆಯ ಮೇಲೆಗೆ

ಮಾಡಬೇಕೆಂದು ಈ ಗುರಿಯು ನಿಗದಿಪಡಿಸಿದೆ. ಎಸ್‌ಡಿಜಿ 8ರ ರೂಪುರೇಷೆಗಳು ಇಷ್ಟು ವಿಸ್ತೃತವಾಗಿರುವ ಕಾರಣಕ್ಕಾಗಿ ಯಾವುದೇ ಅರ್ಥವ್ಯವಸ್ಥೆಯಲ್ಲಿನ ಎಲ್ಲ ಸಾಂಸ್ಥಿಕ ಸಂರಚನೆಗಳೂ ಈ ಪ್ರಕ್ರಿಯೆಗೆ ತಮ್ಮ ಕೊಡುಗೆ ನೀಡಬೇಕಿದೆ. ಸಹಕಾರಿ ಸಂಘಟನೆಗಳೂ ಇದರಲ್ಲಿ ಭಾಗಿಗಳಾಗಬೇಕಾದುದು ಅಗತ್ಯ.

**ಸಹಕಾರಿ ಸಂಘಟನೆಗಳ ಪಾತ್ರ:**

ಸುಸ್ಥಿರ ಅಭಿವೃದ್ಧಿಯ ಮೂಲಾಧಾರಗಳಲ್ಲೊಂದು ಉದ್ಯೋಗದ ಲಭ್ಯತೆ ಮತ್ತು ಉದ್ಯೋಗಿಗಳ ರಕ್ಷಣೆ. ಈ ನಿಟ್ಟಿನಲ್ಲಿ ಕಳೆದ ಮೂರು ದಶಕದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆಯಾದರೂ ಕ್ರಮಿಸಬೇಕಾದ ದೂರ ಇನ್ನೂ ಸಾಕಷ್ಟಿದೆ. ಜಗತ್ತಿನಾದ್ಯಂತ ಸುಮಾರು 19 ಕೋಟಿ ಜನ ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದರೆ ಸುಮಾರು 14 ಕೋಟಿ ಜನ ತಾತ್ಕಾಲಿಕ ಮತ್ತು ಅರೆಕಾಲಿಕ ಉದ್ಯೋಗದಲ್ಲಿದ್ದಾರೆ. ಇವರಿಗೆ ಯಾವುದೇ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಇಲ್ಲ. ಜೊತೆಗೆ 152 ದಶಲಕ್ಷ ಬಾಲಕಾರ್ಮಿಕರು, 40 ದಶಲಕ್ಷ ಆಧುನಿಕ ಗುಲಾಮಗಿರಿ ಅನುಭವಿಸುತ್ತಿರುವವರು (ಬಾಂಡೆಡ್ ಲೇಬರ್) ಹಾಗೂ 25 ದಶಲಕ್ಷ ಬಲವಂತದ ಕಾರ್ಮಿಕರು (ಫೋರ್ಸ್‌ಡ್ ಲೇಬರ್) ವಿಶೇಷವಾಗಿ ಬಡ ರಾಷ್ಟ್ರಗಳಲ್ಲಿ ನೆಲೆಸಿದ್ದಾರೆ. ಈ ಎಲ್ಲರ ಸಮಸ್ಯೆಗಳನ್ನೂ ಪರಿಹರಿಸಬೇಕಾದರೆ ಸಹಕಾರಿ ಸಂಘಟನೆಗಳು ಬಹು ಮುಖ್ಯ ಪಾತ್ರ ವಹಿಸಬಲ್ಲವು.

ಶ್ರಮಿಕ ವರ್ಗಕ್ಕೆ ಉತ್ತಮ ಆದಾಯ, ಕೆಲಸದ ಭದ್ರತೆ, ಗೌರವ ಮತ್ತು ಆತ್ಮವಿಶ್ವಾಸ ನೀಡುವಲ್ಲಿ ಸಹಕಾರಿ ಸಂಘಗಳು, ಅದರಲ್ಲೂ ವಿಶೇಷವಾಗಿ ಶ್ರಮಿಕ ಸಹಕಾರ ಸಂಘಗಳು ಮಹತ್ತರ ಪಾತ್ರ ನಿರ್ವಹಿಸುತ್ತಿವೆ. ಉದಾಹರಣೆಗೆ 1700 ಬಡ ಮಹಿಳೆಯರು ಸೇರಿ ಅಮೆರಿಕದಲ್ಲಿ ಆರಂಭಿಸಿದ 'ಕೋಆಪರೇಟಿವ್ ಹೋಮ್ ಕೇರ್ ಅಸೋಸಿಯೇಟ್ಸ್' ನಿರುದ್ಯೋಗಿ ಮಹಿಳೆಯರಿಗೆ, ವಿಶೇಷವಾಗಿ ಆಫ್ರಿಕನ್ ಅಮೆರಿಕನ್ ಮತ್ತು ವಲಸೆಗಾರ ಮಹಿಳೆಯರಿಗೆ, ವೃದ್ಧರು ಮತ್ತು ಅನಾರೋಗ್ಯ ಪೀಡಿತರಿಗೆ ನೆರವು ನೀಡುವ ಕುರಿತಂತೆ ತರಬೇತಿ ನೀಡಿ ಅವರುಗಳು ಅಗತ್ಯ ಕುಟುಂಬಗಳಿಗೆ ಮನೆಯಲ್ಲಿಯೇ ಆರೈಕೆ ನೀಡುವ ಕೆಲಸ ನಿರ್ವಹಿಸಲು ಅನುವುಮಾಡಿಕೊಡುತ್ತಿದೆ. ವರ್ಷಕ್ಕೆ ಸುಮಾರು 49 ದಶಲಕ್ಷ ಡಾಲರ್ ವ್ಯವಹಾರ ನಡೆಸುತ್ತಿರುವ ಈ ಸಹಕಾರಿ ಸಂಸ್ಥೆಯು ಮಹಿಳೆಯರು ಆರ್ಥಿಕ ಸ್ವಾತಂತ್ರ ಪಡೆಯಲು ಮತ್ತು ಆರೈಕೆಯಂಥಹ ಅತ್ಯುತ್ತಮ ಕಾರ್ಯನಿರ್ವಹಿಸಲು ಸಹಕಾರಿಯಾಗಿದೆ. ಫಿಲಿಫೀನ್‌ನಲ್ಲಿರುವ 'ಸಾಫ್ರ–ಅಡಾಪ್' ಅಂಗವಿಕಲರೇ ಸೇರಿ ನಡೆಸುತ್ತಿರುವ ಸಹಕಾರಿ ಸಂಘ. ಈ ಸಹಕಾರಿ ಸಂಘದ ಎಲ್ಲ ಸದಸ್ಯರೂ ಮರಗೆಲಸದ ತರಬೇತಿ ಪಡೆದು ಶಾಲೆಗಳಿಗೆ ಅಗತ್ಯ ಪೀಠೋಪಕರಣ ಮಾಡಿಕೊಡುವ ವ್ಯವಹಾರ ನಡೆಸುತ್ತಿದ್ದಾರೆ. ಯಾರೂ ಕೆಲಸಕ್ಕೆ ತೆಗೆದುಕೊಳ್ಳಲಾರದಂತಹವರಿಗೂ ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಮತ್ತು ಸಾಮಾಜಿಕ ಹಾಗು ಆರ್ಥಿಕ ಸುರಕ್ಷತೆ ಪಡೆಯುವುದು ಸಾಧ್ಯವಾಗುವಂತೆ ಈ ಸಹಕಾರಿ ಸಂಘವು ಶ್ಲಾಘನೀಯ ಪ್ರಯತ್ನ ನಡೆಸಿದೆ. ಆಫ್ರಿಕದ ಚಿಕ್ಕ ದೇಶ ರ್‍ವಾಂಡದಲ್ಲಿ ಯುವಕರ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಆರಂಭಿಸಿರುವ ಸಹಕಾರಿ ಸಂಘವಾದ 'ಕೋ–ಜಾಡ್', ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಆರಂಭಿಸಲು ನೆರವು ನೀಡುತ್ತಿದೆ. ವಿವಿಧ ಸ್ವಯಂ ಉದ್ಯೋಗ ಆರಂಭಿಸ ಬಯಸುವ ನಿರುದ್ಯೋಗಿ ಯುವಕರಿಗೆ ತರಬೇತಿ ನೀಡಿ, ಯಾವುದೇ ಮೇಲಾಧಾರವಿಲ್ಲದೆ ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಾ ಒಂದು ಹೊಸ ತಲೆಮಾರಿನ ಉದ್ಯಮಿಗಳನ್ನು ಹುಟ್ಟುಹಾಕುವ ಕೆಲಸವನ್ನು ಈ ಸಹಕಾರಿ ಸಂಘವು ಮಾಡುತ್ತ, ಆಫ್ರಿಕದ ಇತರ ದೇಶಗಳಿಗೂ ಮಾದರಿಯಾಗಿದೆ.

ಕೇವಲ ಕೆಲಸ ನೀಡುವ ಅಥವ ಉದ್ಯಮಿಗಳನ್ನು ಉತ್ತೇಜಿಸುವ ಚಟುವಟಿಕೆಗಳಲ್ಲದೆ ಸಮುದಾಯ ಮಟ್ಟದಲ್ಲಿ ಸುಸ್ತಿರ

ಮತ್ತು ಸಾಮಾಜಿಕ ರಕ್ಷಣೆಯನ್ನು ಒದಗಿಸುವ ಮತ್ತು ಕಾರ್ಮಿಕರಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ನಿಯಮಗಳನ್ನು ಪೂರ್ಣವಾಗಿಪಾಲಿಸುವ ಜವಾಬ್ದಾರಿಯನ್ನೂ ಸಹಕಾರಿ ಸಂಘಟನೆಗಳು ನಿರ್ವಹಿಸುತ್ತಿರುವ ಉದಾಹರಣೆಗಳಿವೆ. ಮೆಕ್ಸಿಕೋದಲ್ಲಿರುವ ಇಸ್ತಮಸ್ ಪ್ರಾಂತ್ಯದ ಬುಡಕಟ್ಟು ಸಮುದಾಯಗಳ ಯೂನಿಯನ್ (ಗಅಖಖಖ) 53 ಬುಡಕಟ್ಟು ಸಮುದಾಯಗಳ ಸುಮಾರು 5000 ಕುಟುಂಬಗಳ ಸಣ್ಣ ಮತ್ತು ಅತಿಸಣ್ಣ ಕಾಫಿ ಬೆಳೆಗಾರರನ್ನು ಒಗ್ಗೂಡಿಸಿ ಆರಂಭಿಸಿರುವ ಸಹಕಾರಿ ಸಂಘವಾಗಿದ್ದು, ತಮ್ಮ ಸಣ್ಣ ತೋಟಗಳಿಂದ ಜೀವನ ಸಾಧ್ಯವಾಗದೆ ಕಾಫಿತೋಟಗಳಲ್ಲಿ ಅರೆಕಾಲಿಕ ಕಾರ್ಮಿಕರಾಗಿ ದುಡಿಯುತ್ತಿದ್ದ ಬುಡಕಟ್ಟು ಜನಾಂಗದವರಿಗೆ ತಾವೂ ಲಾಭದಾಯಕವಾದ, ಉತ್ತಮ ಹಾಗು ಪರಿಸರ ಪ್ರೇಮಿ ಕೃಷಿನಡೆಸಲು ಸಹಕಾರಿಯಾಗಿದೆ. ಪರಸ್ಪರ ಅಪನಂಬಿಕೆ ಮತ್ತು ಕೆಲವೊಮ್ಮೆ ವೈರತ್ವವನ್ನೂ ಹೊಂದಿದ್ದ ಬುಡಕಟ್ಟು ಸಮುದಾಯಗಳು ಒಂದೇ ಸಂಸ್ಥೆಯ ಸಮಾನ ಸದಸ್ಯರಾಗಿ, ಸುಸ್ಥಿರ ಮತ್ತು ನಿಯಮ ಬದ್ಧ ವ್ಯಾಪಾರ ನೀತಿಯನ್ನು ಅನುಸರಿಸುತ್ತಾ ಆರ್ಥಿಕ ಭದ್ರತೆ ಹಾಗೂ ಸಾಮಾಜಿಕ ಗೌರವದೊಂದಿಗೆ ಜೀವಿಸಲು ಈ ಸಹಕಾರಿ ಸಂಘಟನೆಯು ನೆರವಾಗಿದೆ. ಕೊಟೆ ಡಿ ಐವೋರ್‌ನಲ್ಲಿರುವ 'ದಿ ಕೋಆಪರೇಟಿವ್ ಅಗ್ರಿಕೋಲ್ ಕವೊಕಿವ ಡು ಹಟ್ ಸಸಾಂಡ್ರ' (ಅಂಏಊಖ) ಕೊಕೋ ಮತ್ತು ಕಾಫಿ ಬೆಳೆಗಾರರ ಮಾರುಕಟ್ಟೆ ಸಹಕಾರಿ ಸಂಘವಾಗಿದ್ದು ಬಾಲ ಕಾರ್ಮಿಕರ ಸಮಸ್ಯೆಯನ್ನು ತೊಡೆಯುವಲ್ಲಿ ಶ್ಲಾಘನೀಯ ಪಾತ್ರ ನಿರ್ವಹಿಸುತ್ತಿದೆ. 5817 ಸದಸ್ಯರಿರುವ ಈ ಸಹಕಾರಿ ಸಂಘವು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಾರ್ಗದರ್ಶಿ ಸೂತ್ರದಂತೆ 2010ರಿಂದ ಆರಂಭಿಸಿ ತನ್ನ ಸದಸ್ಯ ರೈತರಾರೂ ಬಾಲ ಕಾರ್ಮಿಕರನ್ನು ನೇಮಿಸದಿರುವಂತೆ ನೋಡಿಕೊಂಡಿರುವುದರ ಜೊತೆಗೆ ಈ ವರೆಗೆ ಸುಮಾರು 1800 ಬಾಲ ಕಾರ್ಮಿಕರನ್ನು ರಕ್ಷಿಸಿ ಅವರಿಗೆ ಶಿಕ್ಷಣ, ರಕ್ಷಣೆ ದೊರೆಯುವಂತೆ ಮಾಡಿದೆ. ಇಂಗ್ಲೆಂಡ್‌ನಲ್ಲಿರುವ 'ಯುಕೆ ಕೋಆಪ್ ಗ್ರೂಪ್' ಒಟ್ಟು 4.6 ದಶಲಕ್ಷ ಸದಸ್ಯ ನೆಲೆಯನ್ನು ಹೊಂದಿರುವ ಗ್ರಾಹಕ ಸಹಕಾರಿ ಸಂಘವಾಗಿದ್ದು ತನ್ನ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆಯಾಗಿ ಮಾನವನ ಕಳ್ಳಸಾಗಾಣಿಕೆ (ಹ್ಯೂಮನ್ ಟ್ರಾಫಿಕಿಂಗ್) ಮತ್ತು ವಲಸೆಗಾರ ಗುಲಾಮಗಿರಿಯಂಥಹ ಸಮಸ್ಯೆಯ ನಿರ್ಮೂಲನೆಗೆ ಪ್ರಯತ್ನಿಸುತ್ತಿದೆ. ಹೀಗೆಯೇ ಕೆನಡದಲ್ಲಿ ವಲಸೆಗಾರ ಮತ್ತು ನಿರಾಶ್ರಿತರ ಸಹಕಾರಿ ಸಂಘಗಳು ಹಾಗೂ ಅರ್ಜೆಂಟೈನಾದಲ್ಲಿ ದಿವಾಳಿಯಾದ ವ್ಯವಹಾರ ಸಂಸ್ಥೆಗಳಲ್ಲಿದ್ದು ಕೆಲಸ ಕಳೆದುಕೊಂಡ ಕಾರ್ಮಿಕರ ಸಹಕಾರಿ ಸಂಘಗಳು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಶ್ರಮಿಕ ವರ್ಗಗಳಿಗೆ ಆಸರೆಯಾಗಿವೆ.

ಭಾರತದ ಸಹಕಾರಿ ಕ್ಷೇತ್ರದಲ್ಲೂ ಇದೇ ಮಾದರಿಯಲ್ಲಿ ಶ್ರಮಿಕ ವರ್ಗದವರಿಗೆ ಪೂರ್ಣ ಉದ್ಯೋಗ ಮತ್ತು ಸುಸ್ಥಿರ ಜೀವನ ನೀಡುತ್ತಿರುವ ಹಲವು ಉದಾಹರಣೆಗಳಿವೆ. ಕೇರಳದಲ್ಲಿ ಹಲವು ದಶಕಗಳಿಂದ ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿರುವ ಯುಎಲ್‌ಸಿಸಿ ಕಾರ್ಮಿಕ ಸಹಕಾರಿಯು ನಿರ್ಮಾಣ ಕ್ಷೇತ್ರದಲ್ಲಿ ಹಲವು ಸಾವಿರ ಕಾರ್ಮಿಕರಿಗೆ ನೆಲೆ ಒದಗಿಸಿದೆ. ಇತ್ತೀಚೆಗೆ ಸಂಕಷ್ಟದಲ್ಲಿದ್ದರೂ ಕರ್ನಾಟಕದ ಕೊಪ್ಪದಲ್ಲಿರುವ ಸಹಕಾರ ಸಾರಿಗೆಯು (ಟ್ರಾನ್ಸ್‌ಪೋರ್ಟ್ ಕೋಆಪರೇಟಿವ್ ಸೊಸೈಟಿ) ಕೆಲಸ ಕಳೆದುಕೊಂಡು ಅತಂತ್ರರಾಗಿದ್ದ ಕಾರ್ಮಿಕರಿಗೆ ಆಸರೆ ಒದಗಿಸಿದ ಉತ್ತಮ ಉದಾಹರಣೆ. ಮಹಾರಾಷ್ಟ್ರದ ಪುಣೆಯಲ್ಲಿ ಅಸಂಘಟಿತ ಕಾರ್ಮಿಕರಾದ ರದ್ದಿ ಹೆರಕುವವರ ಒಕ್ಕೂಟವಾಗಿ ಆರಂಭವಾಗಿ ಈಗ ಸಹಕಾರಿ ಮಾದರಿಯನ್ನು ಅನುಸರಿಸುತ್ತಿರುವ 'ಸ್ವಛ್', ಅನಕ್ಷರಸ್ತ ಮತ್ತು ಸಾಮಾಜಿಕವಾಗಿ ತೀರ ಹಿಂದುಳಿದಿರುವ ಸಮುದಾಯಕ್ಕೆ ಕೆಲಸ ಒದಗಿಸುತ್ತಿರುವ ಜೊತೆಗೆ ಪರಿಸರ ರಕ್ಷಣೆಗೂ ನೆರವಾಗುತ್ತಿದೆ. ಈ ಎಲ್ಲ ಉದಾಹರಣೆಗಳನ್ನು ಗಮನಿಸಿದಾಗ ಸಹಕಾರಿ ಸಂಘಗಳು ತಮ್ಮ ವ್ಯವಹಾರದ ಭಾಗವಾಗಿ ಮತ್ತು/ಅಥವ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಎಸ್‌ಡಿಜಿ 8ಕ್ಕೆ ಪೂರಕ ಕೆಲಸಗಳನ್ನು ಮಾಡುವುದು ಸಾಧ್ಯವಿದೆ. ನಿರ್ದಿಷ್ಟವಾಗಿ ಈ ಕೆಳಗೆ ಸೂಚಿಸಿರುವ ಪ್ರಯತ್ನಗಳನ್ನು ಮಾಡಬಹುದಾಗಿದೆ.

1. ಸಹಕಾರಿ ಮಹಾಮಂಡಳಗಳು ಮತ್ತು ಸರಕಾರಗಳು ವಿವಿಧ ಕ್ಷೇತರಗಳ ಅಸಂಘಟಿತ ಕಾರ್ಮಿಕರಿಗಾಗಿ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬಹುದು

2. ಖಾಸಗಿ ವಲಯದ ವ್ಯವಹಾರ ಸಂಸ್ಥೆಗಳು ಮುಚ್ಚಿಹೋಗುವ ಸಂದರ್ಭ ಬಂದಾಗ ಅಲ್ಲಿಯ ನೌಕರರೇ ಸಹಕಾರಿ ಮಾದರಿಯಲ್ಲಿ ಸಂಸ್ಥೆಯನ್ನು ನಡೆಸಲು ಸಹಕರಿಸಬಹುದು

3. ಎಲ್ಲ ಸಹಕಾರಿ ಸಂಸ್ಥೆಗಳು ತಮ್ಮ ಸಿಬ್ಬಂದಿಗೆ ಪೂರ್ಣ ಮತ್ತು ಸುರಕ್ಷಿತ ಉದ್ಯೋಗವನ್ನು ನೀಡುವತ್ತ ಗಮನಹರಿಸಬೇಕು

4. ಸಿಬ್ಬಂದಿಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಾರ್ಗದರ್ಶಿ ಸೂತ್ರಗಳನ್ನು ಎಲ್ಲ ಸಹಕಾರಿ ಸಂಘಟನೆಗಳೂ ಪಾಲಿಸಬೇಕು

5. ಅನಗತ್ಯ ವೆಚ್ಚ, ಪರಿಸರಕ್ಕೆ ಹಾನಿಯಾಗುವ ಚಟುವಟಿಕೆಗಳು, ಕಾನೂನಿಗೆ ವಿರುದ್ಧವಾದ ಚಟುವಟಿಕೆಗಳು ನಡೆಯದಂತೆ ಸಹಕಾರಿ ಸಂಘಗಳು ಎಚ್ಚರಿಕೆ ವಹಿಸಬೇಕು

6. ಸಿಬ್ಬಂದಿ ನೇಮಕ ಮಾಡಿಕೊಳ್ಳುವಾಗ ವಿಕಲಾಂಗರು, ಮಹಿಳೆಯರು, ಮೂಲ ನಿವಾಸಿಗಳು ಹೀಗೆ ಸಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿ ಹಿಂದುಳಿದವರಿಗೆ ಅವಕಾಶ ನೀಡಬೇಕು

7. ಸಿಬ್ಬಂದಿಗಳಿಗೆ ಭವಿಷ್ಯ ನಿಧಿ, ಆಪತ್ಕಾಲದಲ್ಲಿ ಸಹಾಯವಾಗುವಂತಹ ಯೋಜನೆಗಳು, ಪ್ರತಿ ವರ್ಷ ಲಾಭದಲ್ಲಿ ಒಂದಂಶವನ್ನು ತೆಗೆದೆದಿರಿಸಿ ಸಿಬ್ಬಂದಿ ಕಲ್ಯಾಣ ನಿಧಿಯನ್ನು ಆರಂಭಿಸುವುದು ಇಂತಹ ಯೋಜನೆಗಳನ್ನು ರೂಪಿಸಬಹುದು

8. ತಮ್ಮ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಸಹಕಾರಿ ಸಂಘಗಳು ನಿರುದ್ಯೋಗಿ ಯುವಕರಿಗೆ ಸೋದ್ಯೋಗ ತರಬೇತಿ, ಪರಿಸರ ರಕ್ಷಣೆಯ ಬಗ್ಗೆ ತಿಳಿಹೇಳುವುದು, ಮುಂತಾದುವುಗಳನ್ನು ಮಾಡಬಹುದು

9. ಕೆಲಸಗಾರರ ಉತ್ಪಾದಕತೆಯನ್ನು ವೃಧ್ಧಿ ಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು

ಈ ಮೊದಲೇ ಹೇಳಿದಂತೆ ಸಹಕಾರಿ ಸಂಘಗಳು ಎಸ್‌ಡಿಜಿ 8ರ ಆಶಯಗಳಿಗೆ ನೇರವಾಗಿ ವ್ಯವಹಾರದ ಸಂಘಟನೆಯ ಮೂಲಕ ಅಥವ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಪ್ರಯತ್ನಿಸಬಹುದು. ಎಲ್ಲರನ್ನೂ ಒಳಗೊಂಡ ಅಭಿವೃಧ್ಧಿ (ಇನ್‌ಕ್ಲುಸಿವ್ ಡೆವೆಲಪ್‌ಮೆಂಟ್) ಈ ಗುರಿಯ ಉದ್ದೇಶಗಳಲ್ಲೊಂದಾದುದರಿಂದ ಸಹಕಾರಿ ಸಂಘಟನೆಗಳು ಸಹಜವಾಗಿಯೇ ಇದನ್ನು ತಮ್ಮ ಸ್ವಾಭಾವಿಕ ಜವಾಬ್ದಾರಿಯಾಗಿ ಸ್ವೀಕರಿಸಬೇಕು.

# ಎಸ್‌ಡಿಜಿ 9: ಕೈಗಾರಿಕೀಕರಣ, ಆವಿಶ್ಕಾರ ಮತ್ತು ಮೂಲಭೂತ ಸೌಕರ್ಯ

ಸಧೃಡ ಮತ್ತು ದೀರ್ಘಾವಧಿ ಬಾಳಿಕೆಯ ಮೂಲಭೂತ ಸೌಕರ್ಯಗಳನ್ನು ಬೆಳೆಸುವುದು, ಸುಸ್ಥಿರ ಕೈಗಾರಿಕೀಕರಣವನ್ನು ಉತ್ತೇಜಿಸುವುದು ಮತ್ತು ಹೊಸ ಆವಿಶ್ಕಾರಗಳನ್ನು ಗುರುತಿಸಿ ಬೆಳೆಸುವುದು (Build resilient infrastructure, promote inclusive and sustainable industrialization and foster innovation) ಸುಸ್ಥಿರ ಅಭಿವೃದ್ಧಿ ಸಾಧನೆಯನ್ನು ಪ್ರತಿಫಲಿಸುತ್ತದೆ. ಸುಸ್ಥಿರ ಅಭಿವೃದ್ಧಿಯ ಬಗೆಗಿನ ಈ ಗುರಿಯು ಮೂಲಭೂತ ಸೌಕರ್ಯಗಳು ಮತ್ತು ಹೊಸ ಅನ್ವೇಷಣೆಗಳ ಬಗ್ಗೆ ಮುಖ್ಯವಾಗಿ ಗಮನ ಹರಿಸುತ್ತದೆ. ಮೂಲಭೂತ ಸೌಕರ್ಯಗಳು ದೀರ್ಘಾವಧಿ ಜೀವಿತ ಹೊಂದಿದ್ದರೆ ಅವುಗಳ ಮೇಲೆ ಪುನ: ಪುನ: ವೆಚ್ಚಮಾಡುವುದು ತಪ್ಪುತ್ತದೆ ಮತ್ತು ಸಂಪನ್ಮೂಲಗಳ ಮಿಗತೆ ಉಂಟಾಗುತ್ತದೆ. ಹಾಗೆಯೇ ಕೈಗಾರಿಕೀಕರಣವು ಅನಿವಾರ್ಯವಾದರೂ, ಅದು ಹೊಸ ಅನ್ವೇಣೆಗಳನ್ನು ಅಳವಡಿಸಿಕೊಂಡು ಹೆಚ್ಚು ಸುಸ್ಥಿರವಾಗಿರಬೇಕೆಂದೂ ಈ ಗುರಿಯು ಬಯಸುತ್ತದೆ. ಆರ್ಥಿಕ ಅಭಿವೃದ್ಧಿಯು ಮಾನವನ ಒಟ್ಟಾರೆ ಯೋಗಕ್ಷೇಮವನ್ನು ಬೆಂಬಲಿಸುವಂತಿರಬೇಕು. ಇದು ಸಾಧ್ಯವಾಗಬೇಕಾದರೆ ಮೂಲಭೂತ ಸೌಕರ್ಯಗಳು ಉತ್ತಮ ಗುಣಮಟ್ಟದ, ವಿಶ್ವಾಸಾರ್ಹ, ಸ್ಥಿತಿಸ್ಥಾಪಕ ಹಾಗು ಸುಸ್ಥಿರವಾಗಿರಬೇಕು ಮತ್ತು ಎಲ್ಲರಿಗೂ ಕೈಗಟುಕುವಂತಿರಬೇಕು. 2030ರ ಹೊತ್ತಿಗೆ ಎಲ್ಲ ದೇಶಗಳೂ ಪರಿಸರ ಮತ್ತು ಜನಸ್ನೇಹಿಯಾದ ಕೈಗಾರಿಕೆಗಳಾದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಉತ್ತೇಜಿಸಿ ದ್ವಿಗುಣಗೊಳಿಸಬೇಕು ಎಂದೂ ಈ ಗುರಿಯು ವಿಧಿಸುತ್ತದೆ. ಸಂಪನ್ಮೂಲ ಬಳಕೆಯಲ್ಲಿ ದಕ್ಷತೆ ಮತ್ತು ಕ್ಷಮತೆಯನ್ನು ಸಾಧಿಸುವುದು, ವಿವಿಧ ಪರಿಕರಗಳನ್ನು ನವೀಕರಿಸಿ ಉಪಯೋಗಿಸುವುದು, ಪರಿಸರಸ್ನೇಹಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದು, ವೈಜ್ಞಾನಿಕ ಸಂಶೋಧನೆಯನ್ನು ಹೆಚ್ಚಿಸುವುದು ಮುಂತಾದುವುಗಳ ಮೂಲಕ ಎಲ್ಲ ದೇಶಗಳು ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳು ತಮ್ಮ ಅಭಿವೃದ್ಧಿ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕೆಂದೂ ಈ ಗುರಿಯು ತಿಳಿಸುತ್ತದೆ.

ಆಫ್ರಿಕನ್ ದೇಶಗಳು, ಕನಿಷ್ಠ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಮತ್ತು ದ್ವೀಪ ರಾಷ್ಟ್ರಗಳು ಅಂತಾರಾಷ್ಟ್ರೀಯ ಸಹಕಾರ ಮತ್ತು ತಾಂತ್ರಿಕ ಬೆಂಬಲದೊಂದಿಗೆ ಅಗತ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದೂ ಅಭಿವೃದ್ಧಿಶೀಲ ದೇಶಗಳು ದೇಶೀಯ ತಂತ್ರಜ್ಞಾನ ಅಭಿವೃದ್ಧಿ, ಕೈಗಾರಿಕಾ ವೈವಿಧ್ಯತೆ, ಆಂತರಿಕ ಸಂಶೋಧನೆಗಳ ಮೂಲಕ ಆಧುನಿಕ ಮೂಲಸೌಕ್ರಯಗಳನ್ನು ತಮ್ಮದಾಗಿಸಿಕೊಳ್ಳಬೇಕೆಂದೂ ಈ ಗುರಿಯಲ್ಲಿ ತಿಳಿಸಲಾಗಿದೆ. ಸರಕುಗಳ ಮೌಲ್ಯವರ್ಧನೆಗೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕೆಂದು ಮತ್ತು ಮಾಹಿತಿ ತಂತ್ರಜ್ಞಾನವನ್ನು ಎಲ್ಲ ಜನರಿಗೆ ಲಭ್ಯವಾಗುವಂತೆ ಮಾಡಬೇಕೆಂಬುದೂ ಈ ಗುರಿಯ ಆಶಯವಾಗಿದೆ.

**ಸಹಕಾರಿ ಸಂಘಟನೆಗಳ ಪಾತ್ರ:**

ಸುಸ್ಥಿರ ಅಭಿವೃದ್ಧಿಯ ಬಗೆಗಿನ 9ನೆಯ ಗುರಿಯು ಪರಸ್ಪರ ಸಂಭಂಧಿಸಿದ ಮತ್ತು ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಮೂರು ಅಂಶಗಳ ಬಗ್ಗೆ ಒತ್ತು ನೀಡಿದೆ. ಮೂಲಭೂತ ಸೌಕರ್ಯಗಳು (ಉದಾಹರಣೆಗೆ ರಸ್ತೆ, ರೈಲ್ವೆ ಮುಂತಾದ ಸಾರಿಗೆ ಸೌಕರ್ಯಗಳು, ನೀರು ಸರಬರಾಜು ಮತ್ತು ಒಳಚರಂಡಿ, ನೀರಾವರಿ, ಸಂವಹನ ಸಾಧನಗಳು) ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಪ್ರಾಥಮಿಕ ಭೌತಿಕ ಸವಲತ್ತುಗಳನ್ನು ಒದಗಿಸಿದರೆ, ಕೈಗಾರಿಕೀಕರಣವು (ಉದಾಹರಣೆಗೆ ಎಲ್ಲಬಗೆಯ ಉತ್ಪಾದನಾ ಕಾರ್ಖಾನೆಗಳು) ಕಚ್ಚಾ ಸಾಮಗ್ರಿಗಳ ಮೌಲ್ಯವರ್ಧನೆಮಾಡಿ ಅವುಗಳ ಉಪಯೋಗ ಸಾಧ್ಯವಾಗಿಸುವುದರ ಮೂಲಕ ಆರ್ಥಿಕ ಪ್ರಗತಿಗೆ ವಾಹಕವಾಗುತ್ತವೆ. ಹಾಗೆಯೇ ಆವಿಶ್ಕಾರಗಳು (ಉದಾಹರಣೆಗೆ ಸಂಶೋಧನಾ ಚಟುವಟಿಕೆಗಳು) ಹೊಸ, ಆಧುನಿಕ ಮತ್ತು ಸುಧಾರಿತ ತಂತ್ರಜ್ಞಾನಗಳ ಮೂಲಕ ಸುಸ್ಥಿರ ಉತ್ಪಾದನೆಯನ್ನು ಸಾಧ್ಯವಾಗಿಸುತ್ತವೆ. ಈ ಮೂರೂ ಕ್ಷೇತ್ರಗಳಿಗೆ ದೊಡ್ಡ ಮಟ್ಟದ ಹೂಡಿಕೆಯ ಅಗತ್ಯವಿದೆ ಮತ್ತು ಈ ಎಲ್ಲ ಚಟುವಟಿಕೆಗಳಿಗೆ ಅರ್ಥವ್ಯವಸ್ಥೆಯ ಎಲ್ಲ

ಸಂಘಟನೆಗಳೂ ಕೈಜೋಡಿಸಬೇಕಿದೆ. ಸದಸ್ಯರ ಒಡೆತನದ ಮತ್ತು ಸಮುದಾಯದ ಜೊತೆ ನಿರಂತರ ಸಂಪರ್ಕಹೊಂದಿದ ಸಂಸ್ಥೆಗಳಾದುದರಿಂದ ಸಹಕಾರಿ ಸಂಘಟನೆಗಳು ಬಂಡವಾಳ ಶೇಖರಣೆಯಂತಹ ಕೆಲಸವನ್ನು ಹೆಚ್ಚು ಯಶಸ್ವಿಯಾಗಿ ಮಾಡಬಹುದು. ಹಾಗೆಯೆ, ಸಾರ್ವಜನಿಕ ಸೇವೆಗಳ ಸಹಕಾರಿ ಸಂಘಗಳು ಜನರ ಅಗತ್ಯಗಳಾದ ನೀರು ಸರಬಾಜು, ಒಳಚರಂಡಿ ಉಸ್ತುವಾರಿ, ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಮುಂತಾದ ಮೂಲಭೂತ ಸೇವೆಗಳನ್ನು ಒದಗಿಸಬಹುದು. ವಿಶೇಷವಾಗಿ ಮೂಲಭೂತ ಸೌಕರ್ಯಗಳ ವಿಷಯದಲ್ಲಿ ಗ್ರಾಮೀಣ ಜನತೆ ಸಮಸ್ಯೆ ಎದುರಿಸುತ್ತಿರುತ್ತಾರೆ. ಸಹಕಾರಿ ಸಂಘಗಳು ಅತಿ ಹೆಚ್ಚು ಗ್ರಾಮೀಣ ಸದಸ್ಯರನ್ನು ಹೊಂದಿರುವ ಸಂಸ್ಥೆಗಳಾದುದರಿಂದ, ಗ್ರಾಮೀಣ ಜನರಿಗೆ ಮೂಲಭೂತ ಸೌಕರ್ಯಗಳು ದೊರೆಯುವಂತೆ ಮಾಡುವಲ್ಲಿ ಮಹತ್ತರ ಪಾತ್ರ ವಹಿಸಬಹುದು. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ನಡೆಸುತ್ತಿರುವ ಉದ್ದಿಮೆದಾರರು ಒಟ್ಟಾಗಿ ಸಹಕಾರಿ ಸಂಘಗಳನ್ನು ರಚಿಸಿಕೊಳ್ಳುವ ಮೂಲಕ ವೆಚ್ಚ ಹಂಚಿಕೆ ಆಧಾರದಲ್ಲಿ ಮೂಲಭೂತ ಸೌಕರ್ಯಗಳ ಉತ್ಪಾದನೆ ಮತ್ತು ವ್ಯವಸ್ಥಾಪನೆಯಲ್ಲಿ ತೊಡಗುವುದು ಸಾಧ್ಯವಿದೆ.

ಇಂತಹ ಮಾದರಿಗಳನ್ನು ಈಗಾಗಲೇ ಅನುಸರಿಸುತ್ತಿರುವ ಮತ್ತು ಜನರ ಅಗತ್ಯದ ಹೊಸ ಹೊಸ ಮೂಲಸೌಕರ್ಯಗಳನ್ನು ಒದಗಿಸುವ ಪ್ರಯತ್ನ ನಡೆಸಿರುವ ಸಹಕಾರಿ ಸಂಘಗಳ ಉದಾಹರಣೆಗಳು ಹಲವಿವೆ. ದಕ್ಷಿಣ ಆಫ್ರಿಕದ ಮಂಕೋಸಿ ಪ್ರಾಂತ್ಯದಲ್ಲಿ 2012ರಲ್ಲಿ ಆರಂಭಿಸಲಾದ 'ಝುಂಜೆಲಿನಿ' ಸುಮಾರು ಹತ್ತು ಗ್ರಾಮಗಳ 6000 ಕುಟುಂಬಗಳಿಗೆ ಇಂಟರ್‌ನೆಟ್ ಸೇವೆ ಒದಗಿಸುತ್ತಿದೆ. ಈ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯಾಗಲೀ ಇಂಟರ್‌ನೆಟ್ ಆಗಲೀ ಲಭ್ಯವಿರಲಿಲ್ಲ. ಈ ಮೂಲಭೂತ ಸೌಕರ್ಯದ ಅಗತ್ಯವನ್ನು ಮನಗಂಡು 10 ಜನ ಸ್ಥಳೀಯ ಯುವಕರು ಸೇರಿ ಈ ಸಹಕಾರಿ ಸಂಘವನ್ನು ಸ್ಥಾಪಿಸಿ, ಅದರ ಮೂಲಕ ಎಲ್ಲ ಗ್ರಾಮಗಳಲ್ಲಿ ಸೌರ ವಿದ್ಯುತ್ ಘಟಕಗಳನ್ನು ಆರಂಭಿಸಿ ಗ್ರಾಮಸ್ತರಿಗೆ ಕಡಿಮೆದರದಲ್ಲಿ ಇಂಟರ್ ನೆಟ್ ಸೌಲಭ್ಯ ಒದಗಿಸಲು ಆರಂಭಿಸಿದರು. ಈ ಮಾದರಿಯು ಹಲವು ಹೊಸ ಸಹಕಾರಿ ಸಂಘಗಳಿಗೆ ಸ್ಫೂರ್ತಿಯಾಗಿದೆ. ಪಶ್ಚಿಮ ಆಫ್ರಿಕದ ಬೆನಿನ್ ದೇಶದಲ್ಲಿ ರೈತರು ಮತ್ತು ಇತರೆ ಸಮಾನ ಚಟುವಟಿಕೆಗಳಲ್ಲಿ ತೊಡಗಿರುವವರು ಮೂಲಭೂತ ಸೌಲಭ್ಯಗಳನ್ನು ಸಹಕಾರಿ ಮಾದರಿಯಲ್ಲಿ ಖರೀದಿಸಿ ಹಂಚಿಕೆಯ ಆಧಾರದಲ್ಲಿ ಉಪಯೋಗಿಸುವ 'ಕೋಆಪರೇಟಿವ್ಸ್ ಆಫ್ ಶೇರ್ಡ್ ಮೆಕನೈಝೇಶನ್' (ಅಗಒಂ) ಎನ್ನುವ 107 ಸಹಕಾರಿ ಗುಂಪುಗಳಿವೆ. ಇವುಗಳಲ್ಲಿ ಸುಮಾರು 1000 ರೈತರು ಸದಸ್ಯರಾಗಿದ್ದು, 57 ಟ್ರಾಕ್ಟರ್‌ಗಳನ್ನು ಜಂಟಿಯಾಗಿ ಖರೀದಿಸಲಾಗಿದೆ. ಕೃಷಿಗೆ ಬೇಕಾಗುವ ಯಾವುದೇ ಯಂತ್ರಗಳನ್ನು ಖರೀದಿಸುವಾಗ ಅವರವರು ಹೊಂದಿರುವ ಭೂಮಿಯ ಪರಿಮಾಣಕ್ಕನುಗುಣವಾಗಿ ಹಣ ನೀಡಿ, ತಮಗೆ ಬೇಕಾದಾಗ ಅದನ್ನು ಉಪಯೋಗಿಸಿಕೊಳ್ಳುತ್ತಾರೆ. ಇದರಿಂದಾಗಿ ಯಂತ್ರಗಳನ್ನು ವೈಯಕ್ತಿಕ ನೆಲೆಯಲ್ಲಿ ಕೊಳ್ಳಲು ಆರ್ಥಿಕ ಶಕ್ತಿ ಇಲ್ಲದವರೂ ಯಂತ್ರದ ಉಪಯೋಗ ಪಡೆಯಲು, ಯಂತ್ರಗಳ ಪೂರ್ಣ ಪ್ರಮಾಣದ ಉಪಯೋಗ ಪಡೆಯಲು ಮತ್ತು ಮುಖ್ಯವಾಗಿ ಅನಗತ್ಯವಾಗಿ ದೊಡ್ಡ ಮೊತ್ತವನ್ನು ಯಂತ್ರಗಳಮೇಲೆ ವಿನಿಯೋಗಿಸುವುದನ್ನು ತಡೆಯುವುದಕ್ಕೂ ಸಾಧ್ಯವಾಗಿದೆ. ಹತ್ತು ಸಾವಿರ ಸದಸ್ಯರನ್ನೂ ಮತ್ತು 13 ಸಾವಿರ ಉದ್ಯೋಗಿಗಳನ್ನೂ ಹೊಂದಿರುವ ಬ್ರೆಝಿಲ್‌ನ 'ಲಾರ್ ಕೋಆಪರೇಟಿವ ಆಗ್ರೋಇಂಡಸ್ಟ್ರಿಯಲ್' ತನ್ನ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆಯುವ ರೈತರು ಮತ್ತು ಪಶುಸಂಗೋಪನಾ ಚಟುವಟಿಕೆಯಲ್ಲಿ ತೊಡಗಿರುವವರಿಗೆ ಅಗತ್ಯವಾದ ಎಲ್ಲ ಬಗೆಯ ವಸ್ತುಗಳನ್ನೂ ಒಂದೋ ತಯಾರಿಸಿ ಇಲ್ಲವೇ ಖರೀದಿಸಿ ಒದಗಿಸುತ್ತದೆ. ಕೃಷಿಯ ಆಧುನೀಕರಣದಲ್ಲಿ ಮಹತ್ತರ ಪಾತ್ರ ವಹಿಸಿರುವ ಈ ಸಹಕಾರಿಯು ಹೊಸ ಅನ್ವೇಶಣೆಗಳಿಗೂ ಕಾರಣವಾಗಿದೆ.

ಭಾರತದಲ್ಲಿಯೂ ಮೂಲಸೌಕರ್ಯ ಒದಗಿಸುವ ಹಲವು ಸಹಕಾರಿ ಸಂಘಗಳಿವೆ. ಗುಜರಾತ್‌ನಲ್ಲಿರುವ ಸಿಲ್ವರ್ ಜುಬಿಲಿ ಬಯೋಗ್ಯಾಸ್ ಉತ್ಪಾದಕರ ಮತ್ತು ವಿತರಕರ ಸಹಕಾರಿ ಸಂಘವು ಒಂದು ಉತ್ತಮ ಉದಾಹರಣೆ. ಸ್ಥಳೀಯವಾಗಿ ಸಂಗ್ರಹಿಸಿದ ಸಗಣಿಯಿಂದ ಜೈವಿಕ ಇಂಧನ ತಯಾರಿಸಿ ಅದನ್ನು ಪೈಪ್‌ಗಳ ಮೂಲಕ ಮನೆಮನೆಗೆ ಸರಬರಾಜುಮಾಡುವುದರ ಜೊತೆಗೆ ಸ್ಥಳೀಯ ರೈತರಿಗೆ ಉತ್ತಮ ಗೊಬ್ಬರವನ್ನೂ ಈ ಸಹಕಾರಿ ಸಂಘವು ಒದಗಿಸುತ್ತಿದೆ. ದೆಹಲಿಯಲ್ಲಿ ನಿವೃತ್ತ ಯೋಧರ ಸಹಕಾರಿ ಸಂಘವು ಟ್ಯಾಕ್ಸಿ ಸೇವೆಯನ್ನು ಒದಗಿಸುತ್ತಿದೆ. ಕರ್ನಾಟಕದಲ್ಲಿ ಸಾರ್ವಜನಿಕ ಸಾರಿಗೆಯನ್ನು ನೀಡುತ್ತಿರುವ ಕೊಪ್ಪದ ಸಹಕಾರ ಸಾರಿಗೆ ಮತ್ತು ಗದಗ ಜಿಲ್ಲೆಯಲ್ಲಿರುವ ವಿದ್ಯುಚ್ಛಕ್ತಿ ವಿತರಣಾ ಸಹಕಾರಿ ಸಂಘಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಇಂತಹ ಪ್ರಯತ್ನಗಳ ಸಂಖ್ಯೆ ಹೆಚ್ಚಬೇಕಿದೆ ಮತ್ತು ವಿವಿದ ಮೂಲಭೂತಸೌಕರ್ಯಗಳು ಸಹಕಾರಿ

ಕ್ಷೇತ್ರದ ಮೂಲಕ ದೊರೆಯುವಂತಾಗಬೇಕಿದೆ. ಈ ನಿಟ್ಟಿನಲ್ಲಿ ಸಹಕಾರಿ ಸಂಘಟನೆಗಳು ಈ ಕೆಳಗಿನ ಪ್ರಯತ್ನಗಳನ್ನು ಮಾಡಬಹದಾಗಿದೆ.

1. ವಿವಿಧ ಮೂಲ ಸೌಕರ್ಯಗಳನ್ನು ಒದಗಿಸಲು ಸಹಕಾರಿ ಸಂಘಗಳನ್ನು ಸ್ಥಾಪಿಸಲು ಸರಕಾರ ಮತ್ತು ಮಹಾಮಂಡಳಗಳು ಉತ್ತೇಜನ ನೀಡಬಹುದು.
2. ದೈನಂದಿನ ಬಳಕೆಯ ಅಗತ್ಯಗಳಾದ ನೀರು, ವಿದ್ಯುಚ್ಛಕ್ತಿ, ಅಡುಗೆ ಅನಿಲ, ಹಾಲು ಮುಂತಾದುವುಗಳ ವಿತರಣೆಮಾಡುವ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಪ್ರರ್ಯಾಯವಾಗಿ ಮತ್ತು ರಚನಾತ್ಮಕ ಸ್ಪರ್ಧಿಗಳ ರೂಪದಲ್ಲಿ ಸಹಕಾರಿ ಸಂಸ್ಥೆಗಳೂ ಈ ಸೇವೆಗಳನ್ನು ಒದಗಿಸಲು ಪ್ರಯತ್ನಿಸಬೇಕು.
3. ಸಾರ್ವಜನಿಕರ ದೈನಂದಿನ ಉಪಯೋಗದ ಮೂಲ ಸೌಕರ್ಯಗಳ ವಿತಣೆಯನ್ನು ಸಹಕಾರಿ ಸಂಘಗಳು ಕೈಗೆತ್ತಿಕೊಳ್ಳಬಹುದು
4. ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ, ವಿಶೇಷವಾಗಿ ಗ್ರಾಮೀಣ ಪ್ರದೇಶದ ಸದಸ್ಯರಿಗೆ ಅವರುಗಳ ಅಗತ್ಯದ ಮೂಲ ಸೌಕರ್ಯಗಳನ್ನು ಒಂದೇ ಸೂರಿನಡಿಯಲ್ಲಿ ದೊರೆಯುವಂತೆ ತಮ್ಮ ವ್ಯವಹಾರ ಚಟುವಟಿಕೆಗಳನ್ನು ವಿಸ್ತರಿಸಬಹುದು
5. ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಮೂಲಕ ಮೌಲ್ಯವರ್ಧನೆ ಮಾಡಲು ಸಾಧ್ಯವಾಗುವಂತೆ ಸಂಸ್ಕರಣ ಘಟಕಗಳನ್ನು ಆರಂಭಿಸಬಹುದು
6. ಕೃಷಿ ಅಥವ ಸದಸ್ಯರ ಇತರ ಯಾವುದೇ ವ್ಯವಹಾರಕ್ಕೆ ಅಗತ್ಯವಾದ ಟ್ರಾಕ್ಟರಗಳು, ಗೋದಾಮುಗಳು, ಸಾರಿಗೆ ವಾಹನಗಳು ಮುಂತಾದುವುಗಳನ್ನು ಖರೀದಿಸಿ ಬಾಡಿಗೆ ಆಧಾರದಲ್ಲಿ ಗ್ರಾಹಕರಿಗೆ ಒದಗಿಸುವುದರ ಮೂಲಕ ಮೂಲಸೌಕರ್ಯಗಳ ಉತ್ತಮ ಉಪಯೋಗವಾಗುವಂತೆ ಮಾಡಬಹುದು
7. ಕೃಷಿ ಸಹಕಾರ ಸಂಘಗಳು ಜೈವಿಕ ಇಂಧನ, ಸೌರ ವಿದ್ಯುತ್, ಗ್ರಾಮೀಣ ಪ್ರದೇಶದಲ್ಲಿ ಲಭ್ಯವಾಗುವ ವಿವಿಧ ಕಚ್ಚಾವಸ್ತುಗಳಿಂದ ಉಪಯೋಗಿ ವಸ್ತುಗಳನ್ನು ತಯಾರಿಸುವುದು, ಕೃಷಿಗೆ ಅಗತ್ಯವಾದ ತಂತ್ರಜ್ಞಾನದ ಅಭಿವೃದ್ಧಿ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು
8. ಹಲವು ಸಹಕಾರಿ ಸಂಘಗಳು ಪರಸ್ಪರ ಸಹಕಾರದೊಂದಿಗೆ ಗ್ರಾಮೀಣ ಪ್ರದೇಶದ ವಿವಿಧ ಉತ್ಪಾದನಾ ಚಟುವಟಿಕೆಗಳಿಗೆ ಬಂಡವಾಳ ಕ್ರೋಢೀಕರಿಸುವ ಯೋಜನೆಗಳನ್ನು ರೂಪಿಸಬಹುದು
9. ಗ್ರಾಮೀಣ ಪ್ರದೇಶದ ವಿವಿಧ ಅಗತ್ಯಗಳಿಗೆ ಬೇಕಾದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಕೃಷಿಸಹಕಾರಿ ಸಂಘಗಳು ನಡೆಸಬಹುದು
10. ಉತ್ಪಾದನಾ ಸಹಕಾರಿ ಸಂಘಗಳು ಬಹು ಅಗತ್ಯವಾಗಿದ್ದು, ಸಹಕಾರಿ ಸಂಘಗಳು ಉತ್ಪಾದನಾ ಚಟುವಟಿಕೆಗಳೆಡೆಗೆ ತಮ್ಮ ವ್ಯವಹಾರವನ್ನು ವೈವಿಧ್ಯೀಕರಿಸಲು ಕ್ರಮವಹಿಸಬಹುದು

ಭಾರತದ ಪರಿಸ್ಥಿತಿಯಲ್ಲಿ ಗಮನಿಸಿದಾಗ ಮೂಲಸೌಕರ್ಯಗಳು ಮತ್ತು ಆಧುನಿಕ ಆವಿಷ್ಕಾರಗಳು ತುರ್ತು ಅಗತ್ಯವಾದುದರಿಂದ ಸಹಕಾರಿ ಸಂಘಟನೆಗಳು ಈ ಚಟುವಟಿಕೆಗಳು ತಮ್ಮ ಕಾರ್ಯಕ್ಷೇತ್ರದಿಂದ ಹೊರಗಿನದು ಎಂದು ಭಾವಿಸದೆ, ಎಸ್‌ಡಿಜಿ 9ರ ಸಾಧನೆಗೆ ಪೂರಕ ಕಾರ್ಯತಂತ್ರಗಳನ್ನು ರೂಪಿಸಬೇಕು.

10 REDUCED INEQUALITIES

# ಎಸ್‌ಡಿಜಿ 10: ಅಸಮಾನತೆಯನ್ನು ಕಡಿಮೆಮಾಡುವುದು

ದೇಶಗಳ ಒಳಗೆ ಮತ್ತು ದೇಶಗಳ ನಡುವೆ ಇರುವ ಅಸಮಾನತೆಯನ್ನು ಕಡಿಮೆ ಮಾಡುವುದು (ಖಿಜಜಣಾಭಿಜ ುಟಿಜಡಣಾಚಿಟುಣಥಿ ತಿಣುಖುಟಿ ಚಿಟಿಜ ಚಿಟಂಟಿಂ ಥಿಂಣಾಟಿಣಡುಚಿ) ಈ ಗುರಿಯ ಪ್ರಮುಖ ಆಶಯವಾಗಿದೆ. ಎಲ್ಲ ದೇಶಗಳ ಮತ್ತು ಅವುಗಳಲ್ಲಿನ ಎಲ್ಲ ಪ್ರದೇಶಗಳ ಜನ, ಎಲ್ಲ ನೆಲೆಯಲ್ಲಿ ಸಮಾನತೆ ಸಾಧಿಸಬೇಕೆನ್ನುವುದು ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಗಳಲ್ಲೊಂದು. ಆದುದರಿಂದ ಈ ಗುರಿಯಲ್ಲಿ ಅಸಮಾನತೆಯನ್ನು ತೊಡೆದುಹಾಕುವ ಬಗೆಗೆ ಒತ್ತು ನೀಡಲಾಗಿದೆ. ಜಗತ್ತಿನಲ್ಲಿ ಶ್ರೀಮಂತ ಹಾಗೂ ಬಡ ದೇಶಗಳ ನಡುವೆ ಅಪಾರ ಅಸಮಾನತೆ ಇದೆ. ಹಾಗೆಯೇ ಬಡ ಮತ್ತು ಶ್ರೀಮಂತ ದೇಶಗಳೆರಡರಲ್ಲೂ ಆರ್ಥಿಕ, ಸಾಮಾಜಿಕ ಮತ್ತು ಲಿಂಗಾಧಾರದಲ್ಲಿ ಬಹಳಷ್ಟು ಅಸಮಾನತೆಗಳಿವೆ. ಇವೆಲ್ಲವನ್ನೂ ಹಂತ ಹಂತವಾಗಿ ಕಡಿಮೆ ಮಾಡುತ್ತಾ ಹೋಗುವುದು ಈ ಗುರಿಯ ಆಶಯ. ಈ ನಿಟ್ಟಿನಲ್ಲಿ, 2030ರ ಹೊತ್ತಿಗೆ ಪ್ರತಿ ದೇಶವೂ ತನ್ನ ಜನಸಂಖ್ಯೆಯ ತಳಮಟ್ಟದ ಶೇಕಡ 40ರಷ್ಟು ಜನರ ಆದಾಯವು ರಾಷ್ಟ್ರೀಯ ಸರಾಸರಿ ತಲಾದಾಯದ ಬೆಳವಣಿಗೆಯ ಪ್ರಮಾಣದಲ್ಲಿ ಬೆಳೆಯುವಂತೆ ನೋಡಿಕೊಳ್ಳಬೇಕೆಂದೂ ಮತ್ತು ಇದೇ ಅವಧಿಯಲ್ಲಿ ಎಲ್ಲೆಡೆ ವಯಸ್ಸು, ಲಿಂಗ, ಅಂಗವೈಕಲ್ಯ, ಜನಾಂಗೀಯತೆ, ಧರ್ಮ ಮುಂತಾದುವುಗಳನ್ನು ಲೆಕ್ಕಿಸದೆ ಎಲ್ಲರನ್ನೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥರಗಳಲ್ಲಿ ಸೇರ್ಪಡೆಗೊಳಿಸಲು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕೆಂದೂ ಈ ಗುರಿಯಲ್ಲಿ ನಿರ್ದೇಶಿಸಲಾಗಿದೆ. ಈ ಗುರಿಯ ಸಾಧನೆಯನ್ನು ಸುಗಮಗೊಳಿಸಲು ಅನುವಾಗುವಂತೆ ಚಾಲ್ತಿಯಲ್ಲಿರುವ ಶಾಸನಗಳು ಮತ್ತು ನೀತಿಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವಂತೆಯೂ ಮತ್ತು ವಿಶೇಷವಾಗಿ ವೇತನ ಹಾಗೂ ಸಾಮಾಜಿಕ ಸಂರಕ್ಷಣೆಯು ಎಲ್ಲರಿಗೂ ಸಮಾನವಾಗಿ ದೊರೆಯುವಂತೆ ಮಾಡಬೇಕೆಂದೂ ಈ ಗುರಿಯು ವಿಧಿಸುತ್ತದೆ. ಜಾಗತಿಕ ಹಣಕಾಸು ಮಾರುಕಟ್ಟೆಯ ಸುಧಾರಣೆ, ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ತರುವುದು ಮತ್ತು ಇವುಗಳಲ್ಲಿ ಬಡ ದೇಶಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವುದು, ಜನರು ಒಂದು ಪ್ರದೇಶದಿಂದ ಇನ್ನೊಂದಕ್ಕೆ ಮತ್ತು ಒಂದು ದೇಶದಿಂದ ಇನ್ನೊಂದಕ್ಕೆ ಕೆಲಸದ ನಿಮಿತ್ತ ಹೋಗುವ ಮತ್ತು ವಲಸೆ ಹೋಗುವ ಪ್ರಕ್ರಿಯೆಯನ್ನು ಸರಳ ಮತ್ತು ಕ್ರಮಬದ್ಧಗೊಳಿಸಿ ಜನರ ಚಲನಶೀಲತೆಯನ್ನು ಹೆಚ್ಚಿಸುವುದು, ವಿಶ್ವ ವ್ಯಾಪಾರ ಸಂಸ್ಥೆಯ (ಘಂಡಿಟಜ ಖಿಡಿಚಿಜಜ ಔಡಿಂಚಿಟುದಚಿಣುಂಟಿ) ಒಪ್ಪಂದಗಳಿಗನುಸಾರವಾಗಿ ಬಡ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಭೇದಾತ್ಮಕ ನಿಯಮಗಳನ್ನು ಕ್ಲುಪ್ತವಾಗಿ ಜಾರಿಗೆ ತರುವುದು, ಎಲ್ಲ ದೇಶಗಳಿಗೆ ಮತ್ತು ವಿಶೇಷವಾಗಿ ಅತಿ ಹಿಂದುಳಿದ ದೇಶಗಳು, ಆಫ್ರಿಕನ್ ದೇಶಗಳು, ಮತ್ತು ಸಣ್ಣ ಹಾಗು ದ್ವೀಪ ರಾಷ್ಟ್ರಗಳಿಗೆ ಅವರವರ ಅಭಿವೃದ್ಧಿ ಯೋಜನೆಗಳಿಗನುಸಾರವಾಗಿ ಅಧಿಕೃತ ಅಭಿವೃದ್ಧಿ ನೆರವು ಮತ್ತು ವಿದೇಶೀ ನೇರ ಹೂಡಿಕೆಯೂ ಸೇರಿದಂತೆ ಎಲ್ಲ ರೀತಿಯ ಹಣಕಾಸಿನ ಹರಿವು ಸುಗಮವಾಗಿ ನಡೆಯುವಂತೆ ಮಾಡುವುದು ಮತ್ತು ವಲಸೆಗಾರ ಉದ್ಯೋಗಿಗಳು ತಮ್ಮ ದೇಶಕ್ಕೆ ಕಳುಹಿಸುವ ಹಣದ ವರ್ಗಾವಣೆ ವೆಚ್ಚವು ಶೇಕಡ 3ಕ್ಕಿಂತ ಕಡಿಮೆಯಾಗುವಂತೆ ಮಾಡುವುದರ ಮೂಲಕ ಅಸಮಾನತೆಯನ್ನು ಕಡಿಮೆ ಮಾಡುವುದು ಅಗತ್ಯವೆಂದೂ ಈ ಗುರಿಯಲ್ಲಿ ತಿಳಿಸಲಾಗಿದೆ.

ಜಗತ್ತಿನಲ್ಲಿ ವಿವಿಧ ಬಗೆಯ ಅಸಮಾನತೆಗಳಿವೆಯಾದರೂ ಬಹುಷ: ಅತಿಮುಖ್ಯವಾದುದೆಂದರೆ ಆರ್ಥಿಕ ಅಸಮಾನತೆ. ಅಂತಾರಾಷ್ಟ್ರೀಯ ಅಂಕಿಅಂಶಗಳ ಪ್ರಕಾರ ಜಗತ್ತಿನ ಅತ್ಯಂತ ಮೇಲ್ಸ್ಥರದ (ಶ್ರೀಮಂತ) ಶೇಕಡ 10ರಷ್ಟು ಜನರು ಜಗತ್ತಿನ ಆದಾಯದ ಶೇಕಡ 40ರಷ್ಟನ್ನು ಗಳಿಸುತ್ತಿದ್ದರೆ, ಅತ್ಯಂತ ಕೆಳಸ್ಥರದ (ಬಡ) ಶೇಕಡ 10ರಷ್ಟು ಜನರು ಜಗತ್ತಿನ ಆದಾಯದ ಶೇಕಡ 2ರಿಂದ 5ರಷ್ಟನ್ನು ಗಳಿಸುತ್ತಿದ್ದಾರೆ. ಈ ಅಂತರವು ಎಲ್ಲ ದೇಶಗಳಲ್ಲೂ ಏರಿಕೆಯಾಗುತ್ತಿರುವುದು ಅತ್ಯಂತ ಕಳವಳದ ಸಂಗತಿ. ಮುಖ್ಯವಾಗಿ ಅರ್ಥವ್ಯವಸ್ಥೆಯಲ್ಲಿ ಜನರ ನೇರ ಭಾಗವಹಿಸುವಿಕೆಯು ಕಡಿಮೆಯಾಗಿರುವುದೇ ಈ ಅಸಮಾನತೆಗೆ ಕಾರಣವಾಗುತ್ತಿದೆ. ಆದುದರಿಂದ ಜನರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಸಂಸ್ಥೆಗಳು ಅಸಮಾನತೆಯನ್ನು ತೊಡೆಯುವಲ್ಲಿ ಪ್ರಮುಖ ಪಾತ್ರ ವಹಿಸಬಲ್ಲವೆಂದು ಬಹುತೇಕ ಅರ್ಥಶಾಸ್ತ್ರಜ್ಞರು ನಂಬುತ್ತಾರೆ.

ಸಹಕಾರಿ ಸಂಘಟನೆಗಳು ಸಾಮಾನ್ಯಜನರೂ ಭಾಗವಹಿಸುವ ಮತ್ತು ನಿರ್ವಹಿಸುವ ಆರ್ಥಿಕ ಸಂಘಟನೆಗಳಾದುದರಿಂದ ಸಹಜವಾಗಿಯೇ ಎಸ್‌ಡಿಜಿ 10ರ ಗುರಿಸಾಧನೆಯಲ್ಲಿ ಅವುಗಳ ಪಾತ್ರ ಮುಖ್ಯವಾಗುತ್ತದೆ.

**ಸಹಕಾರಿ ಸಂಸ್ಥೆಗಳ ಪಾತ್ರ:**

ಬಡ ಮತ್ತು ಶ್ರೀಮಂತ ದೇಶಗಳು, ನಗರ ಮತ್ತು ಗ್ರಾಮೀಣ ಪ್ರದೇಶಗಳು, ಕೃಷಿ ಮತ್ತು ಕೈಗಾರಿಕೆಗಳು, ಶಿಕ್ಷಿತರು ಮತ್ತು ಅನಕ್ಷರಸ್ಥರು, ನಾಗರೀಕ ಸಮಾಜ ಮತ್ತು ಬುಡಕಟ್ಟು ಸಮುದಾಯಗಳು, ಪುರುಷ ಮತ್ತು ಸ್ತ್ರೀಯರು ಈ ಎಲ್ಲ ಪ್ರಭೇದಗಳ ಸಹಕಾರಿ ಸಂಘಟನೆಗಳು ಪ್ರಪಂಚದಾದ್ಯಂತ ಇರವುದನ್ನು ಕಾಣುತ್ತೇವೆ. ಬಹುಷ: ಇಷ್ಟು ವಿಸ್ತೃತವಾದ ನೆಲೆಗಟ್ಟಿರುವ ಮತ್ತು ಜನರ ನೇರ ಭಾಗವಹಿಸುವಿಕೆಯನ್ನು ಸಾಧ್ಯವಾಗಿಸಿದ ಬೇರೆ ಸಾಂಸ್ಥಿಕ ಉದಾಹರಣೆಗಳು ದೊರೆಯಲಾರದು. ಸಹಜವಾಗಿಯೇ ಅಸಮಾನತೆಯನ್ನು ತೊಡೆಯುವಲ್ಲಿ ತಮ್ಮ ವಿಶಿಷ್ಟ ಕೊಡುಗೆ ನೀಡುತ್ತಿರುವ ಸಹಕಾರಿ ಸಂಘಗಳ ಹಲವು ಉದಾಹರಣೆಗಳು ನಮಗೆ ದೊರೆಯುತ್ತವೆ.

ಮೆಕ್ಸಿಕೋದ ಇಸ್ತಮಸ್ ಪ್ರಾಂತ್ಯದಲ್ಲಿರುವ ಬುಡಕಟ್ಟು ಸಮುಕದಾಯಗಳ ಸಹಕಾರಿ ಸಂಘಟನೆಯು 53 ವಿವಿಧ ಬುಡಕಟ್ಟುಗಳನ್ನು ಒಂದು ಸಂಸ್ಥೆಯ ಆಶ್ರಯದಲ್ಲಿ ತಂದು ಅವರ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಒಂದು ವಿಶೇಷ ನಿಧಿಯನ್ನು ಸ್ಥಾಪಿಸಿ ಅದರ ಮೂಲಕ ಆರ್ಥಿಕ ಮತ್ತು ಸಾಮಾಜಿಕ ನೆಲೆಯಲ್ಲಿ ಬುಡಕಟ್ಟು ಸಮುದಾಯಗಳನ್ನು ಮುಂದುವರೆದ ಜನಾಂಗಗಳಿಗೆ ಸಮನಾಗಿ ಬೆಳೆಸಲು ಸಹಕಾರಿಯಾಗಿದೆ. 90ರ ದಶಕದಲ್ಲಿ ಮೊರಕ್ಕೋ ದೇಶದ ಅರ್ಗನ್ ಎಣ್ಣೆಗೆ (argan oil) ಎಲ್ಲೆಡೆ ಬೇಡಿಕೆ ಏರಲಾರಂಭಿಸಿತು. ಮೂಲಭೂತವಾಗಿ ಬುಡಕಟ್ಟು ಜನಾಂಗದವರು ತಯಾರಿಸುತ್ತಿದ್ದ ಈ ಎಣ್ಣೆಯ ತಯಾರಿಕೆ ಮತ್ತು ವಿತರಣೆಯನ್ನು ದೊಡ್ಡ ದೊಡ್ಡ ಖಾಸಗಿ ಸಂಸ್ಥೆಗಳು ಆಕ್ರಮಿಸಿಕೊಂಡವು. ಈ ಸಮಯದಲ್ಲಿ ಬೆರ್ಬರ್ ಪ್ರಾಂತ್ಯದ ಗ್ರಾಮೀಣ ಮಹಿಳೆಯರು ಸೇರಿ ಸಹಕಾರಿ ಸಂಸ್ಥೆಯೊಂದನ್ನು ಆರಂಭಿಸದರು. ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಆದುನಿಕ ತಂತ್ರಜ್ಞಾನವನ್ನೂ ಬಳಸುತ್ತಾ ಜೊತೆಗೆ ಪಾರಂಪರಿಕವಾಗಿ ಬಂದ ವಿಧಾನವನ್ನೂ ಉಪಯೋಗಿಸುತ್ತಾ ಬಂದ ಈ ಸಹಕಾರಿಯು ತನ್ನ ವ್ಯವಸ್ಥಾಪನೆಯಲ್ಲಿ ಬುಡಕಟ್ಟು ಸಮುದಾಯಗಳಲ್ಲಿದ್ದ ಸಮಾನತೆಯ ಅಂಶಗಳನ್ನೆಲ್ಲ ಅಳವಡಿಸಿಕೊಂಡು ಬೆಳೆಯಿತು. ಇದರ ಪರಿಣಾಮಗಾಗಿ ಈ ಸಹಕಾರಿಯು ಮೊರೊಕ್ಕೋದಲ್ಲಿ ಅರ್ಗನ್ ಎಣ್ಣೆ ತಯಾರಿಕೆಯ ಅತ್ಯಂತ ದೊಡ್ಡ ಮತ್ತು ಉತ್ತಮ ಸಂಘಟನೆಯಾಗಿ ಬೆಳೆದು ಬುಡಕಟ್ಟು ಸಮುದಾಯದ ಜನರ ಅದರಲ್ಲೂ ವಿಶೇಷವಾಗಿ ಮಹಿಳೆಯರ ಆದಾಯವು ಹತ್ತು ಪಟ್ಟು ಹೆಚ್ಚಾಗುವಂತೆ ಮಾಡಿ ಅವರಿಗೆ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆ ದೊರೆಯುವಂತೆ ಮಾಡಿದೆ.

ಇಥಿಯೋಪಿಯಾದ ಅದಿಸ್ ಅಬಾಬದಲ್ಲಿ 1998ರಲ್ಲಿ ಆರಂಭವಾದ 'ಯೆನೆಗ್ಯು ಸ್ಯು ಸ್ಯಾನಿಟರಿ ಸರ್ವಿಸ್ ಕೋಆಪರೇಟಿವ್' ವಿಕಲಾಂಗರಿಗಾಗಿಯೇ ಆರಂಭವಾದ ಸಹಕಾರಿ ಸಂಘ. ಇದು ದೈಹಿಕ ಅಸಾಮರ್ಥ್ಯಹೊಂದಿದ ಮತ್ತು ಅನಕ್ಷರಸ್ಥರಾದವರಿಗೆ ಮನೆ ಮತ್ತು ಕಛೇರಿಗಳ ಬಚ್ಚಲು ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವ ತರಬೇತಿ ನೀಡಿ ನೂರಾರು ಜನ ಕೆಲಸ ಪಡೆದು ಉತ್ತಮ ಆರ್ಥಿಕ ಶಕ್ತಿ ಹೊಂದಲು ಕಾರಣವಾಗಿದೆ. ಮುಖ್ಯವಾಗಿ ಪರಾವಲಂಬಿಗಳಾಗಿರದೆ ತಾವೆ ಗಳಿಸಿ ಜೀವನ ನಡೆಸಲು ಅನುವುಮಾಡಿಕೊಡುವುದರ ಮೂಲಕ ಇವರು ಸಾಮಾಜಿಕ ಗೌರವ ಮತ್ತು ಸಂರಕ್ಷಣೆ ಪಡೆಯಲು ಸಹಕರಿಸುತ್ತಿದೆ. ಸಿಂಗಪುರದ ಅತಿದೊಡ್ಡ ಸಹಕಾರಿ ಸಮೂಹದ ಭಾಗವಾದ ಎನ್‌ಟಿಯುಸಿ ವಿಮಾ ಸಂಸ್ಥೆಯು ಸ್ವಯಂಪ್ರೇರಣೆಯಿಂದ ನರದೌರ್ಬಲ್ಯವಿರುವ ಮಕ್ಕಳಿಗಾಗಿಯೇ ವಿಮಾಯೋಜನೆಯನ್ನು ಆರಂಭಿಸಿ ಸಾವಿರಾರು ಮಕ್ಕಳ ಶುಶ್ರೂಷೆಯು ಸಾಧ್ಯವಾಗುವಂತೆ ಮಾಡಿದೆ. ಅಮೇರಿಕದ ರಾಷ್ಟ್ರೀಯ ಪತ್ತಿನ ಸಹಕಾರಿಗಳ ಮಹಾಮಂಡಳವು ವಿಕಲಾಂಗರ ಕಲ್ಯಾಣಕ್ಕಾಗಿ ಇರುವ ರಾಷ್ಟ್ರೀಯ ಸಂಸ್ಥೆಯ ಸಹಯೋಗದಲ್ಲಿ ವಿಕಲಾಂಗರಿಗಾಗಿಯೇ ವಿಶೇಷ ಪತ್ತಿನ ಯೋಜನೆಗಳನ್ನು ರೂಪಿಸಿದೆ. ಇಟಲಿ ದೇಶವು ಸಾಮಾಜಿಕ ಸಹಕಾರಿ ಸಂಘಗಳಿಗಾಗಿಯೇ (ಸೋಶಿಯಲ್ ಕೋಆಪರೇಟಿವ್ಸ್) ಪ್ರತ್ಯೇಕ ಕಾಯಿದೆಯನ್ನು ಜಾರಿಗೆ ತಂದಿದ್ದು ಈ ಕಾಯಿದೆಯಡಿಯಲ್ಲಿ 16,000ಕ್ಕಿಂತ ಹೆಚ್ಚು ಸಹಕಾರಿ ಸಂಘಗಳು ಸ್ಥಾಪಿತವಾಗಿವೆ. ಸಾಮಾಜಿಕ ಸಹಕಾರಿ ಸಂಘಗಳು ಸಮಾಜದ ಬಡ ಮತ್ತು ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಸೇವೆಗಳನ್ನು ಒದಗಿಸುತ್ತವೆ. ಹಾಗೆಯೇ ಈ ಸಂಘಗಳಲ್ಲಿ ಶೇಕಡ 30ಕ್ಕಿಂತ ಹೆಚ್ಚು ವಿಕಲಾಂಗ ಸಿಬ್ಬಂದಿ

ಇದ್ದಲ್ಲಿ ಸರಕಾರದಿಂದ ವಿಶೇಷ ಸಹಾಯವೂ ದೊರೆಯುತ್ತದೆ. ಈಕ್ವೆಡಾರ್‌ನಲ್ಲಿ 1998ರಲ್ಲಿ ಆರಂಭವಾದ 'ಬೆಲ್ಲ ರಿಕ ಮೈನಿಂಗ್ ಸಹಕಾರಿ ಸಂಘವು' ವಲಸೆಗಾರ ಕಾರ್ಮಿಕರ ರಕ್ಷಣೆ, ಅವರ ವಲಸೆಯನ್ನು ಕ್ರಮಬದ್ಧಗೊಳಿಸುವುದು ಮತ್ತು ಅವರಿಗೆ ಮಧ್ಯಮ ಗಾತ್ರದ ಗಣಿ ಕೈಗಾರಿಕೆಗಳಲ್ಲಿ ಕೆಲಸ ಕೊಡಿಸುವ ಚಟುವಟಿಕೆಯಲ್ಲಿ ತೊಡಗಿದೆ.

ಅಸಮಾನತೆಯ ಸಮಸ್ಯೆಯನ್ನು ಎದುರಿಸುತ್ತಿರುವವರಿಗೆ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನ ಒದಗಿಸುತ್ತಿರುವ ಹಲವು ಸಹಕಾರಿ ಸಂಸ್ಥೆಗಳು ಭಾರತದಲ್ಲಿಯೂ ಕಾಣಸಿಗುತ್ತವೆ. ದೆಹಲಿಯಲ್ಲಿ 1998ರಲ್ಲಿ ಆರಂಭವಾದ ನಿರ್ಮಲ ನಿಕೇತನ್ ಸಹಕಾರಿಯು, ನಗರಕ್ಕೆ ವಲಸೆಬಂದ ಬುಡಕಟ್ಟು ಸಮುದಾಯದ ಮಹಿಳೆಯರಿಗೆ ಮನೆಕೆಲಸದಲ್ಲಿ ತರಬೇತಿ ನೀಡಿ ಅವರುಗಳು ನಗರ ಪ್ರದೇಶದಲ್ಲಿ ಮನೆಗೆಲಸದ ಸೇವೆ ಒದಗಿಸುವ ಅವಕಾಶ ಕಲ್ಪಿಸಿದೆ. ಅಲ್ಲದೆ ಇತರೆ ಸಂಸ್ಥೆಗಳ ಜೊತೆ ಕೈಜೋಡಿಸಿ ವಲಸಿಗರಾಗಿ ಬರುವ ಬುಡಕಟ್ಟು ಕುಟುಂಬಗಳಿಗೆ ಅಗತ್ಯ ರಕ್ಷಣೆ ದೊರೆಯುವಂತಾಗಲು ಕರಡು ನೀತಿಯೊಂದನ್ನು ರಚಿಸಿ ಸರಕಾರಕ್ಕೆ ಸಲ್ಲಿಸಿದೆ. ಹೀಗೆಯೇ ಗಿರಿಜನ ಸಹಕಾರಿ ಸಂಘಗಳು, ಮಹಿಳಾ ಸಹಕಾರಿ ಸಂಘಗಳು, ಕೂಲಿ ಕಾರ್ಮಿಕರ ಸಹಕಾರಿ ಸಂಘಗಳು ಮುಂತಾದುವುಗಳು ಆಯಾ ವರ್ಗಗಳ ಏಳಿಗೆಗಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನೂ ನೋಡಬಹುದು. ವಿವಿಧ ಬಗೆಯ ಅಸಮಾನತೆಗಳನ್ನು ಕಡಿಮೆಮಾಡುವ ಕುರಿತಂತೆ ಸಹಕಾರಿ ಸಂಘಟನೆಗಳು ಈ ಕೆಳಗಿನ ಕೆಲವು ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಬಹದಾಗಿದೆ.

1. ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳಿಗೆ ಅನುಕೂಲವಾಗುವಂತೆ ಇಟಲಿ ಮತ್ತು ಇತರೆ ಐರೋಪ್ಯ ದೇಶಗಳ ಮಾದರಿಯಲ್ಲಿ ಸಾಮಾಜಿಕ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಸರಕಾರ ಮತ್ತು ಸಹಕಾರ ಮಹಾಮಂಡಳಗಳು ಕಾನೂನು ರಚನೆಗೆ ಕ್ರಮವಹಿಸಬಹುದು
2. ಈಗಾಗಲೇ ಇರುವ ಬುಡಕಟ್ಟು ಸಮುದಾಯಗಳು ಮತ್ತು ಇತರೆ ಅಂಚಿನಲ್ಲಿರುವ ಸಮುದಾಯಗಳ ಸಹಕಾರಿ ಸಂಘಗಳನ್ನು ಬಲಪಡಿಸಲು ಕ್ರಮ ಕೈಗೊಳ್ಳಬಹುದು
3. ಸಹಕಾರಿ ಸಂಘಗಳು ವಿವಿಧ ಹಿಂದುಳಿದ ಮತ್ತು ಅಸಮಾನತೆಯ ಸಮಸ್ಯೆಯಲ್ಲಿರುವವರಿಗೆ ವಿಶೇಷ ಪತ್ತಿನ ಯೋಜನೆಗಳನ್ನು ರೂಪಿಸಬಹುದು
4. ಗ್ರಾಮೀಣ ಪ್ರದೇಶದಲ್ಲಿರುವ ಸಹಕಾರಿ ಸಂಘಗಳು ಆರ್ಥಿಕ ಮತ್ತು ಸಾಮಾಜಿಕವಾಗಿ ಅಂಚಿನಲ್ಲಿರುವ ಜನರನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತರಲು ಅಗತ್ಯವಾದ ಸೇವೆಗಳನ್ನು ಒದಗಿಸಬಹುದು
5. ಸಹಕಾರಿ ಸಂಸ್ಥೆಗಳು ಸರಕಾರದ ವಿವಿಧ ವಿಭಾಗಗಳು ಮತ್ತು ಸ್ವಯಂಸೇವಾ ಸಂಘಟನೆಗಳ ಸಹಯೋಗದಲ್ಲಿ ಹಿಂದುಳಿದ ಸಮುದಾಯಗಳಿಗೆ ಶಿಕ್ಷಣ, ತರಬೇತಿ, ಅವರುಗಳು ಉತ್ಪಾದನಾ ಕ್ಷೇತ್ರದಲ್ಲಿ ತೊಡಗುವಂತೆ ಮಾಡುವುದು, ಅವರುಗಳು ಪಾರಂಪರಿಕವಾಗಿ ಉತ್ಪಾದಿಸುವ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವುದು ಮುಂತಾದ ಚಟುವಟಿಕೆಗಳನ್ನು ಆರಂಭಿಸಬಹುದು.

ಅಸಮಾನತೆಯನ್ನು ಕಡಿಮೆಮಾಡುವ ಪ್ರಕ್ರಿಯೆಯಲ್ಲಿ ಎಲ್ಲರೂ ಭಾಗಿಗಳಾಗಬೇಕಾದುದು ಅನಿವಾರ್ಯ. ಪರಸ್ಪರ ಸಹಕಾರದಿಂದ ಮಾತ್ರವೇ ಈ ಸಮಸ್ಯೆಯನ್ನು ಎದುರಿಸುವುದು ಸಾಧ್ಯ. ಮುಖ್ಯವಾಗಿ ಉತ್ಪಾದನೆ ಮತ್ತು ವಿತರಣಾ ಚಟುವಟಿಕೆಗಳಲ್ಲಿ ಹೆಚ್ಚಿನ ಜನರು ಭಾಗವಹಿಸುವಂತೆ ಮಾಡಿದಾಗ ಮಾತ್ರ ಅಸಮಾನತೆಯ ಪ್ರಮಾಣವನ್ನು ಕಡಿಮೆಮಾಡಬಹುದು. ಆದುದರಿಂದ ಜನರು ತಮ್ಮ ಅಗತ್ಯಗಳಿಗಾಗಿ ತಾವೇ ರಚಿಸಿಕೊಂಡು, ತಾವೇ ನಡೆಸಿಕೊಂಡು ಹೋಗಬಹುದಾದ ಸಹಕಾರಿ ಸಂಘಟನೆಗಳು ಸಂಖ್ಯೆಯಲ್ಲಿ ಮತ್ತು ಶಕ್ತಿಯಲ್ಲಿ ಹೆಚ್ಚಾಗುತ್ತಾ ಸಾಗಿದಲ್ಲಿ ಅಸಮಾನತೆಯು ತಾನೇ ತಾನಾಗಿ ಕಡಿಮೆಯಾಗುತ್ತಾ ಹೋಗಬಹುದು.

11 SUSTAINABLE CITIES AND COMMUNITIES

# ಎಸ್‌ಡಿಜಿ 11: ಸುಸ್ಥಿರ ನಗರಗಳು ಮತ್ತು ಸಮುದಾಯಗಳು

ನಗರಗಳು ಮತ್ತು ಮನುಷ್ಯರು ವಾಸವಿರುವ ಎಲ್ಲ ಪ್ರದೇಶಗಳೂ, ಸುರಕ್ಷಿತ, ಸ್ಥಿತಿಸ್ಥಾಪಕ, ಎಲ್ಲರನ್ನು ಒಳಗೊಂಡ ಮತ್ತು ಸುಸ್ಥಿರವಾಗಿರುವಂತೆ ಮಾಡುವುದು (Make cities and human settlements inclusive, safe, resilient and sustainable) ಸುಸ್ಥಿರ ಅಭಿವೃದ್ಧಿ ಸಾಧನೆಗೆ ಒಂದು ಪ್ರಮುಖ ಅಗತ್ಯವಾಗಿದೆ. ಇತ್ತೀಚಿನ ಕೆಲವು ದಶಕಗಳಲ್ಲಿ ನಗರಗಳಲ್ಲಿನ ಜನಸಂಖ್ಯೆ ಅಗಾಧವಾಗಿ ಬೆಳೆದಿದೆ. ನಗರಗಳಲ್ಲಿರುವ ಕೈಗಾರಿಕೆಗಳು ಮತ್ತು ಕಛೇರಿಗಳು, ಶಿಕ್ಷಣ ಸಂಸ್ಥೆಗಳು ಮತ್ತು ಇತರೆ ಸಾರ್ವಜನಿಕ ಸೇವೆಗಳು ಸಹಜವಾಗಿಯೇ ಹೆಚ್ಚಿನ ಜನರಿಗೆ ನಗರ ಪ್ರದೇಶಗಳಿಗೆ ವಲಸೆ ಹೋಗುವಂತೆ ಮಾಡಿದೆ. ಇದರಿಂದಾಗಿ ಒಂದೆಡೆ ನಗರಗಳು ಬೆಳೆಯುತ್ತಿದ್ದರೆ, ಇನ್ನೊಂದೆಡೆ ನಗರವಾಸಿಗಳು ವಿವಿಧ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಆದುದರಿಂದ ಸುಸ್ಥಿರ ಅಭಿವೃದ್ಧಿಯ ಈ ಗುರಿಯಲ್ಲಿ ನಗರಗಳಲ್ಲಿನ ಸಮಸ್ಯೆಗಳನ್ನು ಕಡಿಮೆ ಮಾಡುವಕಡೆಗೆ ಗಮನ ಹರಿಸಲಾಗಿದೆ. 2030ರೊಳಗೆ ಎಲ್ಲ ನಗರವಾಸಿಗಳಿಗೂ ಸಮರ್ಪಕ, ಸುರಕ್ಷಿತ ಮತ್ತು ಕೈಗೆಟಕುವ ವಸತಿ ಮತ್ತು ಇತರೆ ಮೂಲಸೌಕರ್ಯಗಳು ದೊರೆಯುವಂತೆ ಮಾಡಬೇಕೆಂದು ಈ ಗುರಿಯಲ್ಲಿ ತಿಳಿಸಲಾಗಿದೆ. ಸಾರ್ವಜನಿಕ ಸಾರಿಗೆಯನ್ನು ವಿಸ್ತರಿಸಿ ಅದು ಸುರಕ್ಷಿತವಾಗಿರುವಂತೆ ಮತ್ತು ಎಲ್ಲ ವರ್ಗದ ಜನರಿಗೂ ದೊರೆಯುವಂತೆ ಮಾಡುವುದು ಮತ್ತು ನಗರಗಳ ಎಲ್ಲ ಭಾಗಗಳಲ್ಲಿ ಉತ್ತಮ ಗುಣಮಟ್ಟದ ಮತ್ತು ಸುರಕ್ಷಿತ ರಸ್ತೆಗಳು, ಒಳಚರಂಡಿ, ಕುಡಿಯುವ ನೀರಿನ ಸೌಲಭ್ಯ ಮುಂತಾದುವುಗಳನ್ನು ಒದಗಿಸುವ ಮೂಲಕ ಎಲ್ಲ ದೇಶಗಳ ಎಲ್ಲ ನಗರಗಳಲ್ಲಿಯೂ ಒಟ್ಟಾರೆ ನಗರ ಗುಣಮಟ್ಟವನ್ನು ಹೆಚ್ಚಿಸಿ ಸುಸ್ಥಿರ ನಗರೀಕರಣದವನ್ನು ಸಾಧಿಸಬೇಕೆಂದು ಈ ಗುರಿಯು ಬಯಸುತ್ತದೆ.

ನಗರಗಳು ಬೆಳೆದಂತೆಲ್ಲ ಸುತ್ತಮುತ್ತಲಿನ ಸ್ಥಳವನ್ನೆಲ್ಲ ಆಕ್ರಮಿಸುವ ಭರಾಟೆಯಲ್ಲಿ ಆಗುವ ನಾಶವನ್ನು ಮನಗಂಡು, ವಿಶ್ವದ ಎಲ್ಲೆಡೆ ಸ್ಥಳೀಯ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯನ್ನು ರಕ್ಷಿಸುವ ಪ್ರಯತ್ನಗಳನ್ನು ಮಾಡಬೇಕೆಂದು ಈ ಗುರಿಯು ವಿಧಿಸುತ್ತದೆ. ನಗರಗಳಲ್ಲಿನ ಗಾಳಿಯ ಗುಣಮಟ್ಟ ಕಾಪಾಡುವುದು, ತ್ಯಾಜ್ಯ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಕೈಗೊಳ್ಳುವುದು, ಎಲ್ಲ ಸಾರ್ವಜನಿಕ ಪ್ರದೇಶಗಳಲ್ಲಿ ಸ್ವಚ್ಚತೆಯನ್ನು ಕಾಪಾಡುವುದು ಮತ್ತು ಈ ಪ್ರದೇಶಗಳಿಗೆ ಎಲ್ಲ ಜನರಿಗೆ ಮುಕ್ತ ಪ್ರವೇಶ ಸಾಧ್ಯವಾಗುವಂತೆ ಮಾಡುವುದು, ರಾಷ್ಟ್ರೀಯ ಮತ್ತು ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ಬಲಪಡಿಸುವ ಮೂಲಕ ನಗರಗಳು ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಸಕಾರಾತ್ಮಕ ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಸಂಪರ್ಕಗಳನ್ನು ಸಾಧ್ಯವಾಗಿಸುವುದು, ಎಲ್ಲ ನಗರಗಳೂ ಎಲ್ಲ ಬಗೆಯ ವಿಪತ್ತುಗಳನ್ನೂ ಎದುರಿಸಲು ಸಜ್ಜಾಗುವಂತೆ ಮಾಡುವುದು, ಮತ್ತು ಸ್ಥಳೀಯ ವಸ್ತುಗಳನ್ನು ಬಳಸಿಕೊಂಡು ಉತ್ತಮ ಗುಣಮಟ್ಟದ ಕಟ್ಟಡ ಮತ್ತಿತ್ತ್ಯಾದಿ ಮೂಲ ಸೌಕರ್ಯಗಳನ್ನು ನಿರ್ಮಿಸುವುದರ ಮೂಲಕ ಸುಸ್ಥಿರ ನಗರೀಕರಣವನ್ನು ಸಾಧ್ಯವಾಗಿಸುವುದು ಇವುಗಳಿಗೆಲ್ಲ ನಿರ್ದಿಷ್ಟ ಗುರಿಗಳನ್ನು ನಿಗದಿಪಡಿಸುವ ಎಸ್‌ಡಿಜಿ 11ರ ಮೂಲಕ ನಗರಗಳ ಸುಸ್ಥಿರ ಅಭಿವೃದ್ಧಿಯತ್ತ ಜಗತ್ತಿನ ಗಮನ ಸೆಳೆಯುವ ಪ್ರಯತ್ನಮಾಡಲಾಗಿದೆ.

**ಸಹಕಾರಿ ಸಂಸ್ಥೆಗಳ ಪಾತ್ರ:**

ನಾವೆಲ್ಲರೂ ಕಾಣುತ್ತಿರುವಂತೆ ನಗರೀಕರಣವು ಅತಿ ವೇಗದಲ್ಲಿ ನಡೆಯುತ್ತಿರುವ ಪ್ರಕ್ರಿಯೆಯಾಗಿದೆ. ನಗರಗಳಿಗೆ ಜನರು ವಲಸೆಬರುವುದು ಮತ್ತು ನಗರಗಳಲ್ಲಿ ವಸತಿ ಪಡೆಯುತ್ತಿರುವ ವೇಗಕ್ಕೆ ಹೋಲಿಸಿದಾಗ ಇತರೆ ಮೂಲಭೂತ ಸೌಕರ್ಯಗಳು ಬೆಳೆಯುವ ವೇಗ ಕಡಿಮೆಯಾಗಿದೆ. ಹೀಗಾಗಿ ನಗರಗಳಲ್ಲಿ ಕೊಳೆಗೇರಿಗಳು, ಜನನಿಬಿಡತೆ, ವಾಯು ಮತ್ತು ಶಬ್ದ ಮಾಲಿನ್ಯ, ನೀರು, ವಿದ್ಯುಚ್ಛಕ್ತಿ ಮುಂತಾದ ಅಗತ್ಯಗಳ ಅಸಮರ್ಪಕ ಲಭ್ಯತೆ ಮುಂತಾದ ಸಮಸ್ಯೆಗಳು ಹೆಚ್ಚಾಗುತ್ತಿವೆ. 2014ರಲ್ಲಿ ನಡೆದ ಜಾಗತಿಕ ಸಮೀಕ್ಷೆಯೊಂದರ ಪ್ರಕಾರ ಜಗತ್ತಿನಾದ್ಯಂತ ಸುಮಾರು 880 ದಶಲಕ್ಷ ಜನ ನಗರಗಳಲ್ಲಿ ಕೊಳೆಗೇರಿಗೆ ಸಮಾನ ಪರಿಸರದಲ್ಲಿ ಬದುಕುತ್ತಿದ್ದಾರೆ ಮತ್ತು ಪ್ರತಿ ಹತ್ತಿರಲ್ಲಿ ಒಂಭತ್ತು ಜನ ಜಾಗತಿಕ

ಆರೋಗ್ಯ ಸಂಸ್ಥೆ ಸೂಚಿಸಿರುವ ಗುಣಮಟ್ಟ ಪರಿಮಾಣಕ್ಕಿಂತ ಕಡಿಮೆ ಗುಣಮಟ್ಟದ ಗಾಳಿಯನ್ನು ಸೇವಿಸುತ್ತಿದ್ದಾರೆ. ನಗರಗಳ ಜನಸಂಖ್ಯೆಯ ಸುಮಾರು ಸರಾಸರಿ ಶೇಕಡ 30ರಷ್ಟು ಜನರಿಗೆ ಮೂಲಭೂತ ಸೌಕರ್ಯಗಳು ಸೂಕ್ತವಾಗಿ ದೊರೆಯುತ್ತಿಲ್ಲವೆಂದೂ ಅಧ್ಯಯನಗಳು ತಿಳಿಸಿವೆ.

ನಗರಗಳಲ್ಲಿನ ಮೂಲಭೂತ ಸೌಕರ್ಯಗಳ ಮುಖ್ಯ ಸಮಸ್ಯೆ ಎಂದರೆ ಅವುಗಳನ್ನು ಜನರಿಗೆ ತಲುಪಿಸುವ ವಿತರಕ ಸಂಸ್ಥೆಗಳ ವ್ಯವಸ್ಥಾಪನೆ. ಈ ಸಂಸ್ಥೆಗಳು ಬಹುತೇಕ ಸರಕಾರೀ ಸ್ವಾಮ್ಯದಲ್ಲಿ ಇಲ್ಲವೆ ಖಾಸಗಿ ಒಡೆತನದಲ್ಲಿರುವುದರಿಂದ, ವಿವಿಧ ಸೇವೆಗಳನ್ನು ಪಡೆಯುವ ಜನರ ಭಾಗವಹಿಸುವಿಕೆ ಇರುವುದಿಲ್ಲ. ಹೀಗಾಗಿಯೇ ವಿತರಕ ಸಂಸ್ಥೆಗಳಿಗೆ ಜನರ ಅಗತ್ಯಗಳು ಮತ್ತು ಸೇವೆ ಪಡೆಯುವ ಸಾಮರ್ಥ್ಯದ ಬಗ್ಗೆ ಪೂರ್ಣ ಅರಿವಿರುವುದಿಲ್ಲ. ಆದುರದರಿಂದ ಜನರು ನೇರವಾಗಿ ಭಾಗವಹಿಸುವ ಸಂಸ್ಥೆಗಳು ನಾಗರೀಕ ಸೇವೆಗಳನ್ನು ನೀಡುವುದು ಒಳ್ಳೆಯದು ಎಂಬುದು ಬಹುತೇಕ ತಜ್ಞರ ಅಭಿಪ್ರಾಯವಾಗಿದೆ. ಆದುರರಿಂದ ಸಹಜವಾಗಿಯೇ ಈ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ ಮುನ್ನೆಲೆಗೆ ಬರುತ್ತದೆ.

ವಿವಿಧ ರೀತಿಯಲ್ಲಿ ನಗರಗಳನ್ನು ಸುಸ್ಥಿರಗೊಳಿಸುವ ಕೆಲಸದಲ್ಲಿ ನಿರತವಾಗಿರುವ ಸಹಕಾರಿ ಸಂಘಗಳ ಹಲವಾರು ಉದಾಹರಣೆಗಳನ್ನು ಜಗತ್ತಿನಾದ್ಯಂತ ಕಾಣಬಹುದು. ಹೈಟಿ ದೇಶದ ರಾಜಧಾನಿಯಾದ ಪೋರ್ಟ್ ಔ ಪ್ರಿನ್ಸ್, 2010ರಲ್ಲಿನ ಭೀಕರ ಭೂಕಂಪದಿಂದಾಗಿ ದೊಡ್ಡ ಮಟ್ಟದಲ್ಲಿ ಮನೆಗಳು ಮತ್ತು ಇತರೆ ಕಟ್ಟಡಗಳನ್ನು ಕಳೆದುಕೊಂಡಿತು. ಸುಮಾರು ಹದಿನೈದು ಲಕ್ಷ ಜನ ಮನೆ ಮಠ ಕಳೆದುಕೊಂಡರು. ಈ ಸಂದರ್ಭದಲ್ಲಿ ಸುಮಾರು ನೂರು ಜನ ನಾಗರೀಕರು ಸೇರಿ 2011ರಲ್ಲಿ ದಕ್ಷಿಣ–ಪೂರ್ವ ಹೈಟಿ ವಸತಿ ಮತ್ತು ಸಣ್ಣ ವ್ಯವಹಾರ ಪತ್ತಿನ ಸಹಕಾರಿ ಸಂಘವನ್ನು ಸ್ಥಾಪಿಸಿದರು. ಈ ಸಹಕಾರಿ ಸಂಘದಿಂದಾಗಿ ಆ ಪ್ರದೇಶದ ಜನರಿಗೆ ಉತ್ತಮ ವಸತಿ ಸೌಕರ್ಯ ಕಲ್ಪಿಸುವುದು ಸಾಧ್ಯವಾಗಿ, ದೇಶದಲ್ಲಿ ಇಂತಹುದೇ ಹಲವು ಸಹಕಾರಿ ಮಾದರಿಗಳು ಹುಟ್ಟಿಕೊಳ್ಳುವಂತಾಯ್ತು. ಜೊತೆಗೆ ಎಲ್ಲರಿಗೆ ಉತ್ತಮ ಗುಣಮಟ್ಟದ, ಭೂಕಂಪ ನಿರೋಧಕ ಮನೆಗಳನ್ನು ನಿರ್ಮಿಸಿಕೊಳ್ಳುವುದೂ ಸಾಧ್ಯವಾಯಿತು. ಕೀನ್ಯಾ ದೇಶದಲ್ಲಿ ನಗರಗಳಲ್ಲಿರುವ ಬಡ ಸಮುದಾಯಗಳಿಗೆ ಉತ್ತಮ ವಸತಿ ಸೌಕರ್ಯ ಒದಗಿಸುವುದಕ್ಕಾಗಿಯೇ 1979ರಲ್ಲಿ ರಾಷ್ಟ್ರೀಯ ವಸತಿ ಸಹಕಾರಿ ಸಂಘವನ್ನು ಸ್ಥಾಪಿಸಲಾಯ್ತು. ಇದರಿಂದಾಗಿ ವಸತಿ ಇಲ್ಲದೆ ಕೊಳಗೇರಿಗಳಲ್ಲಿ ವಾಸಿಸುವಂತಾಗಿದ್ದ ಸಹಸ್ರಾರು ಬಡ ಮತ್ತು ಕಳೆವರ್ಗದ ಕುಟುಂಬಗಳಿಗೆ ಉತ್ತಮ ಮತ್ತು ಎಲ್ಲ ಮೂಲಭೂತ ಸೌಕರ್ಯಗಳುಳ್ಳ ಮನೆಗಳನ್ನು ಹೊಂದುವುದು ಸಾಧ್ಯವಾಯಿತು. ಈಚಿನ ವರ್ಷಗಳಲ್ಲಿ ಈ ಸಹಕಾರಿ ಸಂಘಟನೆಯು ಕೇವಲ ವಸತಿ ಸೌಕರ್ಯವಷ್ಟೇ ಅಲ್ಲದೆ, ಇತರೆ ಹಲವಾರು ಸಮುದಾಯ ಸೇವೆಗಳನ್ನು ಒದಗಿಸುತ್ತ, ನಗರ ಜೀವನವು ಸುಗಮವಾಗುವಂತೆ ಮಾಡಿದೆ. ಇಟಲಿಯಲ್ಲಿ ಸುಮಾರು 400 ಕ್ಕೂ ಹೆಚ್ಚು ಸಾಮಾಜಿಕ ಸಹಕಾರಿ ಸಂಘಗಳು (ಸೋಶಿಯಲ್ ಕೋಆಪರೇಟಿವ್ಸ್) ನಗರ ನೈರ್ಮಲ್ಯ ಚಟುವಟಿಕೆಗಳನ್ನು ನಡೆಸುತ್ತಿವೆ. ಸ್ಥಳೀಯ ನಗರ ಸಭೆ ಮತ್ತು ನಗರ ಪಂಚಾಯತುಗಳ ವ್ಯಾಪ್ತಿಯಲ್ಲಿ ತ್ಯಾಜ್ಯ ಸಂಗ್ರಹ, ವಿಲೇವಾರಿ ಮತ್ತು ಸಂಸ್ಕರಣೆಯನ್ನು ಈ ಸಹಕಾರಿ ಸಂಘಟನೆಗಳು ನಿರ್ವಹಿಸುತ್ತಿವೆ. ಸಹಕಾರಿ ಸಂಘಗಳು ಈ ಸೇವೆಗಳನ್ನು ಜನರ ಸಹಭಾಗಿತ್ವದಲ್ಲಿ ನೀಡುತ್ತಿರುವುದರಿಂದ ಜನರ ಅಗತ್ಯಗಳನುಸಾರ ಸೇವೆಗಳನ್ನು ಒದಗಿಸುವುದು ಸಾದ್ಯವಾಗಿದೆ. ಬ್ರೆಝಿಲ್ ನ ರೆಡೆಸೋಲ್ ಸಹಕಾರಿ ಸಂಘವೂ ಹೀಗೆಯೇ ಇಡೀ ನಗರದ ಕಸ ವಿಲೇವಾರಿಯ ವ್ಯವಸ್ಥಾಪನೆಯನ್ನು ಉತಮವಾಗಿ ನಡೆಸುತ್ತಿದೆ. ಹೀಗೆಯೇ ಅಮೆರಿಕದ ಪಿಟ್ಸ್‌ಫೀಲ್ಡ್ ನಗರದಲ್ಲಿರುವ ರೋಸ್ ಅಂಡ್ ಕೋಲ್ಸ್ ಸಹಕಾರಿ ಸಾರಿಗೆ ನಗರವಾಸಿಗಳಿಗೆ ಹಂಚಿಕೆ ಅಧಾರದಲ್ಲಿ ಪ್ರಯಾಣ ಸೌಕರ್ಯ ಒದಗಿಸುತ್ತಿದೆ.

ನಗರ ಪ್ರದೇಶಗಳಲ್ಲಿ ನಾಗರೀಕ ಸೇವೆಗಳನ್ನು ಒದಗಿಸುತ್ತಿರುವ ಸಹಕಾರಿ ಸಂಘಗಳನ್ನು ನಮ್ಮ ದೇಶದಲ್ಲಿಯೂ ನೋಡಬಹುದಾಗಿದೆ. ಉದಾಹರಣೆಗೆ ಮಹಾರಾಷ್ಟ್ರದ ಪುಣೆ ನಗರದಲ್ಲಿರುವ 'ಸ್ವಛ್' ಗೃಹ ತ್ಯಾಜ್ಯಗಳ ಸಂಸ್ಕರಣ ಮತ್ತು ವಿಲೇವಾರಿಯನ್ನು ನೋಡಿಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದುದಾಗಿದೆ. ಹೀಗೆಯೇ ದೆಹಲಿಯಲ್ಲಿರುವ ಮಹಿಳೆಯರ ಕಸ ವಿಲೇವಾರಿ ಸಹಕಾರಿ ಸಂಘವೂ ನಗರ ನೈರ್ಮಲ್ಯ ಚಟುವಟಿಕೆಯಲ್ಲಿ ನಿರತವಾಗಿದೆ. ದೆಹಲಿಯಲ್ಲಿ ನಿವೃತ್ತ ಸೈನಿಕರ ಸಹಕಾರಿಯು ಟ್ಯಾಕ್ಸಿ ಸೇವೆಯನ್ನು ಒದಗಿಸುತ್ತಿದ್ದರೆ, ಇತ್ತೀಚೆಗೆ ಕೇರಳದ ಕೊಚ್ಚಿ ನಗರದಲ್ಲಿ ನಗರ ಪ್ರಯಾಣವನ್ನು ನೋಡಿಕೊಳ್ಳಲು ಹಲವು ಖಾಸಗೀ ಬಸ್ ಮಾಲೀಕರು ಸೇರಿ ಕೊಚ್ಚಿ ಮೆಟ್ರೋ ನಗರ ಸಾರಿಗೆ ಸಹಕಾರಿ ಸಂಘವನ್ನು ಸ್ಥಾಪಿಸಿದ್ದಾರೆ. ಹೀಗಿದ್ದರೂ ನಮ್ಮ ದೇಶದಲ್ಲಿ ಇಂತಹ ಸಹಕಾರಿ ಸಂಘಗಳು ಸಂಖ್ಯೆ ಮತ್ತು ಸೇವೆಗಳ ವೈವಿಧ್ಯತೆಯ

ದೃಷ್ಟಿಯಿಂದ ಬಹು ಕಡಿಮೆ ಎನ್ನಬಹುದು. ನಗರಗಳಲ್ಲಿ ನಾಗರೀಕ ಸೇವೆಗಳನ್ನು ಜನರು ತಾವೇ ಸನಡೆಸುವ ಸಂಸ್ಥೆಗಳಿಂದ ಪಡೆಯುವಂತಾದರೆ ಉತ್ತಮ ಗುಣಮಟ್ಟದ ಸೇವೆಗಳು ಲಭ್ಯವಾಗಿ ನಗರವಾಸಿಗಳ ಜೀವನ ಹೆಚ್ಚು ಹಸನಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಸಹಕಾರಿ ಸಂಘಟನೆಗಳು ಈ ಕೆಳಗಿನ ಕೆಲವು ಸಾಧ್ಯತೆಗಳನ್ನು ಪರಿಶೀಲಿಸಬಹುದು.

1. ಸಹಕಾರ ಮಹಾಮಂಡಳಗಳು ಸರಕಾರಕ್ಕೆ ಪ್ರಸ್ತಾಪಗಳನ್ನು ಸಲ್ಲಿಸಿ ಮತ್ತು ಸರಕಾರದ ಸಂಬಂಧಿತ ಇಲಾಖೆಗಳೊಂದಿಗೆ ಚರ್ಚಿಸಿ ಸರಕಾರ ಮತ್ತು ಖಾಸಗೀ ವಲಯಗಳಮೂಲಕ ಯಶಸ್ವಿಯಾಗಿ ನಡೆಯದಿರುವ ನಗರ ಸೌಲಭ್ಯಗಳನ್ನು ಸಹಕಾರಿ ಸಂಘಟನೆಗಳಿಗೆ ವಹಿಸುವಂತೆ ಮನವೊಲಿಸಬಹುದು.

2. ನಗರ ನೈರ್ಮಲ್ಯದ ವಿವಿಧ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿರುವ ಕಾರ್ಮಿಕರು ಸಂಘಟಿತರಾಗಿ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ವಿವಿಧ ನೈರ್ಮಲ್ಯ ಚಟುವಟಿಕೆಗಳನ್ನು ನಡೆಸುವಂತೆ ಮಾಡಬಹುದು.

3. ಈಗಾಗಲೇ ನಗರ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವಿವಿಧೋದ್ದೇಶ ಮತ್ತು ಗ್ರಾಹಕ ಸಹಕಾರಿ ಸಂಘಗಳು, ನಾಗರೀಕ ಸೇವೆಗಳನ್ನು ಒದಗಿಸುವ ಮತ್ತು ನಿರ್ವಹಿಸುವ ಕೆಲಸಗಳಲ್ಲಿ ತೊಡಗಬಹುದು.

4. ಸಹಕಾರಿ ಸಂಘಗಳು ನಗರದ ಒಟ್ಟಾರೆ ನೈರ್ಮಲ್ಯ ಮತ್ತು ಜನಜೀವನವನ್ನು ಹಸನುಗೊಳಿಸುವ ಯಾವುದೇ ಯೋಜನೆಗಳಿಗೆ (ಉದಾಹರಣೆ ತ್ಯಾಜ್ಯದಿಂದ ಗೊಬ್ಬರ ತಯಾರಿಕೆ, ಮಳೆಕೊಯ್ಲು ವ್ಯವಸ್ಥೆ, ಸೌರ ವಿದ್ಯುತ್ ಘಟಕಗಳ ಸ್ಥಾಪನೆ, ನಗರ ಸಾರಿಗೆ ಒದಗಿಸುವುದು ಇತ್ಯಾದಿ) ಕಡಿಮೆ ಬಡ್ಡಿಯಲ್ಲಿ ಸಾಲ ನೀಡುವ ಯೋಜನೆಗಳನ್ನು ಆರಂಭಿಸಬಹುದು

5. ಗೃಹ ತ್ಯಾಜ್ಯದ ವರ್ಗೀಕರಣ, ವಿವಿಧ ವಸ್ತುಗಳ ಮರುಬಳಕೆ, ಬಳಸಿದ ವಸ್ತುಗಳ ನವೀಕರಣ, ವಾಹನಗಳನ್ನು ಹೊಂದಿದವರು ಶಬ್ದಮಾಲಿನ್ಯ ಮತ್ತು ಹೊಗೆ ಹೊರಸೂಸುವಿಕೆಗಳಂತಹ ವಿಷಯಗಳಬಗ್ಗೆ ಕಾಳಜಿ ವಹಿಸುವುದು ಮುಂತಾದುವುಗಳ ಕುರಿತಂತೆ ಸಹಕಾರಿ ಸಂಘಗಳು ಸದಸ್ಯರಲ್ಲಿ ಮತ್ತು ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬಹುದು

6. ನಾಗರೀಕ ಸೌಲಭ್ಯಗಳು ಎಲ್ಲ ನಗರವಾಸಿಗಳಿಗೂ ಲಭ್ಯವಾಗುವಂತೆ ನೋಡಿಕೊಳ್ಳುವ ಸಂಬಂಧ ಸಹಕಾರಿ ಸಂಘಗಳು ಸದಸ್ಯರಿಗೆ ತಾಂತ್ರಿಕ ಸಹಾಯ ಮತ್ತು ಅವರುಗಳು ಸಂಬಂಧಿತ ಇಲಾಖೆಯೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡುವುದು ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು

7. ಕಡಿಮೆ ಆದಾಯದ ಕುಟುಂಬಗಳು ಆರೋಗ್ಯಕರ ಮತ್ತು ಪರಿಸರ ಸ್ನೇಹಿ ಪರ್ಯಾಯ ಇಂಧನಗಳನ್ನು ಬಳಸುವುದು ಸಾಧ್ಯವಾಗುವಂತೆ ಅಂತಹ ಕುಟುಂಬಗಳಿಗೆ ಸೌರ ಘಟಕಗಳು ಮತ್ತು ಜೈವಿಕ ಇಂಧನದ ಯಂತ್ರಗಳನ್ನು ಕಂತುಗಳಲ್ಲಿ ಪಾವತಿಸುವ ಮಾದರಿಯಲ್ಲಿ ಒದಗಿಸಬಹುದು.

8. ತಮ್ಮ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಸಹಕಾರಿ ಸಂಘಗಳು ಸುಸ್ಥಿರ ನಗರ ಸೌಲಭ್ಯಗಳನ್ನು ಒದಗಿಸುವ ಕುರಿತಂತೆ ವಿಚಾರ ಸಂಕಿರಣಗಳನ್ನು ನಡೆಸುವುದು, ಸಹಕಾರಿ ಸದಸ್ಯರಿಗೆ ನಾಗರೀಕ ಸೌಲಭ್ಯಗಳ ಕುರಿತಂತೆ ಜಾಗೃತಿ ಮೂಡಿಸುವುದು, ನಗರ ನೈರ್ಮಲ್ಯವನ್ನು ಆಗಾಗ್ಗೆ ಪರಿಶೀಲಿಸುವುದು ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು

9. ನಗರ ಸಾರಿಗೆ, ಒಳಚರಂಡಿ ವ್ಯವಸ್ಥಾಪನೆ, ಕಸ ವಿಲೇವಾರಿ, ನೀರು ಸರಬರಾಜಿನ ನಿರ್ವಹಣೆ ಮುಂತಾದ ಚಟುವಟಿಕೆಗಳನ್ನು ಹಂತ ಹಂತವಾಗಿ ಸಹಕಾರಿ ಸಂಸ್ಥೆಗಳ ಮೂಲಕ ಮಾಡುವ ಪ್ರಯತ್ನ ಮಾಡಬಹುದು.

# ಎಸ್‌ಡಿಜಿ 12: ಜವಾಬ್ದಾರಿಯುತ ಬಳಸುವಿಕೆ ಮತ್ತು ಉತ್ಪಾದನೆ

ಸುಸ್ಥಿರ ಉತ್ಪಾದನೆ ಮತ್ತು ಬಳಸುವಿಕೆಯ ಮಾದರಿಗಳನ್ನು ಅನುಷ್ಠಾನಗೊಳಿಸುವುದು (ಇಟಿಣಾಡಿಜ, ಘಾಣಚಿಟಿಚಿಭಟಜ ಭಿಂಭಿಣಾಟರಿಣುಂಟಿ ಚಿಟಿಜ ರಿಡಿಂಜಣಭಿಣುಂಟಿ ಠಿಚಿಣಣಜಡಿಟಿ) ಸುಸ್ಥಿರ ಅಭಿವೃದ್ಧಿಯ ಪ್ರಾಥಮಿಕ ಅಗತ್ಯಗಳಲ್ಲೊಂದು. ಉತ್ಪಾದನೆ ಮತ್ತು ಬಳಕೆ ಈ ಎರಡೂ ಪ್ರಕ್ರಿಯೆಗಳು ಸುಸ್ಥಿರ ಮಾದರಿಗಳನ್ನು ಅನುಸರಿಸಬೇಕೆನ್ನುವುದು ಈ ಗುರಿಯ ಉದ್ದೇಶ. ಜಗತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಈಗಿರುವ ಉತ್ಪಾದನಾ ಕ್ರಮಗಳಲ್ಲಿ ಹಲವು ಮೂಲಭೂತ ಬದಲಾವಣೆಗಳನ್ನು ತರಬೇಕಾಗುತ್ತದೆ. ಕಚ್ಚಾವಸ್ತುಗಳ ಉಪಯೋಗ, ಉತ್ಪಾದನಾ ತಂತ್ರಜ್ಞಾನದ ಕ್ಷಮತೆ ಮುಂತಾದುವುಗಳು ಇನ್ನೂ ಉನ್ನತ ಮಟ್ಟಕ್ಕೇರಬೇಕಾದ ಅಗತ್ಯವಿದೆ. ಉತ್ಪಾದನೆ ಮತ್ತು ಬಳಕೆಗಳೆರಡೂ ಒಂದಕ್ಕೊಂದು ಪೂರಕವಾಗಿರುವುದರಿಂದ, ಬಳಕೆಯ ವಿಧಾನಗಳಲ್ಲೂ ಬದಲಾವಣೆಗಳಾಗಬೇಕಾಗುತ್ತದೆ. ಹೆಚ್ಚು ದುರ್ಬಳಕೆಗಳಾಗದಂತೆ, ತ್ಯಾಜ್ಯಗಳಿಂದ ಪರಿಸರಕ್ಕೆ ತೊಂದರೆಯಾಗದಂತೆ, ಸೀಮಿತ ಲಭ್ಯತೆಯ ಸಂಪನ್ಮೂಲಗಳನ್ನು ಆದಷ್ಟೂ ಕಡಿಮೆ ಬಳಸುವಂತೆ ಹೊಸ ವಿಧಾನಗಳನ್ನು ಉಪಯೋಗಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸುಸ್ಥಿರ ಉತ್ಪಾದನೆ ಮತ್ತು ಬಳಕೆ ಕುರಿತ ಕಾರ್ಯಕ್ರಮಗಳ ಹತ್ತು ವರ್ಷಗಳ ಚೌಕಟ್ಟನ್ನು ಸಿದ್ಧಪಡಿಸಿ ಎಲ್ಲ ದೇಶಗಳೂ ಕ್ರಮ ಕೈಗೊಳ್ಳಬೇಕೆಂದು ಈ ಗುರಿಯಲ್ಲಿ ತಿಳಿಸಲಾಗಿದೆ. 2030ರ ವೇಳೆಗೆ ನೈಸರ್ಗಿಕ ಸಂಪನ್ಮೂಲಗಳ ಸಮರ್ಥ ನಿರ್ವಹಣೆ ಮತ್ತು ಸುಸ್ಥಿರ ಬಳಕೆಯನ್ನು ಸಾಧಿಸುವುದು, ಮತ್ತು ಆಹಾರ ಉತ್ಪಾದನೆಯಲ್ಲಿ ಕೊಯ್ಲು ಪೂರ್ವ ಮತ್ತು ನಂತರದ ಪೂರೈಕೆ ಸರಪಳಿಯಲ್ಲಿ ಉಂಟಾಗುವ ನಷ್ಟವನ್ನು ಕಡಿಮೆಮಾಡಿ ಜಾಗತಿಕ ತಲಾ ಆಹಾರ ತ್ಯಾಜ್ಯದ ಪ್ರಮಾಣವನ್ನು ಈಗಿರುವ ಪ್ರಮಾಣದ ಅರ್ಧಕ್ಕಿಳಿಸುವುದು ಅತ್ಯಂತ ಅಗತ್ಯವೆಂದು ಈ ಗುರಿಯು ಅಪೇಕ್ಷಿಸುತ್ತದೆ.

2020ರ ವೇಳಗೆ ಸಾಧಿಸಬೇಕಾದ ಇನ್ನು ಕೆಲವು ಅಗತ್ಯಗಳನ್ನೂ ಈ ಗುರಿಯಲ್ಲಿ ನಿಗದಿಪಡಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ ಪರಿಸರಕ್ಕೆ ಹಾನಿತರುವ ರಾಸಾಯನಿಕಗಳು ಮತ್ತು ಎಲ್ಲ ಬಗೆಯ ತ್ಯಾಜ್ಯಗಳನ್ನು ಅಂತಾರಾಷ್ಟ್ರೀಯ ಮಾನದಂಡಗಳಿಗನುಸಾರವಾಗಿ ನಿರ್ವಹಿಸಿ ಗಾಳಿ, ನೀರು ಮತ್ತು ಮಣ್ಣಿಗೆ ಅವುಗಳ ಬಿಡುಗಡೆಯ ಪ್ರಮಾಣವನ್ನು ಅರ್ಧದಷ್ಟು ಕಡಿಮೆ ಮಾಡುವುದು ಮತ್ತು ತಡೆಗಟ್ಟುವಿಕೆ (ಪ್ರಿವೆಂಶನ್) ಕಡಿತ (ರಿಡಕ್ಷನ್) ಮತ್ತು ಮರುಬಳಕೆ (ರಿ ಯುಸ್) ಪ್ರಕ್ರಿಯೆಗಳನ್ನು ಬಳಸುವುದರ ಮೂಲಕ ಒಟ್ಟಾರೆ ಸಂಪನ್ಮೂಲ ಬಳಕೆಯನ್ನು ಮಿತಿಗೊಳಿಸುವುದು. ಈ ಎರಡೂ ಗುರಿಗಳು ಪರಿಸರ ರಕ್ಷಣೆ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಮಿಗತೆಯ ಮೂಲಕ ಸುಸ್ಥಿರ ಬೆಳವಣಿಗೆಗೆ ಸಹಾಕಾರಿಯಾಗುತ್ತದೆಂದು ಈ ಗುರಿಯು ಪರಿಭಾವಿಸುತ್ತದೆ.

ಸುಸ್ಥಿರ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಮತ್ತು ಈ ಮಾಹಿತಿಗಳನ್ನು ತಮ್ಮ ವರದಿ ಪ್ರಕ್ರಿಯೆಯಲ್ಲಿ ಸೇರ್ಪಡೆಗೊಳಿಸಲು ಎಲ್ಲ ವ್ಯವಹಾರ ಸಂಸ್ಥೆಗಳಿಗೆ ಅದರಲ್ಲೂ ವಿಶೇಷವಾಗಿ ದೊಡ್ಡ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು, ಸುಸ್ಥಿರ ಖರೀದಿ ಅಭ್ಯಾಸಗಳನ್ನು ಉತ್ತೇಜಿಸುವುದು, ಎಲ್ಲೆಡೆ ಜನರು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವಂತೆ ಸುಸ್ಥಿರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು, ಸುಸ್ಥಿರ ಉತ್ಪಾದನಾ ಪ್ರಕ್ರಿಯೆಯು

ಸಾಧ್ಯವಾಗುವಂತೆ ಮಾಡಲು ಅಗತ್ಯ ತಂತ್ರಜ್ಞಾನವನ್ನು ಹೊಂದಲು ಸಾಧ್ಯವಾಗುವಂತೆ ಅಭಿವೃದ್ಧಿಶೀಲ ದೇಶಗಳಿಗೆ ನೆರವು ನೀಡುವುದು, ಪ್ರವಾಸೋದ್ಯಮದಂಥ ಉದ್ದಿಮೆಗಳು ಸ್ಥಳೀಯ ಸಂಸ್ಕೃತಿಯನ್ನು ಗೌರವಿಸುವಂತೆ ಮತ್ತು ಸ್ಥಳೀಯ ಉತ್ಪನ್ನಗಳನ್ನು ಬಳಸುವಂತೆ ನೋಡಿಕೊಳ್ಳುವುದು, ಹಾಗೂ ಸುಸ್ಥಿರ ಉತ್ಪಾದನೆ ಮತ್ತು ಬಳಕೆಯನ್ನು ಸಾಧ್ಯವಾಗಿಸಲು ಅಗತ್ಯವಾದ ನೀತಿಗಳು, ಕಾನೂನುಗಳು, ತೆರಿಗೆ ವ್ಯವಸ್ಥೆ ಮುಂತಾದುವುಗಳನ್ನು ಚಾಲ್ತಿಗೆ ತರುವ ಅಗತ್ಯವನ್ನು ಕೂಡ ಈ ಗುರಿಯಲ್ಲಿ ಒತ್ತಿ ಹೇಳಲಾಗಿದೆ.

ಹಾಲಿ ಚಾಲ್ತಿಯಲ್ಲಿರುವ ಉತ್ಪಾದನಾ ಮಾದರಿಗಳು ಮತ್ತು ಬಳಕೆಯ ಕ್ರಮಗಳಿಂದಾಗಿ ಆಹಾರ ಮತ್ತು ಕಚ್ಚಾವಸ್ತುಗಳೆರಡೂ ಅಪವ್ಯಯವಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಜಗತ್ತಿನಾದ್ಯಂತ ಒಟ್ಟು ಉಪಯೋಗದಲ್ಲಿರುವ ಆಹಾರ ಪದಾರ್ಥಗಳಲ್ಲಿ ಮೂರನೇ ಒಂದಂಶ ಈ ರೀತಿಯಲ್ಲಿ ಹಾಳಾಗುತ್ತಿದೆ ಎಂದು ಆಹಾರ ಮತ್ತು ಕೃಷಿ ಸಂಸ್ಥೆಯ ಅಧ್ಯಯನದಲ್ಲಿ ಅಂದಾಜಿಸಲಾಗಿದೆ. ಈ ರೀತಿ ಹಾಳಾಗುತ್ತಿರುವ ಆಹಾರದ ವಾರ್ಷಿಕ ಮೌಲ್ಯ ಸುಮಾರು ಒಂದು ಶತಕೋಟಿ ಡಾಲರ್‌ಗಳಷ್ಟಿದ್ದು, ಇದು ಜಗತ್ತಿನ 20 ಕೋಟಿ ಜನರಿಗೆ ವರ್ಷ ಪೂರ್ತಿ ಆಹಾರ ನೀಡಲು ಸಾಕಾಗುವಷ್ಟಾಗುತ್ತದೆ. ಜಗತ್ತಿನಾದ್ಯಂತ ಇಂಗಾಲಾಮ್ಲವನ್ನು ಹೆಚ್ಚಿಸುತ್ತಿರುವ ಮೂಲಗಳಲ್ಲಿ ಆಹಾರ ತ್ಯಾಜ್ಯವು ಮೂರನೆ ಸ್ಥಾನದಲ್ಲಿದೆ. ಇದು ನಮ್ಮ ಬಳಕೆ ವಿಧಾನವು ಸುಸ್ಥಿರವಾಗಿಲ್ಲವೆನ್ನುವುದನ್ನು ತೋರಿಸುತ್ತದೆ. 2012ರಲ್ಲಿ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆಯು (ಒಇಸಿಡಿ) ನಡೆಸಿದ ಅಧ್ಯಯನದ ಪ್ರಕಾರ ಜಗತ್ತಿನಲ್ಲಿ ಪ್ರತಿ ವರ್ಷ ಖನಿಜಗಳು, ಮರಮಟ್ಟುಗಳು, ಪೆಟ್ರೋಲಿಯಂ ಸಂಬಂಧಿತ ಪದಾರ್ಥಗಳು ಮತ್ತು ಜೈವಿಕ ಇಂಧನವನ್ನು ಸೇರಿ ಸುಮಾರು 620 ಕೋಟಿ ಟನ್‌ಗಳಷ್ಟು ಪ್ರಾಕೃತಿಕ ಸಂಪನ್ಮೂಲವನ್ನು ಹೊರತೆಗಯಲಾಗುತ್ತಿದೆ. ಇದು ಸರಾಸರಿ ಲೆಕ್ಕದಲ್ಲಿ ಜಗತ್ತಿನ ಪ್ರತಿ ವ್ಯಕ್ತಿಗೆ ಸುಮಾರು ಹತ್ತು ಟನ್‌ಗಳಷ್ಟಾಗುತ್ತದೆ. ವಿಪರ್ಯಾಸವೆಂದರೆ ಈ ಸಂಪನ್ಮೂಲದಲ್ಲಿ ಸುಮಾರು ಶೇಕಡ 20ರಷ್ಟು ಅಪವ್ಯಯವಾಗುತ್ತದೆ ಅಥವ ತ್ಯಾಜ್ಯವಾಗುತ್ತದೆ. ಇದೇ ವೇಗದಲ್ಲಿ ನೈಸರ್ಗಿಕ ಸಂಪನ್ಮೂಲದ ಬಳಕೆ ನಡೆದರೆ ಮುಂದಿನ 50 ವರ್ಷಗಳಲ್ಲಿ ಈಗ ನಮಗೆ ತಿಳಿದಿರುವ ಪ್ರಾಕೃತಿಕ ಸಂಪನ್ಮೂಲಗಳ ಶೇಕಡ 70 ಭಾಗ ಖಾಲಿಯಾಗುತ್ತದೆ. ಆದರೆ ಒಂದೆಡೆ ತಂತ್ರಜ್ಞಾನವು ದಿನೇ ದಿನೇ ಅಭಿವೃದ್ಧಿ ಹೊಂದಿ ಸಂಪನ್ಮೂಲಗಳ ಉತ್ತಮ ಉಪಯೋಗ ಸಾಧ್ಯವಾಗುತ್ತಿದ್ದರೂ, ಇವುಗಳನ್ನು ಹೊರತೆಗೆಯುವ ಪ್ರಮಾಣವೂ ಏರಿಕೆಯಾಗುತ್ತಿದೆ. ಅಂತೆಯೇ ಉತ್ಪಾದನೆಗಾಗಿ ಸಂಪನ್ಮೂಲಗಳ ವಿನಿಯೋಗದ ಮಾದರಿಗಳು ಮತ್ತು ಉತ್ಪಾದಿತ ವಸ್ತುಗಳ ಬಳಕೆಯ ರೀತಿಗಳೆರಡರಲ್ಲೂ ಸುಧಾರಣೆಯಾಗಬೇಕಾಗಿದೆ.

ಒಟ್ಟಾರೆಯಾಗಿ ಎಸ್‌ಡಿಜಿ 12 ಉತ್ಪಾದನಾ ತಂತ್ತಜ್ಞಾನ ಮತ್ತು ಜನರ ಜೀವನ ಶೈಲಿಗಳ ಮೇಲೆ ಒತ್ತು ನೀಡಿ ಪರಿಸರ ರಕ್ಷಣೆ ಮತ್ತು ಸಂಪನ್ಮೂಲಗಳ ಮಿಗತೆಯ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬಹುದೆಂದು ಸೂಚಿಸುತ್ತದೆ.

**ಸಹಕಾರಿ ಸಂಸ್ಥೆಗಳ ಪಾತ್ರ:**

ಸಹಕಾರಿ ಮಾದರಿಯೆಂದರೆ ಒಂದು ಪರ್ಯಾಯ ಮಾದರಿ, ಸುಸ್ಥಿರ ಮಾದರಿ. ಆರ್ಥಿಕ ಹಿಂಜರಿತದ ಸಮಯದಲ್ಲೆಲ್ಲ ಸಹಕಾರಿ ಸಂಸ್ಥೆಗಳು ಇದನ್ನು ಶೃತಪಡಿಸಿವೆ. ಸಮುದಾಯದ ಸಮಸ್ಯೆಗಳು ಮತ್ತು ಅಗತ್ಯಗಳ ಆಧಾರದಲ್ಲಿ ವ್ಯವಹಾರ ಚಟುವಟಿಕೆಗಳನ್ನು ಸಂಘಟಿಸುವುದೇ ಸಹಕಾರಿ ಸಂಸ್ಥೆಗಳ ಕಾರ್ಯತಂತ್ರ. ಆದುದರಿಂದ ಸಹಕಾರಿ ಸಂಘಟನೆಗಳು ಸಹಜವಾಗಿಯೇ ಪರಿಸರ ಕಾಳಜಿ, ಸಂಪನ್ಮೂಲಗಳ ಮಿತ ಉಪಯೋಗ, ಉತ್ತಮ ಬಳಕೆ ಮಾದರಿಗಳನ್ನು ಸದಸ್ಯರಿಗೆ

ಪರಿಚಯಿಸುವುದು ಮುಂತಾದುವುಗಳನ್ನು ಅಳವಡಿಸಿಕೊಂಡಿರುತ್ತವೆ. ಇಂತಹ ಹಲವಾರು ಉದಾಹರಣೆಗಳು ವಿವಿಧ ದೇಶಗಳಲ್ಲಿ ಲಭ್ಯವಿವೆ. ಇಟಲಿ ದೇಶದ ಅತಿದೊಡ್ಡ ಗ್ರಾಹಕ ಸಹಕಾರಿ ಸಂಘವಾದ 'ಕೋಆಪ್ ಇಟಲಿ' ಉತ್ಪಾದನೆ ಮತ್ತು ಬಳಕೆಗೆ ಸಂಭಂಧಿಸಿದಂತೆ ಹಲವು ಆವಿಶ್ಕಾರಗಳನ್ನು ಮಾಡಿದೆ. ತನ್ನದೇ ಹೆಸರಿನ ಸಾವಯವ ಪದಾರ್ಥಗಳನ್ನು ದೊಡ್ಡಮಟ್ಟದಲ್ಲಿ ತನ್ನ ಸದಸ್ಯ ಗ್ರಾಹಕರಿಗೆ ಒದಗಿಸುತ್ತಿರುವ ಈ ಸಹಕಾರಿ ಸಂಘವು, ಯಾವುದೇ ರಾಸಾಯನಿಕಗಳನ್ನು ಬಳಸದೆ ಹಣ್ಣುಗಳನ್ನು ಬೆಳಸಿ, ಪರಿಸರಕ್ಕೆ ಹಾನಿಯಾಗದಂತೆ ಮತ್ತು ಆರೋಗ್ಯಕರ ಪದಾರ್ಥಗಳು ಸದಸ್ಯರಿಗೆ ದೊರೆಯುವಂತೆ ಮಾಡಿದೆ. ಮೂರು 'ಆರ್' ನೀತಿಯಾದ ಕಡಿಮೆ ಉಪಯೋಗಿಸುವುದು (ರೆಡ್ಯೂಸ್), ಪುನರ್ ಬಳಸುವುದು (ರಿ ಯೂಸ್) ಮತ್ತು ಮರು ಸಂಸ್ಕರಿಸುವುದು (ರಿ ಸೈಕಲ್) ಇವುಗಳ ಮೂಲಕ ಸುಸ್ಥಿರ ಅಭಿವೃಧ್ಧಿಯ ಈ ಪ್ರಮುಖ ಗುರಿಯ ಸಾಧನೆಗೆ ತನ್ನ ಕಾಣಿಕೆ ನೀಡುತ್ತಿದೆ. ಜಪಾನಿನಲ್ಲಿ ಮಹಿಳೆಯರೇ ಮುಖ್ಯವಾಗಿ ನಡೆಸುವ ಸೈಕತ್ಸು ಕ್ಲಬ್ ಸಹಕಾರಿ ಸಂಘಗಳು ಆರೋಗ್ಯ, ಪರಿಸರ ಮತ್ತು ಮಿಗತೆ ಎಂಬ ಸೂತ್ರಗಳನ್ನು ಪಾಲಿಸುತ್ತ ತನ್ನ ಸದಸ್ಯರು ಸುಸ್ಥಿರ ಅಭಿವೃದ್ಧಿಯ ಸೂತ್ರಗಳನ್ನು ಪಾಲಿಸುವಂತೆ ನೋಡಿಕೊಳ್ಳುತ್ತಿವೆ. ದಕ್ಷಣ ಆಫ್ರಿಕದಲ್ಲಿ ತರಕಾರಿಗಳು ಸರಿಯಾದ ರಕ್ಷಣೆ ಇಲ್ಲದೆ ದೊಡ್ಡ ಪ್ರಮಾಣದಲ್ಲಿ ಹಾಳಾಗುತ್ತಿದ್ದನ್ನು ಗಮನಿಸಿದ ಮಹಿಳಾ ಸಹಕಾರಿ ಸಂಘವಾದ ಐಎಂಎಐ ಸಾಗುವಳಿ ಸಹಕಾರಿ ಸಂಘವು ತರಕಾರಿಗಳಿಂದ ಉಪ್ಪಿನಕಾಯಿ ಮಾಡುವ ಘಟಕವನ್ನು ಆರಂಭಿಸುವುದರ ಮೂಲಕ ತರಕಾರಿಗಳು ಹಾಳಾಗುವುದರಿಂದ ತಡೆಯುವುದರ ಜೊತೆಗೆ ತನ್ನ ಸದಸ್ಯರಿಗೆ ಆದಾಯದ ಹೊಸ ಮೂಲವೂ ದೊರೆಯುವಂತೆ ಮಾಡಿದೆ. ಬ್ರಿಟನ್‌ನ ಮೂರನೇ ಅತಿದೊಡ್ಡ ಪ್ರವಾಸೋದ್ಯಮ ಸಂಸ್ಥೆಯಾದ ಮಿಡ್ ಕೌಂಟೀಸ್ ಸಹಕಾರಿ ಸಂಘವು ಸುಸ್ಥಿರ ಪ್ರವಾಸಯೋಜನೆಗಳನ್ನು ಸಂಘಟಿಸುತ್ತದೆ. ಪ್ರವಾಸಿಗರು ವಿವಿಧ ಪ್ರದೇಶಗಳನ್ನು ಸಂದರ್ಶಿಸುವುದರಿಂದಾಗುವ ಇಂಗಾಲಾಮ್ಲ ಹೊರಸೂಸುವಿಕೆ, ತ್ಯಾಜ್ಯ ಹರಡುವಿಕೆ, ನೀರಿನ ಅತಿಯಾದ ಬಳಕೆ ಇವುಗಳನ್ನು ತಡೆಯುವಂತೆ ಮತ್ತು ಸ್ಥಳೀಯ ಸಂಸ್ಕೃತಿಗೆ ಪೂರಕವಾಗಿರುವಂತೆ ಪ್ರವಾಸ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಈ ಸಹಕಾರಿ ಸಂಘವು ಸುಸ್ಥಿರ ಪ್ರವಾಸೋದ್ಯಮಕ್ಕೆ ಮಾದರಿಯಾಗಿದೆ. 'ಟೋಗೋ'ದಲ್ಲಿ ಯುವ ಕೃಷಿಕರೇ ಸೇರಿ ಆರಂಭಿಸಿರುವ 'ಕೋಆಪರೇಟಿವ್ ಆಫ್ ಯಂಗ್ ಪ್ರೊಫೆಶನಲ್ ಪ್ರೊಡ್ಯೂಸರ್ಸ್ ಆಫ್ ಆರ್ಗಾನಿಕ್ ಪೈನಾಪಲ್ (ಅಎಕಕಂಃ)' ಪರಿಸರಕ್ಕೆ ಹಾನಿಯಾಗದಂತೆ ಮತ್ತು ಸಾವಯವ ವಿಧಾನಗಳ ಮೂಲಕ ಅನಾನಸ್ ಹಣ್ಣುಗಳನ್ನು ಬೆಳೆಯುತ್ತ ಅದನ್ನು ದೊಡ್ಡ ಪ್ರಮಾಣದಲ್ಲಿ ಇಟಲಿ ದೇಶಕ್ಕೆ ರಫ್ತು ಮಾಡುತ್ತಿದೆ.

ಭಾರತದಲ್ಲಿಯೂ ಸಹಕಾರಿ ಸಂಘಗಳು ಪರಿಸರ ಕಾಳಜಿ ಮತ್ತು ಉತ್ಪಾದನೆ ಹಾಗೂ ಬಳಕೆಯಲ್ಲಿ ಹೊಸ ಮಾದರಿಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಉದಾಹರಣೆಗಳಿವೆ. ಕಾರ್ಬನ್ ಹೊರಸೂಸುವಿಕೆ ತಡೆಗಟ್ಟಲು ಅನುಕೂಲವಾಗುವ ಡಿಜಿಟಲೀಕರಣದ ಕಡೆ ಬಹುತೇಕ ಸಹಕಾರಿ ಸಂಘಗಳು ಒಲವು ತೋರುತ್ತಿವೆ. ಹೈದರಾಬಾದಿನಲ್ಲಿ ಮುಖ್ಯ ಕಛೇರಿಯನ್ನು ಹೊಂದಿರುವ ಚೇತನಾ ಆರ್ಗಾನಿಕ್ 978 ಕೃಷಿಕ ಸ್ವಸಹಾಯ ಸಂಘಗಳನ್ನು ಹೊಂದಿದ್ದು ಇವುಗಳನ್ನು ಜಿಲ್ಲಾ ಮಟ್ಟದಲ್ಲಿ 13 ಸಹಕಾರಿ ಸಂಘಗಳಾಗಿ ಸಂಘಟಿಸಿ ಸಾವಯವ ಮತ್ತು ಸುಸ್ಥಿರ ವಿಧಾನದಲ್ಲಿ ಹತ್ತಿಯನ್ನು ಬೆಳೆಯುತ್ತಿರುವುದಲ್ಲದೆ, ಪರಿಸರ ಸ್ನೇಹಿ ಮಾದರಿಯ ಮೂಲಕ ಬಟ್ಟೆ ಉತ್ಪಾದನೆಯನ್ನೂ ಉತ್ತೇಜಿಸುತ್ತಿದೆ. ಕರ್ನಾಟಕದ ಮಂಡ್ಯದಲ್ಲಿರುವ ಮಂಡ್ಯ ಸಾವಯವ ಕೃಷಿಕರ ಸಹಕಾರಿ ಸಂಘವು ಇತ್ತೀಚಿನ ಇನ್ನೊಂದು ಉದಾಹರಣೆಯಾಗಿದ್ದು ಈ ಸಂಸ್ಥೆಯು ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುತ್ತಾ ಪರಿಸರ ಪ್ರಜ್ಞೆಯ ಉತ್ತಮ ಸಹಕಾರಿ ಮಾದರಿಯಾಗಿದೆ. ಹೀಗೆಯೇ ಕೃಷಿ

ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಸಾಯನಿಕಗಳನ್ನು ಬಳಸದಿರುವ ಮತ್ತು ಸಾವಯವ ಗೊಬ್ಬರ ಹಾಗೂ ಕೃಷಿ ಪದ್ಧತಿಯನ್ನು ಉತ್ತೇಜಿಸುತ್ತಿರುವ ಹಲವು ಸಹಕಾರಿ ಸಂಘಗಳನ್ನು ನಮ್ಮ ದೇಶದಲ್ಲಿ ಕಾಣಬಹುದು.

ಸುಸ್ಥಿರ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸಹಕಾರಿ ಸಂಘಟನೆಗಳು ಈ ಕೆಳಗೆ ಸೂಚಿಸಿದಂತೆ ಹಲವು ಉಪಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ

1. ಕೃಷಿಸಹಕಾರಿ ಸಂಘಗಳು ತಮ್ಮ ಸದಸ್ಯರು ನಡೆಸುವ ಕೃಷಿಚಟುವಟಿಕೆಳಲ್ಲಿ ರಾಸಾಯನಿಕಗಳ ಬಳಕೆಯನ್ನು ಕಡಿಮೆಮಾಡಲು ಮತ್ತು ಸ್ಥಳೀಯ ಹಾಗೂ ಸಾವಯವ ಪದಾರ್ಥಗಳ ಬಳಕೆಯನ್ನು ವೃಧ್ಧಿಸಲು ಅಗತ್ಯ ಮಾಹಿತಿ ನೀಡುವುದು, ತರಬೇತಿ ನೀಡುವುದು, ಮುಂತಾದ ಚಟುವಟಿಕೆಗಳನ್ನು ನಡೆಸಬಹುದು.

2. ತಾವು ಮಾರಾಟಮಾಡುವ ಗೊಬ್ಬರ, ಬೀಜಗಳು ಮತ್ತಿತರ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಈ ವಿಷಯಗಳನ್ನು ಪರಿಗಣಿಸುವುದು ಮತ್ತು ಸಾಧ್ಯವಾದಷ್ಟು ಸಾಯವಯ ಮೂಲದ ಸಾಮಗ್ರಿಗಳನ್ನೆ ಮಾರಾಟ ಮಾಡಲು ಪ್ರಯತ್ನ ಮಾಡಬಹುದು.

3. ಪತ್ತಿನ ಸಹಕಾರಿ ಸಂಘಗಳು ಸುಸ್ಥಿರ ಉತ್ಪಾದನೆ ಮತ್ತು ಬಳಕೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಉತ್ತೇಜಿಸಲು ಅಂತಹ ಚಟುವಟಿಕೆಗಳಿಗೆ ಕಡಿಮೆ ಬಡ್ಡಿಯ ಸಾಲ ಯೋಜನೆಗಳನ್ನು ರೂಪಿಸಬಹುದು.

4. ನೀರಿನ ಸುಸ್ಥಿರ ಬಳಕೆ ಮತ್ತು ನಿರ್ವಹಣೆಗಾಗಿ ನೀರು ನಿರ್ವಹಣಾ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಸಂಯುಕ್ತ ಸಹಕಾರಿಯು ಕಾರ್ಯಯೋಜನೆಗಳು ಮತ್ತು ಉತ್ತೇಜನಾ ಚಟುವಟಿಕೆಗಳನ್ನು ನಡೆಸಬಹುದು

5. ಉತ್ಪಾದನಾ ಸಹಕಾರಿ ಸಂಘಟನೆಗಳು ತಮ್ಮ ಉತ್ಪಾದನಾ ಪ್ರಿಕ್ರಿಯೆಯಲ್ಲಿ ನೀರು, ವಿದ್ಯುಚ್ಛಕ್ತಿ ಮುಂತಾದುವುಗಳ ಮಿತವಾದ ಬಳಕೆ, ಕಚ್ಚಾ ಸಾಮಗ್ರಿಗಳು ಮತ್ತಿತರ ಪರಿಕರಗಳಲ್ಲಿ ತ್ಯಾಜ್ಯಗಳನ್ನು ಕಡಿಮೆಮಾಡುವುದು, ಬಳಸಿದ ಮತ್ತು ಮಲಿನ ನೀರು ಮತ್ತು ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ವೈಜ್ಞಾನಿಕ ಮಾರ್ಗಗಳನ್ನು ಬಳಸುವುದು ಮುಂತಾದುವುಗಳಿಗೆ ಆದ್ಯತೆ ನೀಡಬೇಕು

6. ತ್ಯಾಜ್ಯಗಳ ಮರುಬಳಕೆ, ಸಂಸ್ಕರಣ ಮತ್ತು ತ್ಯಾಜ್ಯಗಳಿಂದ ಇಂಧನ ಉತ್ಪಾದನೆ ಮುಂತಾದ ಚಟುವಟಿಕೆಗಳನ್ನು ಸಹಕಾರಿ ಸಂಘಟನೆಗಳು ಕೈಗೆತ್ತಿಕೊಳ್ಳಬಹುದು ಮತ್ತು ಅಂತಹ ಚಟುವಟಿಕೆಗಳಿಗೆ ಉತ್ತೇಜನ ನೀಡಬಹುದು.

7. ಸಹಕಾರಿ ಸಂಸ್ಥೆಗಳು ತಾವು ಬಳಸುವ ವಿವಿಧ ಕಛೇರಿ ಸಮಾಮಗ್ರಿ, ವಾಹನಗಳು, ವಿದ್ಯುಚ್ಛಕ್ತಿ ಮುಂತಾದುವುಗಳಲ್ಲಿ ಮಿಗತೆ ಸಾಧಿಸಲು, ಪರಿಸರ ಸ್ನೇಹೀ ಮೂಲಗಳ ಸಾಮಗ್ರಿಗಳನ್ನು ಬಳಸಲು ಮತ್ತು ಬಳಸಿದ ವಸ್ತುಗಳನ್ನು ಪುನರ್‌ಬಳಕೆಮಾಡುವುದು ಮುಂತಾದುವುಗಳನ್ನು ಆರಂಭಿಸಬಹುದು.

ಮೇಲಿನ ಸಲಹೆಗಳು ಕೇವಲ ದಿಕ್ಸೂಚಿ ಮಾತ್ರ. ಸಹಕಾರಿ ಸಂಘಗಳು ತಾವು ನಡೆಸುತ್ತಿರುವ ಮುಖ್ಯ ವ್ಯವಹಾರ, ತಮ್ಮ ಭೌಗೋಳಿಕ ಮತ್ತು ಸಾಮಾಜಿಕ ಪರಿಸರ ಇವುಗಳ ಆಧಾರದಲ್ಲಿ ವಿವಿಧ ಚಟುವಟಿಕೆಗಳನ್ನು ಗ್ರಹಿಸಿ, ಯೋಜಿಸಿ ಚಾಲ್ತಿಗೆ ತರುವುದರ ಮೂಲಕ ಸುಸ್ಥಿರ ಉತ್ಪಾದನೆ ಮತ್ತು ಬಳಕೆಯ ಬಗೆಗಿನ ಗುರಿಗಳಿಗೆ ತಮ್ಮದೇ ರೀತಿಯಿಂದ ದೇಣಿಗೆ ನೀಡಬಹುದಾಗಿದೆ.

# ಎಸ್‌ಡಿಜಿ 13: ಹವಾಮಾನ ಬದಲಾವಣೆಗೆ ಕಾರ್ಯತಂತ್ರ

ಹವಾಮಾನ ಬದಲಾವಣೆಗಳು ಮತ್ತು ಅದರ ಪರಿಣಾಮಗಳನ್ನು ಎದುರಿಸಲು ತ್ವರಿತ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸುವುದು (Take urgent action to combat climate change and its impacts) ಇಂದಿನ ಪ್ರಮುಖ ಅಗತ್ಯಗಳಲ್ಲೊಂದು. ಹವಾಮಾನದಲ್ಲಿನ ಬದಲಾವಣೆಗಳು (climate change) ಇಂದು ಜಗತ್ತಿನಾದ್ಯಂತ ವಿವಿಧ ಪ್ರಾಕೃತಿಕ ವೈಪರೀತ್ಯಗಳಿಗೆ ಕಾರಣವಾಗಿರುವುದು ಮತ್ತು ಆ ಕಾರಣಕ್ಕಾಗಿಯೇ ಎಲ್ಲೆಡೆ ಈ ವಿದ್ಯಮಾನದ ಬಗ್ಗೆ ಚರ್ಚೆ ನಡೆಯುತ್ತಿರುವುದು ಎಲ್ಲರೂ ತಿಳಿದ ವಿಷಯವಾಗಿದೆ. ಹವಾಮಾನದಲ್ಲಿನ ಬದಲಾವಣೆಗಳು, ವಿಶೇಷವಾಗಿ ಜಾಗತಿಕ ತಾಪಮಾನದ ಏರಿಕೆಯಂಥ ಪರಿಸ್ಥಿತಿಯನ್ನು ಎದುರಿಸಲು ಕ್ರಮಕೈಗೊಳ್ಳಬೇಕಾಗಿರುವುದು ಪ್ರಸಕ್ತ ಕಾಲಘಟ್ಟದ ಅಗತ್ಯ ಮತ್ತು ಸವಾಲು ಎನ್ನಬಹುದು. ಈ ಕಾರಣಕ್ಕಾಗಿಯೇ ಹವಾಮಾನದ ಬದಲಾವಣೆಯನ್ನು ಎದುರಿಸುವ ನಿಟ್ಟಿನಲ್ಲಿ ಸಹಕಾರಿ ಸಂಘಟನೆಗಳ ಪಾತ್ರವನ್ನು 2020ರ ಅಂತಾರಾಷ್ಟ್ರೀಯ ಸಹಕಾರಿ ದಿನದ ಪ್ರಮುಖ ವಿಷಯವನ್ನಾಗಿ ಆಚರಿಸಲಾಗಿದೆ.

ಸಂಯುಕ್ತರಾಷ್ಟ್ರ ಸಂಘಟನೆಯ ವಾತಾವರಣ ಬದಲಾವಣೆಯಬಗೆಗಿನ ನೀತಿಗಳ (Framework Convention on Climate Change – UNFCCC) ಅನುಸಾರ "ಕಾಲದಿಂದ ಕಾಲಕ್ಕೆ ಸಹಜವಾಗಿಯೇ ಘಟಿಸುವ ಬದಲಾವಣೆಗಳಿಗೆ ಹೊರತಾಗಿ ಮತ್ತು ಭಿನ್ನವಾಗಿ ಮನುಷ್ಯನು ಪ್ರತ್ಯಕ್ಷ ಅಥವ ಪರೋಕ್ಷವಾಗಿ ನಡೆಸುವ ಯಾವುದೇ ಚಟುವಟಿಕೆಯ ಕಾರಣದಿಂದಾಗಿ ಜಾಗತಿಕ ಪ್ರಾಕೃತಿಕ ವಾತಾವರಣದಲ್ಲಿ ಆಗುವ ಬದಲಾವಣೆಯನ್ನು ಹವಾಮಾನ ಬದಲಾವಣೆ" ಎಂದು ಗುರುತಿಸಲಾಗಿದೆ. ಸರಾಸರಿ ತಾಪಮಾನದಲ್ಲಿ ಏರಿಕೆ, ಸಮುದ್ರ ಮಟ್ಟದಲ್ಲಿ ಏರಿಕೆ, ಋತುಚಕ್ರದಲ್ಲಿ ಏರುಪೇರಾಗುವುದು, ಅನಿರೀಕ್ಷಿತ ಹವಾಮಾನ ವೈಪರೀತ್ಯಗಳು, ಸಸ್ಯ ಮತ್ತು ವನ್ಯಜೀವಿಗಳ ಸಂಖ್ಯೆ ಮತ್ತು ವೈವಿಧ್ಯತೆಯಲ್ಲಿ ಬದಲಾವಣೆಗಳಾಗುವುದು, ಮುಂತಾದುವುಗಳನ್ನು ಹವಾಮಾನ ಬದಲಾವಣೆಯ ಪ್ರಮುಖ ಪರಿಣಾಮಗಳೆಂದು ಗುರುತಿಸಲಾಗುವುದು. ಈ ಪರಿಣಾಮಗಳು ಜಾಗತಿಕವಾಗಿ, ಅದರಲ್ಲೂ ವಿಶೇಷವಾಗಿ ಈಗಾಗಲೇ ಸಮಸ್ಯೆಗಳನ್ನು ಎದುರಿಸುತ್ತಿರುವ ದೇಶಗಳು ಮತ್ತು ಸಮುದಾಯಗಳ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತಿವೆ.

ವಾತಾವರಣದ ಬದಲಾವಣೆಗೆ ಒಂದೆಡೆಯಿಂದ ಜನರ ಜೀವನ ಶೈಲಿ, ಕೃಷಿ ಪದ್ಧತಿ ಮತ್ತು ವಿವಿಧ ಪ್ರಾಕೃತಿಕ ಸಂಪತ್ತಿನ ಬಳಕೆಯ ರೀತಿಗಳು ಕಾರಣವಾಗಿದ್ದರೆ ಇನ್ನೊಂದೆಡೆಯಿಂದ ಕೈಗಾರಿಕೆಗಳು, ಅಭಿವೃದ್ಧಿಯ ಭಾಗವಾಗಿ ಕಾಡುಗಳನ್ನು ಕಡಿಯುವುದು, ಹಸಿರು ಕಡಿಮೆಯಾಗುತ್ತಿರುವುದು ಹೀಗೆ ಹಲವು ಕಾರಣಗಳನ್ನು ನೀಡಬಹುದು. ಒಟ್ಟಾರೆ ಇದು ಒಂದು ಸಂಕೀರ್ಣ ಸಮಸ್ಯೆಯಾಗಿದ್ದು ಸಾಮಾನ್ಯ ಜನರು, ಸಂಸ್ಥೆಗಳು, ಸರಕಾರಗಳು, ಅಂತಾರಾಷ್ಟ್ರೀಯ ಸಂಘಟನೆಗಳು ಹೀಗೆ ಎಲ್ಲರ ಸಹಕಾರ ಮತ್ತು ಸಾಂಘಿಕ ಪ್ರಯತ್ನದಿಂದ ಮಾತ್ರ ಇದನ್ನು ಎದುರಿಸಬಹುದಾಗಿದೆ.

ಹವಾಮಾನ ಬದಲಾವಣೆಯ ಬಗೆಗಿನ ಸುಸ್ಥಿರ ಅಭಿವೃದ್ಧಿಯ ಗುರಿಯಲ್ಲಿ ಹಲವು ನಿದಿಷ್ಟ ಕಾರ್ಯಸೂಚಿಗಳನ್ನು ನೀಡಲಾಗಿದೆ. ಎಲ್ಲ ದೇಶಗಳೂ ತಮ್ಮ ಪರಿಧಿಯಲ್ಲಿ ಹವಾಮಾನ ಸಂಬಂಧಿತ ಅಡಚಣೆಗಳನ್ನು ತಡೆದುಕೊಳ್ಳುವ ಮತ್ತು ಬದಲಾವಣೆಗಳಿಗೆ ಹೊಂದಿಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದೂ ಮತ್ತು ಇಂತಹ ಕಾರ್ಯಕ್ರಮಗಳನ್ನು ತಮ್ಮ ರಾಷ್ಟ್ರೀಯ ಯೋಜನೆಗಳು, ನೀತಿಗಳು ಮತ್ತು ಕಾರ್ಯತಂತ್ರಗಳಲ್ಲಿ ಸಮೀಕರಿಸಬೇಕೆಂದೂ ಈ ಗುರಿಯು ಆಶಿಸುತ್ತದೆ. ಸಾರ್ವತ್ರಿಕ ನೆಲೆಯಲ್ಲಿ ಹವಾಮಾನ ಬದಲಾವಣೆಯ ಬಗೆಗಿನ ಒಟ್ಟಾರೆ ಅರಿವುನ್ನು ಹೆಚ್ಚಿಸುವುದು ಮತ್ತು ಈ ಬದಲಾವಣೆಗಳಿಗೆ ಹೊಂದಿಕೊಳ್ಳುವ ಮತ್ತು ಅದನ್ನು ಕಡಿಮೆ ಮಾಡುವ 'ಬಗೆಗಿನ ತಿಳುವಳಿಕೆ ಮೂಡಿಸುವುದು

ಮತ್ತು ಹೀಗೆ ಮಾಡಲು ಅಗತ್ಯವಾದ ಮಾನವ ಸಂಪನ್ಮೂಲ ಹಾಗೂ ಇತರೆ ಪರಿಕರಗಳನ್ನು ಸಿದ್ಧವಾಗಿಸಲು ಎಲ್ಲ ದೇಶಗಳೂ ಪಣತೊಡಬೇಕೆಂದೂ ಈ ಗುರಿಯಲ್ಲಿ ತಿಳಿಸಲಾಗಿದೆ. ಹವಾಮಾನ ಬದಲಾವಣೆಯಿಂದ ತೊಂದರೆಗೊಳಗಾಗುವ ಅಭಿವೃದ್ಧಿಶೀಲ ದೇಶಗಳ ಸಮುದಾಯಗಳಿಗೆ ನೆರವಾಗಲು ಅಭಿವೃದ್ಧಿಹೊಂದಿದ ದೇಶಗಳು ಒಟ್ಟಾಗಿ 2020ರೊಳಗಾಗಿ 100 ಶತಕೋಟಿ ಡಾಲರ್ ನಿಧಿಯನ್ನು ಒಟ್ಟುಗೂಡಿಸಬೇಕೆಂಬ ನಿರ್ದೇಶನವನ್ನೂ ಈ ಗುರಿಯಲ್ಲಿ ನೀಡಲಾಗಿದೆ. ಅತ್ಯಂತ ಮುಖ್ಯವಾಗಿ ಎಲ್ಲ ಜನರೂ ಮತ್ತು ಸಂಘಟನೆಗಳೂ ತಮ್ಮದೇ ರೀತಿಯಲ್ಲಿ, ತಮ್ಮಿಂದಾದಷ್ಟು ವಾತಾವರಣ ಮತ್ತು ಪರಿಸರ ಸ್ನೇಹೀ ಶೈಲಿಗಳನ್ನು ಅಳವಡಿಸಿಕೊಳ್ಳುವುದು ಅತಿ ಅಗತ್ಯವೆಂದು ಸುಸ್ಥಿರ ಅಭಿವೃದ್ಧಿಯ ಬಗೆಗಿನ ಈ 13ನೇ ಗುರಿಯು ಪರಿಭಾವಿಸುತ್ತದೆ.

**ಸಹಕಾರಿ ಸಂಘಟನೆಗಳ ಪಾತ್ರ:**

ಜಗತ್ತಿನಾದ್ಯಂತ ಸಹಕಾರಿ ಸಂಘಟನೆಗಳು ಹವಾಮಾನ ಬದಲಾವಣೆಯ ಗತಿಯನ್ನು ಕಡಿಮೆಮಾಡುವಲ್ಲಿ ತಮ್ಮದೇ ರೀತಿಯಲ್ಲಿ ಸಕ್ರಿಯವಾಗಿವೆ. ಡಿಜಿಟಲೀಕರಣದ ಮೂಲಕ ಪೇಪರ್ ಮತ್ತು ಮುದ್ರಣದ ಬಳಕೆಯನ್ನು ಕಡಿಮೆಮಾಡುತ್ತ ಕಾರ್ಬನ್ ಹೊರಸೂಸುವಿಕೆಯನ್ನು ಕಡಿತಗೊಳಿಸುವಂತಹ ಸಾಮಾನ್ಯ ಚಟುವಟಿಕೆಯಿಂದ ಹಿಡಿದು, ವಾತಾವರಣದ ಮರುಶಕ್ತಿ ಜೋಡಣೆಯಂತಹ ದೊಡ್ಡ ಮಟ್ಟದ ಕೆಲಸಗಳವರೆಗೆ ಸಹಕಾರಿ ಸಂಸ್ಥೆಗಳ ದೇಣಿಗೆ ಇರುವುದನ್ನು ಗಮನಿಸಬಹುದಾಗಿದೆ. ಸುಸ್ಥಿರ ಅಭಿವೃದ್ಧಿಯ ಬಗೆಗಿನ ಇತರೆ ಹಲವು ಗುರಿಗಳಲ್ಲಿರುವಂತೆ ಈ ವಿಷಯದಲ್ಲಿಯೂ ಐರೋಪ್ಯದೇಶಗಳ ಸಹಕಾರಿ ಸಂಘಟನೆಗಳು ಮುಂಚೂಣಿಯಲ್ಲಿವೆ. ಸ್ವೀಡನ್‌ನ ಸಹಕಾರಿ ಯೂನಿಯನ್ ತನ್ನ ಎಲ್ಲ ಸದಸ್ಯ ಸಹಕಾರಿ ಸಂಘಟನೆಗಳೂ ಮರುಬಳಕೆಯ ಇಂಧನ ಬಳಕೆಯನ್ನು ವೃದ್ಧಿಸಲು ಮತ್ತು ಒಟ್ಟಾರೆ ವಿದ್ಯುಚ್ಛಕ್ತಿ ಬಳಕೆಯನ್ನು ಕಡಿಮೆ ಮಾಡುತ್ತಾ ಗ್ರೀನ್ ಹೌಸ್ ಗ್ಯಾಸ್ ಹೊರಸೂಸುವ ಪ್ರಮಾಣವನ್ನು ಕಡಿಮೆಮಾಡುವತ್ತ ಪ್ರಮುಖವಾಗಿ ಕಾರ್ಯನಿರತವಾಗಿವೆ. ಜರ್ಮನಿ ಮತ್ತು ನಾರ್ವೆ ದೇಶದ ಸಹಕಾರಿ ಸಂಘಗಳು ಪ್ರಮುಖವಾಗಿ ನವೀನ ಇಂಧನ ಮೂಲಗಳಾದ ಸೌರ ವಿದ್ಯುತ್ ಮತ್ತು ವಾಯುಮೂಲದ ವಿದ್ಯುತ್ ಉತ್ಪಾದನೆ ಹಾಗೂ ಬಳಕೆಯನ್ನು ತಮ್ಮ ಆದ್ಯತೆಯನ್ನಾಗಿ ಮಾಡಿಕೊಂಡಿವೆ.

ದಕ್ಷಿಣ ಅಮೆರಿಕೆಯಲ್ಲಿ ಅರ್ಜೆಂಟೈನ ಮತ್ತು ಬ್ರೆಝಿಲ್‌ನ ಸಹಕಾರಿ ಸಂಘಟನೆಗಳು ಹವಾಮಾನ ಬದಲಾವಣೆಯ ಸಮಸ್ಯೆಯನ್ನು ಎದುರಿಸಲು ಹಲವು ಉಪಕ್ರಮಗಳನ್ನು ತೆಗೆದುಕೊಂಡಿವೆ. ಬ್ರೆಝಿಲ್‌ನ 22 ಸಹಕಾರಿ ಸಂಘಗಳ ಮಹಾಮಂಡಲವಾದ 'ರೆಡೆ ಕಟ ಸಾಂಪ', ವಿವಿಧ ರೀತಿಯ ತ್ಯಾಜ್ಯಗಳನ್ನು ಮರು ಸಂಸ್ಕರಣ ಮಾಡುವಮೂಲಕ ಮರುಬಳಕೆ ಸಾಧ್ಯವಾಗುವಂತೆ ಮಾಡಿವೆ. ಇದರಲ್ಲಿ ಕಾಗದ, ಪ್ಲಾಸ್ಟಿಕ್, ಗಾಜು ಮತ್ತು ಲೋಹದ ತ್ಯಾಜ್ಯಗಳು ಸೇರಿದ್ದು ಹಲವು ಉತ್ಪಾದನಾ ಮತ್ತು ಸಂಸ್ಕರಣ ಉದ್ದಿಮೆಗಳ ಸಹಯೋಗದಲ್ಲಿ ಈ ಉತ್ತಮ ಕಾರ್ಯದಲ್ಲಿ ನಿರತವಾಗಿವೆ. ಏಶ್ಯಾದಲ್ಲಿ ಜಪಾನ್ ಮತ್ತು ಕೊರಿಯ ದೇಶಗಳ ಕೃಷಿ ಸಹಕಾರ ಸಂಘಗಳು ಮತ್ತು ಗ್ರಾಹಕ ಸಹಕಾರಿ ಸಂಘಗಳು ಹವಾಮಾನ ಬದಲಾವಣೆಯ ತಡೆಯ ಕಾರ್ಯಚಟುವಟಿಕೆಗಳ ಬಗ್ಗೆ ದೀರ್ಘಾವಧಿ ನೀತಿಗಳನ್ನು ರಚಿಸಿಕೊಂಡು ಕಾರ್ಯ ಪ್ರವೃತ್ತವಾಗಿವೆ.

ಹವಾಮಾನ ಬದಲಾವಣೆಯ ಸಮಸ್ಯೆಗೆ ಸ್ಪಂದಿಸುತ್ತಿರುವ ಮತ್ತು ಈ ಕುರಿತು ಹಲವು ಚಟುವಟಿಕೆಗಳನ್ನು ನಡೆಸುತ್ತಿರುವ ಸಹಕಾರಿ ಸಂಘಗಳನ್ನು ನಮ್ಮ ದೇಶದಲ್ಲಿಯೂ ಕಾಣಬಹುದಾಗಿದೆ. ಪುಣೆ ನಗರದಲ್ಲಿರುವ 'ಸ್ವಛ್' ತ್ಯಾಜ್ಯ ಸಂಗ್ರಹಣಾ ಮತು ಸಂಸ್ಕರಣ ಸಹಕಾರಿ ಸಂಘವು ವಾತಾವರಣಕ್ಕೆ ಮಾರಕವಾದ ಪ್ಲಾಸ್ಟಿಕ್ ಮತ್ತು ಇ–ತ್ಯಾಜ್ಯವೂ ಸೇರಿದಂತೆ ಎಲ್ಲ ಬಗೆಯ ರದ್ದಿ/ತ್ಯಾಜ್ಯಗಳನ್ನು ಸಂಗ್ರಹಿಸಿ ಸಂಸ್ಕರಿಸುತ್ತಾ ಜನಮನ್ನಣೆಗಳಿಸಿದೆ. ಗುಜರಾತ್‌ನ ಸೂರತ್ ಜಿಲ್ಲಾ ಸಹಕಾರಿ ಬ್ಯಾಂಕ್, ತನ್ನ ನೂತನ ಮುಖ್ಯ ಕಛೇರಿ ಕಟ್ಟಡವನ್ನು ಪರಿಸರ ಮತ್ತು ವಾತಾವರಣದ ಅಗತ್ಯಗಳ ಆಧಾರದಲ್ಲಿ ಕಟ್ಟುವ ಮೂಲಕ ಇಂತಹ ಪ್ರಮುಖ ಮತ್ತು ವಿನೂತನ ಮಾದರಿ ಅನುಸರಿಸಿರುವ ದೇಶದ ಮೊದಲ ಸಹಕಾರಿ ಸಂಘವೆಂದು ಹೆಸರು ಗಳಿಸಿದೆ. ಗುಜರಾತ್‌ನ ದುಂಡಿ ಸೌರ ವಿದ್ಯುತ್ ಉತ್ಪಾದನಾ ಸಹಕಾರಿ ಸಂಘವು ನವೀಕರಿಸಬಹುದಾದ

ಮೂಲಗಳಿಂದ ಗ್ರಾಮೀಣ ಪ್ರದೇಶದಲ್ಲಿನ ವಿದ್ಯುತ್ ಅಗತ್ಯಗಳನ್ನು ಪೂರೈಸುತ್ತಾ ಹೆಸರುಗಳಿಸುತ್ತಿದ್ದರೆ, ಇಫ್ಕೋ ಸಹಕಾರ ಸಂಘದ ಪ್ರಾಯೋಜನೆಯಲ್ಲಿ ಆರಂಭಿಸಲಾಗಿರುವ ಭಾರತೀಯ ಕೃಷಿ ಅರಣ್ಯ ಅಭಿವೃದ್ಧಿ ಸಹಕಾರಿ ಸಂಘವು (INDIAN FARM FOREST DEVELOPMENT COOPERATIVE) ದೇಶದ ಬೇರೆ ಬೇರೆ ಭಾಗಗಳಲ್ಲಿ ಸ್ಥಳೀಯ ತಳಿಗಳನ್ನೇ ಹೊಂದಿದ ಅರಣ್ಯವನ್ನು ಅಭಿವೃದ್ಧಿಪಡಿಸುತ್ತ, ಹಸಿರು ಹೊದಿಕೆಯನ್ನು ವೃದ್ಧಿಸುವ ಯೋಜನೆಯನ್ನು ಹೊಂದಿದೆ.

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಪ್ರತಿಯೊಂದು ಸಹಕಾರಿ ಸಂಘಟನೆಯೂ ಹವಾಮಾನ ಬದಲಾವಣೆಯ ಸಮಸ್ಯೆಯ ಪರಿಣಾಮಗಳನ್ನು ಕಡಿಮೆ ಮಾಡುವ ದಿಸೆಯಲ್ಲಿ ತನ್ನದೇ ರೀತಿಯಲ್ಲಿ ಕಾರ್ಯಪ್ರವೃತ್ತವಾಗಬಹುದೆಂಬುದನ್ನು ಕಾಣಬಹುದಾಗಿದೆ. ಸಹಕಾರಿ ಸಂಘಗಳು ಈ ಕೆಳಗೆ ತಿಳಿಸಿದಂತಹ ಸುಲಭ ಮಾರ್ಗಗಳ ಅನುಸರಣೆಯೊಂದಿಗೆ ತಮ್ಮ ಚಟುವಟಿಕೆಗಳನ್ನು ಆರಂಭಿಸಬಹುದಾಗಿದೆ.

1. ಪೇಪರ್‌ನ ಬಳಕೆ ಮತ್ತು ಮುದ್ರಣವನ್ನು ಆದಷ್ಟೂ ಕಡಿಮೆಮಾಡಲು ಮತ್ತು ಈ ಮೂಲಕ ವಾತಾವರಣಕ್ಕೆ ಕಾರ್ಬನ್ ಬಿಡುಕಗಡೆಯ ಪ್ರಮಾಣವನ್ನು ಕಡಿಮೆಮಾಡಲು ಡಿಜಿಟಲೀಕರಣದತ್ತ ಗಮನಹರಿಸುವುದು.
2. ಒಂದು ಕಡೆ ಉಪಯೋಗಿಸ್ಪಟ್ಟು ಇನ್ನೊಂದೆಡೆ ಖಾಲಿಇರುವ ಪೇಪರ್‌ಗಳನ್ನು ಪುನ: ಉಪಯೋಗಿಸುವುದು.
3. ಸಂಸ್ಥೆಯ ಎಲ್ಲ ಕಟ್ಟಡಗಳಲ್ಲಿ ಮಳೆನೀರು ಕೊಯ್ಲು ಮತ್ತು ಸೌರ ವಿದ್ಯುತ್ ಘಟಕಗಳ ಸ್ಥಾಪನೆಗೆ ಪ್ರಯತ್ನಿಸುವುದು
4. ಎಲ್ಲ ಕಟ್ಟಡಗಳನ್ನು ಪ್ರಾಕೃತಿಕ ಗಾಳಿ, ಬೆಳಕು ಹೆಚ್ಚು ಬರುವಂತೆ ವಿನ್ಯಾಸಗೊಳಿಸುವುದು ಮತ್ತು ಏರ್ ಕಂಡಿಶನರ್‌ಗಳ ಬಳಕೆ ಕಡಿಮೆಮಾಡಲು ಪ್ರಯತ್ನಿಸುವುದು
5. ಎಲ್ಲ ಬಗೆಯ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ವಿಂಗಡಿಸುವುದು ಮತ್ತು ಸಾಧ್ಯವಿರುವುದನ್ನು ತಾವೇ ಸಂಸ್ಕರಿಸುವುದು (ಉದಾಹರಣೆಗೆ ಹಸಿ ಕಸವನ್ನು ಗೊಬ್ಬರ ಅಥವ ಜೈವಿಕ ಗ್ಯಾಸ್ ಉತ್ಪಾದನೆ) ಮತ್ತು ಇತರೆ ತ್ಯಾಜ್ಯವನ್ನು (ಉದಾಹರಣೆಗೆ ಗಾಜು, ಕಬ್ಬಿಣ, ಇ–ತ್ಯಾಜ್ಯ ಇತ್ಯಾದಿ) ಸಂಸ್ಕರಣಾ ಘಟಕಗಳಿಗೆ ನೀಡುವುದು.
6. ಸದಸ್ಯರುಗಳಿಗೆ ಹವಾಮಾನ ಬದಲಾವಣೆಯ ಕಾರಣಗಳು, ಪರಿಣಾಮಗಳು ಮತ್ತು ಈ ಬಗ್ಗೆ ಅವರುಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುವುದು.
7. ಹಲವು ಸಹಕಾರಿ ಸಂಘಗಳು ಒಟ್ಟಾಗಿ ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆ ಮತ್ತು ನವೀಕರಿಸಬಹುದಾದ ಇಂಧನದ ಉತ್ಪಾದನಾ ಘಟಕಗಳ ಸ್ಥಾಪನೆಯಂತಹ ಚಟುವಟಿಕೆಗಳನ್ನು ನಡೆಸುವುದು
8. ಪರ್ಯಾಯ ಇಂಧನವನ್ನು ಬಳಸುವ ವಾಹನ ಹಾಗೂ ಯಂತ್ರಗಳನ್ನು ಉಪಯೋಗಿಸಲು ಪ್ರಯತ್ನಿಸುವುದು
9. ಸಂಸ್ಥೆಯ ಸುತ್ತ ಮುತ್ತ ಗಿಡ ಮರಗಳನ್ನು ಬೆಳೆಸುವುದು ಮತ್ತು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಸಾಧ್ಯವಿರುವಲ್ಲೆಲ್ಲ ಹಸಿರು ಹೊದಿಕೆಯನ್ನು ಹೆಚ್ಚಿಸಲು ಪರಯತ್ನಿಸುವುದು
10. ಸಂಸ್ತೆಯು ಉತ್ಪಾದಿಸುವ ಮತ್ತು ಬಳಸುವುವ ವಸ್ತುಗಳಲ್ಲಿ ಆದಷ್ಟು ರಾಸಾಯನಿಕ ಮತ್ತು ಪರಿಸರಕ್ಕೆ ಹಾನಿಕಾರಕವಾದ ಇರತೆ ಅಂಶಗಳು ಇರದಂತೆ ಕ್ರಮವಹಿಸುವುದು.

ಮೇಲೆ ಹೇಳಿದ ಚಟುವಟಿಕೆಗಳು ಕೇವಲ ಕೆಲವು ಮಾತ್ರವಾಗಿದ್ದು, ಇವುಗಳಲ್ಲದೆ ಪ್ರತಿ ಸಹಕಾರ ಸಂಸ್ಥೆಯ ಕಾರ್ಯಚಟುವಟಿಕೆಗಳು, ಕಾರ್ಯ ವ್ಯಾಪ್ತಿಯ ಪ್ರದೇಶ, ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ನೆಲೆ ಇವುಗಳ ಆಧಾರದಲ್ಲಿ ಬೇರಾವುದೇ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ.

# ಎಸ್‌ಡಿಜಿ 14: ನೀರಿನ ಕೆಳಗಿನ ಜೀವವೈವಿಧ್ಯ

ಸಮುದ್ರಗಳು, ಮಹಾಸಾಗರಗಳು ಮತ್ತು ಸಾಗರೋತ್ಪನ್ನಗಳನ್ನು ಸಂರಕ್ಷಿಸುವುದು ಮತ್ತು ಸುಸ್ಥಿರವಾಗಿ ಬಳಸುವುದು (Conserve and sustainably use the oceans, seas and marine resources for sustainable development) ಸುಸ್ಥಿರ ಅಭಿವೃದ್ಧಿ ಸಾಧನೆಗೆ ಅಗತ್ಯವೆಂಬುದು ಈ ಗುರಿಯ ಆಶಯವಾಗಿದೆ. ಭೂಮಿಯ ಮೇಲಿರುವಷ್ಟೇ ಜೀವಿಗಳು, ಸಂಪನ್ಮೂಲಗಳು ನೀರಿನಡಿಯಲ್ಲಿ ಇರುವುದು ನಮ್ಮೆಲ್ಲರಿಗೂ ತಿಳಿದ ವಿಷಯವೇ. ವಿಶೇಶವಾಗಿ ಸಮುದ್ರಗಳು ಮತ್ತು ಮಹಾಸಾಗರಗಳು ಜಗತ್ತಿನ ಹಲವು ಅಗತ್ಯಗಳನ್ನು ಪೂರೈಸುವ ಮೂಲಗಳಾಗಿವೆ. ಪ್ರಪಂಚದ ಜನಸಂಖ್ಯೆಯ ಪ್ರತಿ ಐದರಲ್ಲಿ ಒಬ್ಬರು ತಮ್ಮ ಆಹಾರದಲ್ಲಿನ ಪ್ರೋಟೀನ್‌ಗಳನ್ನು ಮೀನು ಮುಂತಾದ ಸಮುದ್ರ ಉತ್ಪನ್ನಗಳಿಂದ ಪಡೆಯುತ್ತಿದ್ದಾರೆ. ಜಗತ್ತಿನ ಹಲವಾರು ದೇಶಗಳು ತಮ್ಮ ಆದಾಯದ ಬಹುದೊಡ್ಡ ಪಾಲನ್ನು ಸಮುದ್ರೋತ್ಪನ್ನಗಳ ಮೂಲಕ ಪಡೆಯುತ್ತಿವೆ. ಪ್ರಯಾಣ ಮತ್ತು ಸಾಗಣೆಯ ಮಾರ್ಗವಾಗಿ, ಆಹಾರ ಮತ್ತು ಖನಿಜಗಳ ಮೂಲವಾಗಿ ಮತ್ತು ಜಗತ್ತಿನ ಪರಿಸರ ಸಮತೋಲನ ಕಾಪಾಡುವ ಮಾಧ್ಯಮವಾಗಿ ಸಮುದ್ರ ಮತ್ತು ಮಹಾಸಾಗರಗಳು ಬಹುಮೂಲ್ಯ ಪಾತ್ರ ನಿರ್ವಹಿಸುತ್ತಿವೆ. ಆದರೆ ಜನಸಂಖ್ಯೆಯ ಹೆಚ್ಚಳ, ಬೆಳವಣಿಗೆಯ ವೇಗ ಮತ್ತು ಮುಖ್ಯವಾಗಿ ಮನುಷ್ಯನ ದುರಾಸೆ ಹಾಗೂ ಬೇಜವಾಬ್ದಾರಿತನದಿಂದಾಗಿ ಈ ಮೂಲಗಳು ಇಂದು ಸಂಕಷ್ಟಗಳನ್ನು ಎದುರಿಸುತ್ತಿವೆ. ಸಮುದ್ರಗಳ ಮೇಲೆ ಚಲಿಸುವ ವಾಹನಗಳಿಂದ ನಿರಂತರವಾಗಿ ಹೊರಸೂಸುವ ಹೊಗೆ ಮತ್ತು ಇತರೆ ತ್ಯಾಜ್ಯಗಳು ಸಮುದ್ರದ ನೀರಿನ ಆಮ್ಲೀಕರಣಕ್ಕೆ ಕಾರಣವಾಗುತ್ತಿವೆ. ಕೈಗಾರಿಕಾ ತ್ಯಾಜ್ಯಗಳನ್ನು ಸಮುದ್ರಕ್ಕೆ ಬಿಡುವುದು, ತೈಲ ಮತ್ತಿತರ ವಸ್ತುಗಳು ಸಮುದ್ರದಲ್ಲಿ ಸೋರಿಕೆಯಾಗುವುದು, ನಗರಗಳ ತ್ಯಾಜ್ಯಗಳು ಸಮುದ್ರಕ್ಕೆ ಎಸೆಯಲ್ಪಡುವುದು ಮುಂತಾದುವುಗಳಿಂದಾಗಿ ನೀರು ಕಲುಶಿತವಾಗುವುದರ ಜೊತೆಗೆ ಜಲಚರಗಳ ಜೀವಹಾನಿಯೂ ಅಪಾರವಾಗಿ ನಡೆಯುತ್ತಿದ್ದು, ನೀರಿನಡಿಯ ಜೀವವೈವಿಧ್ಯವು ತೊಂದರೆಗೆ ಸಿಲುಕಿದೆ. ಆದುದರಿಂದಲೇ ಸುಸ್ಥಿರ ಅಭಿವೃದ್ಧಿಯ ಈ ಗುರಿಯಲ್ಲಿ ಸಮುದ್ರ ಮತ್ತು ಸಾಗರಗಳನ್ನು ಸಂರಕ್ಷಿಸಿ ಅವುಗಳಲ್ಲಿನ ಜೀವವೈವಿಧ್ಯತೆಯನ್ನು ಕಾಪಾಡುವತ್ತ ಗಮನಹರಿಸಲಾಗಿದೆ.

ಸುಸ್ಥಿರ ಅಭಿವೃದ್ಧಿಯ ಭಾಗವಾಗಿ ಈ ಗುರಿಯು ಭೂಮಿಯ ಮೇಲಿನ ಚಟುವಟಿಕೆಗಳಿಂದಾಗಿ ಸಮುದ್ರ ಕಲುಶಿತವಾಗುವುದನ್ನು 2025ರೊಳಗಾಗಿ ಈಗಿರುವುದರ ಅರ್ಧದಷ್ಟು ಕಡಿಮೆಮಾಡಬೇಕೆಂದೂ ಮತ್ತು ಇದೇ ಅವಧಿಯಲ್ಲಿ ನೀರಿನೊಳಗಿನ ಮತ್ತು ತೀರಪ್ರದೇಶಗಳ ಪರಿಸರವನ್ನು ಸಂರಕ್ಷಿಸಿ ಸುಸ್ಥಿರವಾಗಿ ಬಳಸುವ ಮಾರ್ಗೋಪಾಯಗಳನ್ನು ಚಾಲ್ತಿಗೆ ತರಬೇಕೆಂದೂ ವಿಧಿಸುತ್ತದೆ. ಸಾಗರಗಳ ಆಮ್ಲೀಕರಣವನ್ನು ವೈಜ್ಞಾನಿಕ ಅನ್ವೇಶಣೆಗಳ ಮೂಲಕ ಕಡಿಮೆಮಾಡುವುದು, ಅನಿಯಂತ್ರಿತ ಮತ್ತು ಕಾನೂನು ಬಾಹಿರ ಮೀನುಗಾರಿಕೆಯನ್ನು ಪೂರ್ಣವಾಗಿ ನಿಲ್ಲಿಸುವುಸು, ದ್ವೀಪ ರಾಷ್ಟ್ರಗಳ ಅಭಿವೃದ್ಧಿಗೆ ಪ್ರರ್‍ಯಾಯ ಮಾರ್ಗೋಪಾಯಗಳನ್ನು ಹುಡುಕುವುದು, ನೀರು ಮತ್ತು ನೀರಿನ ಜೀವ ವೈವಿಧ್ಯದ ರಕ್ಷಣೆಗೆ ಸಂಬಂಧಿಸಿದಂತೆ ವೈಜ್ಞಾನಿಕ ಅರಿವನ್ನು ವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು, ಯಾಂತ್ರೀಕೃತ ಮೀನಿಗಾರಿಕೆಯ ಬದಲಿಗೆ ಸಣ್ಣ ಮತ್ತು ಸ್ಥಳೀಯ ಪದ್ಧತಿಯ ಮೀನುಗಾರಿಕಾ ಪದ್ಧತಿಗಳಿಗೆ ಉತ್ತೇಜನ ನೀಡುವುದು ಮತ್ತು ಸಂಯುಕ್ತ ರಾಷ್ಟ್ರಸಂಸ್ಥೆಯ ಮಾರ್ಗಸೂಚಿಯನುಸಾರ ಸಮುದ್ರ ಮತ್ತು ಸಾಗರ ಪ್ರದೇಶಗಳನ್ನು ರಕ್ಷಿಸಲು ಅಂತಾರಾಷ್ಟ್ರೀಯ ನೀತಿ ಹಾಗು ಕಾನೂನುಗಳನ್ನು ಜಾರಿಗೆ ತರುವುದು ಇವು ನೀರಿನೊಳಗಿನ ಜೀವಜಗತ್ತಿಗೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿಯ

ಗುರಿಯಲ್ಲಿ ಸೂಚಿಸಿರುವ ಇತರೆ ಪ್ರಮುಖ ಕಾರ್ಯ ಚಟುವಟಿಕೆಗಳಾಗಿವೆ.

ನೀರಿನೊಳಗಿನ ಜೀವವೈವಿಧ್ಯ ಮತ್ತು ಸಂಪನ್ಮೂಲಗಳ ಸಂರಕ್ಷಣೆ ಹೆಚ್ಚಾಗಿ ತೀರಪ್ರದೇಶದಲ್ಲಿ ವಾಸಿಸುವ ಸಮುದಾಯಗಳನ್ನು ಅವಲಂಬಿಸಿದೆ. ಈ ಸಮುದಾಯಗಳು ತಮ್ಮ ಜೀವನಕ್ಕಾಗಿ ಸಮುದ್ರವನ್ನು ಅವಲಂಬಿಸಿರುವುದರಿಂದ ಅದರ ಅಳಿವು ಉಳಿವಿನಲ್ಲೇ ಸಮುದಾಯಗಳ ಅಳಿವು ಉಳಿವೂ ನಿಂತಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಮೀನಿಗಾರ ಸಮುದಾಯಗಳ ಪಾತ್ರ ಬಹುಮುಖ್ಯ. ಮೀನು ಮತ್ತಿತರ ಸಾಗರೋತ್ಪನ್ನಗಳನ್ನು ಅವಲಂಬಿಸಿರುವವರು ಅಭಿವೃದ್ಧಿಶೀಲ ದೇಶಗಳಲ್ಲೇ ಹೆಚ್ಚಾಗಿರುವುದನ್ನು ಹಾಗೂ ಇವರ ಮೀನುಗಾರಿಕೆಯ ಶೇಕಡ 90 ಭಾಗ ಸಣ್ಣ ಮತ್ತು ಸ್ಥಳೀಯ ಮಾದರಿಯನ್ನೇ ಅವಲಂಬಿಸಿರುವುದನ್ನೂ ಕಾಣುತ್ತೇವೆ. ಆದುದರಿಂದ ಈ ಸಮುದಾಯಗಳ ಸುಸ್ಥಿರ ಅಭಿವೃದ್ಧಿಯ ಪ್ರಮುಖ ಆಯಾಮಗಳಾದ ಬಡತನ ನಿರ್ಮೂಲನೆ (ಎಸ್‌ಡಿಜಿ 1) ಮತ್ತು ಹಸಿವಿನ ಅಂತ್ಯ (ಎಸ್‌ಡಿಜಿ 2) ಇವುಗಳಿಗೂ ಸಮುದ್ರ ಮತ್ತು ಸಾಗಜೀವಿಗಳು ಹಾಗೂ ಸಂಪನ್ಮೂಲಗಳ ರಕ್ಷಣೆಗೂ ಬಹುನಿಕಟ ಸಂಬಂಧವಿದೆ ಎನ್ನಬಹುದು.

**ಸಹಕಾರಿ ಸಂಸ್ಥೆಗಳ ಪಾತ್ರ:**

ಆಹಾರ ಭದ್ರತೆ ಮತ್ತು ಬಡತನ ನಿರ್ಮೂಲನೆಯ ಹಿನ್ನೆಲೆಯಲ್ಲಿ ರಚಿತವಾದ ಸುಸ್ಥಿರ ಕಿರು ಮತ್ಸ್ಯೋದ್ಯಮದ ಬಗೆಗಿನ ಮಾರ್ಗಸೂಚಿಗಳು ((SSF Guidelines) ಸಹಕಾರಿ ಸಂಘಟನೆಗಳ ಸಾಂಸ್ಥಿಕ ಶಕ್ತಿಯನ್ನು ಹೆಚ್ಚಿಸುವ ಅಗತ್ಯವನ್ನು ಗುರುತಿಸುವ ಮೂಲಕ ಸುಸ್ಥಿರ ಮೀನಿಗಾರಿಕೆಯಲ್ಲಿ ಸಹಕಾರಿ ಸಂಘಗಳ ಪಾತ್ರವನ್ನು ಒತ್ತಿ ಹೇಳಿದೆ. ಸಹಕಾರಿ ಸಂಘಗಳು ಮೀನಿಗಾರರ ಹಿತ ರಕ್ಷಣೆಯ ಜೊತೆ ಜೊತೆಗೇ ಅವರುಗಳು ಸಾಂಘಿಕ ನೆಲೆಯಲ್ಲಿ ತಮ್ಮ ಜೀವನದ ಆಸರೆಯಾದ ಸಮುದ್ರವನ್ನು ರಕ್ಷಿಸುವ ಕೆಲಸಗಳನ್ನು ಕೈಗೆತ್ತಿಕೊಳ್ಳಲೂ ಸಹಕರಿಸುತ್ತಿವೆ. ಕೋಸ್ಟರೀಕ ದೇಶದ ಸಣ್ಣ ಮೀನುಗಾರರ ಸಹಕಾರಿ ಸಂಘವಾದ ಕೋಪ್ಪೆಸಾಲಿಡೆರ್ (CoopeSolidar) ಅಂತಾರಾಷ್ಟ್ರೀಯ ಮಾನದಂಡಗಳಾದ ಎಸ್‌ಎಸ್‌ಎಫ್ ಮಾರ್ಗಸೂಚಿ ಹಾಗೂ ಜವಾಬ್ದಾರಿಯುತ ಸಾಗರ ಮೀನುಗಾರಿಕೆಯ (Marine Responsible Fishing Areas) ಕಾರ್ಯ ಯೋಜನೆಗಳಿಗನುಸಾರವಾಗಿ ಮೀನುಗಾರಿಕೆಯನ್ನು ನಡೆಸುತ್ತಾ ಇಡೀ ದೇಶಕ್ಕೆ ಮಾದರಿಯಾಗಿದೆ. ಇಂಗ್ಲೆಂಡ್‌ನ ಕ್ಯಾಚ್‌ಬಾಕ್ಸ್ ಸಹಕಾರಿ ಸಂಸ್ಥೆಯು ಮೀನುಗಾರು ಮತ್ತು ಮೀನು ಬಳಕೆದಾರ ಸಮುದಾಯಗಳನ್ನು ಪರಸ್ಪರ ಹತ್ತಿರ ತಂದು ಅವರುಗಳ ನಡುವೆ ಸಂವಹನವನ್ನು ಏರ್ಪಡಿಸುತ್ತಾ ಮೀನುಗಾರಿಕೆ ಹಾಗೂ ಮೀನಿನ ಬಳಕೆ ಎರಡೂ ಸುಸ್ಥಿರ ನೆಲೆಯಲ್ಲಿ ನಡೆಯುವಂತಾಗಲು ಶ್ರಮಿಸುತ್ತಿದೆ.

ಜಪಾನ್ ದೇಶದಲ್ಲಿ ಮೀನೂಗಾರಿಕಾ ಸಹಕಾರಿ ಸಂಘಗಳು ಮತ್ತು ಗ್ರಾಹಕ ಸಹಕಾರಿ ಸಂಘಗಳು ಪರಸ್ಪರ ಸಹಕಾರದೊಂದಿಗೆ ಸುಸ್ಥಿರ ಸಾಗರೋತ್ಪನ್ನ ಉದ್ಯಮ ಹಾಗೂ ಸುಸ್ಥಿರ ಬಳಕೆ ಕ್ರಮಗಳನ್ನು ಒಟ್ಟಾಗಿ ಪ್ರಚುರಪಡಿಸಲು ಶ್ರಮಿಸುತ್ತಿವೆ. ಉದಾಹರಣೆಗೆ ಹೊಕ್ಕೈಡೊ ಪ್ರದೇಶದಲ್ಲಿರುವ ಜೊತ್ಸುಕೆ ಮೀನುಗಾರಿಕಾ ಸಹಕಾರಿ ಸಂಘವು ಪರಿಸರ ಸ್ನೇಹಿ ಮೀನುಗಾರಿಕಾ ಪದ್ಧತಿಗಳನ್ನು ಅಳವಡಿಸಿಕೊಂಡಿರುವುದರ ಜೊತೆಗೆ ಸಾಗರ ತೀರದಲ್ಲಿ ಕಾಡುಬೆಳೆಸಲು ಮತ್ತು ಇರುವ ಕಾಡು ಹಾಗೂ ಸಸ್ಯ ಪ್ರಭೇದಗಳನ್ನು ಸಂರಕ್ಷಿಸಲು ಶ್ರಮಿಸುತ್ತಿದೆ. ಹಾಗೆಯೇ, ದಕ್ಷಿಣ ಜಪಾನ್‌ನಲ್ಲಿರುವ ಒನ್ನಸಾನ್ ಸಹಕಾರಿ ಸಂಘವು ತನ್ನ ಪ್ರದೇಶದ ಉಷ್ಣವಲಯ ಕಾಡುಗಳನ್ನು ರಕ್ಷಿಸುವ ಮೂಲಕ ಸಮುದ್ರ ಕಳೆ (ಜಚಿತಿಜಜಜ) ಮತ್ತು ಇತರೆ ಜಲಸಸ್ಯಗಳನ್ನು ಸಂರಕ್ಷಿಸುವ ದೀರ್ಘಾವಧಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಬ್ರೆಝಿಲ್‌ನ ಕನೇನಿಯ ಆಯ್ಸ್ಟರ್ ಉತ್ಪಾದಕರ ಸಹಕಾರಿ ಸಂಘವು ಸ್ಥಳೀಯ ಸಮುದ್ರ ತೀರದ ಮ್ಯಾನ್‌ಗ್ರೋವ್ ಅರಣ್ಯಕ್ಕೆ ಧಕ್ಕೆ

ಬರದಂತೆ, ಅಯ್ಸ್ಟರ್ ಕೃಷಿ ಮಾಡುತ್ತ ತನ್ನ ಎಲ್ಲ ಸದಸ್ಯರೂ ಸ್ಥಳೀಯ ಪರಿಸರ, ನೀರು ಮತ್ತು ಅರಣ್ಯ ರಕ್ಷಣೆಗೆ ಆದ್ಯತೆ ನೀಡುವಂತೆ ನೋಡಿಕೊಳ್ಳುತ್ತಿದೆ. ದಕ್ಷಿಣ ಆಫ್ರಿಕದ ಕೇಪ್‌ಟೌನ್‌ನಲ್ಲಿರುವ ಸಣ್ಣ ಪ್ರಮಮಾಣದ ಮಹಿಳಾ ಮೀನುಗಾರಿಕಾ ಸಹಕಾರಿ ಸಂಘವು ಮೀನುಗಾರರು ಮಧ್ಯವರ್ತಿಗಳ ಹಿಡಿತಕ್ಕೆ ಸಿಗದಂತೆ ನೋಡಿಕೊಳ್ಳುತ್ತಾ, ತನ್ನೆಲ್ಲ ಸದಸ್ಯರು ಉತ್ತಮ ಗುಣಮಟ್ಟದ ಮೀನುಗಾಕಾ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವಂತೆ ತರಬೇತಿ ನೀಡಿ ಸಾಗರ ತೀರದ ರಕ್ಷಣೆ ಹಾಗೂ ಸಾಗರೋತ್ಪನ್ನಗಳು ಕಾಲಕಾಲಕ್ಕೆ ಪುನರುಜ್ಜೀವನಗೊಳ್ಳುವಂತೆ ನೋಡಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ನಡೆಸುತ್ತಿದೆ.

ಸುಸ್ಥಿರ ಅಭಿವೃದ್ಧಿಯ 14ನೇ ಗುರಿಯಲ್ಲಿ ಸೂಚಿಸಿರುವ ಆದ್ಯತೆಗಳು ಮತ್ತು ಜಗತ್ತಿನ ವಿವಿಧೆಡೆಯಲ್ಲಿ ಸಹಕಾರಿ ಸಂಘಗಳು ಈ ಬಗ್ಗೆ ಕೈಗೊಂಡಿರುವ ಚಟುವಟಿಕೆಗಳ ಹಿನ್ನೆಲೆಯಲ್ಲಿ ನಮ್ಮ ದೇಶದ ಸಹಕಾರಿ ಸಂಘಗಳೂ ಹಲವಾರು ಕಾರ್ಯಕ್ರಮಗಳನ್ನು ಚಾಲ್ತಿಗೆ ತರಬಹುದಾಗಿದೆ. ಕೆಲವು ಸಾಧ್ಯತೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

1. ಸಮುದ್ರತೀರ ಪ್ರದೇಶಗಳಲ್ಲಿರುವ ಸಹಕಾರಿ ಸಂಘಗಳು ವಿವಿಧ ತ್ಯಾಜ್ಯಗಳನ್ನು ಸಮುದ್ರಕ್ಕೆ ಬಿಡುವುದರಿಂದ ಆಗುವ ಅಪಾಯಗಳಬಗ್ಗೆ ಜನಜಾಗೃತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು.
2. ಮೀನುಗಾರಿಕಾ ಸಹಕಾರಿ ಸಂಘಗಳು ಸುಸ್ಥಿರ ಮೀನಿಗಾರಿಕಾ ಪದ್ಧತಿಗಳನ್ನು ಅನುಸರಿಸಲು ಮತ್ತು ಸಮುದ್ರ ಜೀವಿಗಳು ಹಾಗೂ ಸಸ್ಯಗಳನ್ನು ರಕ್ಷಿಸಲು ಕ್ರಮವಹಿಸಬಹುದು.
3. ಸಾಧ್ಯವಾದಷ್ಟು ಸ್ಥಳೀಯ ಮತ್ತು ಸಣ್ಣ ಪ್ರಮಾಣದ ಮೀನುಗಾರಿಕೆಗಳಿಗೆ ಉತ್ತೇಜನ ನೀಡಬೇಕು ಮತ್ತು ಯಾಂತ್ರೀಕೃತ ಹಾಗೂ ಭಾರೀ ಪ್ರಮಾಣದ ಮೀನಿಗಾರಿಕೆಯನ್ನು ಮಿತಿಗೊಳಿಸಬೇಕು.
4. ಸಮುದ್ರ ಮತ್ತು ಮಹಾಸಾಗರಗಳೊಳಗಿನ ಸಂಪನ್ಮೂಲಗಳನ್ನು ಉಪಯೋಗಿಸುವಾಗ ವಿವಿಧ ಅಂತಾರಾಷ್ಟ್ರೀಯ ಒಪ್ಪಂದಗಳ ವಿಧಿಗಳನ್ನು ಗಮನಿಸಿ, ಅದರ ಅನುಸಾರ ನಡೆಸಬೇಕು.
5. ಸಮುದ್ರದಿಂದ ಹೊರಬಂದು ದಡದಲ್ಲಿ ಬೀಳುವ ವಿವಿಧ ತ್ಯಾಜ್ಯಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವಬಗ್ಗೆ ಸ್ಥಳೀಯ ಸರಕಾರೀ ವಿಭಾಗಗಳೊಂದಿಗೆ ಜಂಟಿಯಾಗಿ ಕಾರ್ಯ ನಿರ್ವಹಿಸಬಹುದು.
6. ಸಮುದ್ರಕ್ಕೆ ತೈಲ ಮತ್ತು ತೈಲ ಸಂಬಂಧಿ ತ್ಯಾಜ್ಯಗಳು ಸೇರದಂತೆ ನೋಡಿಕೊಳ್ಳಬೇಕು
7. ಕಾಲದಿಂದ ಕಾಲಕ್ಕೆ ಸಮುದ್ರ ತಟ ಮತ್ತು ಸಮುದ್ರಕ್ಕೆ ಸಂಬಂಧಿಸಿದಂತೆ ಆಗುವ ಯಾವುದೇ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು ಮತ್ತು ಇದರ ಬಗೆಗಿನ ಮಾಹಿತಿಯನ್ನು ಸಂಬಂಧಿಸಿದ ಸರಕಾರೀ ವಿಭಾಗಗಳಿಗೆ ನೀಡಬೇಕು.

ಇಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಹಕಾರಿ ಸಂಘಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಎಸ್‌ಡಿಜಿ 14ರ ಗುರಿಗಳನ್ನು ತಲುಪಲು ಸಹಕರಿಸಬಹುದು.

# ಎಸ್‌ಡಿಜಿ 15: ಭೂಮಿಯ ಮೇಲಿನ ಜೀವವೈವಿಧ್ಯ

ಭೂಮಂಡಲದ ಪರಿಸರ ವ್ಯವಸ್ಥೆಯನ್ನು ರಕ್ಷಿಸಿ, ಮರು ಸ್ಥಾಪಿಸಿ ಮತ್ತು ಸುಸ್ಥಿರ ನೆಲೆಯಲ್ಲಿ ಬಳಕೆಮಾಡಿ, ಅರಣ್ಯಗಳನ್ನು ಸುಸ್ಥಿರವಾಗಿ ವ್ಯವಸ್ಥಾಪನೆಗೊಳಿಸಿ, ಮರುಭೂಮೀಕರಣದ ವಿರುದ್ಧ ಹೋರಾಟನಡೆಸಿರಿ, ನೆಲದ ಫಲವತ್ತತೆಯ ಕುಸಿತವನ್ನು ತಡೆಯಿರಿ ಮತ್ತು ಮರುಸ್ಥಾಪಿಸಿ, ಹಾಗು ಜೀವವೈಧ್ಯತೆಯ ಅಳಿವನ್ನು ತಡೆಯಿರಿ ಎಂದು ಈ ಗುರಿಯಲ್ಲಿ ತಿಳಿಸಲಾಗಿದೆ (Life on Earth: Protect, restore and promote sustainable use of terrestrial ecosystems, sustainably manage forests, combat desertification, and halt and reverse land degradation and halt biodiversity loss). ಸುಸ್ಥಿರ ಅಭಿವೃದ್ಧಿಯ ಬಗೆಗಿನ ಹದಿನೈದನೆಯ ಗುರಿಯು ಭೂಮಿಯ ಮೇಲಿನ ಎಲ್ಲ ಜೀವ ರಾಶಿಗಳನ್ನು ರಕ್ಷಿಸುವ ಮತ್ತು ಮಿತವಾಗಿ ಹಾಗೂ ಅವುಗಳಿಗೆ ಧಕ್ಕೆಯಾಗದಂತೆ ಉಪಯೋಗಿಸುವ ಬಗೆಗೆ ಒತ್ತು ಕೊಡುತ್ತದೆ. ನಮ್ಮ ಭೂಮಂಡಲದ ಎಲ್ಲ ಬಗೆಯ ಜೀವರಾಶಿಗಳನ್ನು ರಕ್ಷಿಸುವ ಹಾಗು ಸಂಪನ್ಮೂಲಗಳನ್ನು ಸುಸ್ಥಿರವಾಗಿ ಬಳಸುವ ನಿಟ್ಟಿನಲ್ಲಿ ಕಳೆದ ಒಂದೆರಡು ದಶಕಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿಸಲಾಗಿದೆಯಾದರೂ, ಇದು ಜಗತ್ತಿನೆಲ್ಲೆಡೆ ಒಂದೇಬಗೆಯಲ್ಲಿ ನಡೆದಿಲ್ಲ. ಜೀವವೈವಿಧ್ಯದ ನಾಶ, ನೆಲದ ಗುಣಮಟ್ಟದ ಕುಸಿತ ಹಾಗೂ ವನ್ಯಪ್ರಾಣಿಗಳ ನಾಶಗಳಂತಹ ಸಮಸ್ಯೆಗಳನ್ನು ತಡೆಯಲು ನಾವು ಮಾಡಬೇಕಾದುದು ಬಹಳಷ್ಟಿದೆ. ಕೃಷಿಗೆ ಉಪಯೋಗಿಸುತ್ತಿರುವ ನೆಲದಲ್ಲಿ ಸುಮಾರು ಐದನೆ ಒಂದರಷ್ಟು ಭಾಗದಲ್ಲಿ ಕಳೆದ ಹದಿನೈದು ವರ್ಷಗಳಲ್ಲಿ ನಿರಂತರವಾಗಿ ಫಲವತ್ತತೆಯು ಕುಸಿತವಾಗುತ್ತಿದ್ದು ಇದು ದಕ್ಷಿಣ ಅಮೇರಿಕ ಮತ್ತು ಆಫ್ರಿಕದ ದೇಶಗಳಲ್ಲಿ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಅರಣ್ಯ ಮತ್ತು ವನ್ಯಜೀವಿಗಳ ನಾಶ ಅವ್ಯಾಹತವಾಗಿ ಮುಂದುವರೆದಿದ್ದು, ಇದರಿಂದಾಗಿ ಮರುಭೂಮೀಕರಣ ಮತ್ತು ವಾತಾವರಣದ ಬದಲಾವಣೆಗಳು ಹೆಚ್ಚಲಿದೆ.

ಮೇಲಿನ ಹಲವು ಸಮಸ್ಯೆಗಳ ಹಿನ್ನೆಲೆಯಲ್ಲಿ ಸುಸ್ಥಿರ ಅಭಿವೃದ್ಧಿಯ ಈ ಗುರಿಯಲ್ಲಿ ಹಲವು ಪ್ರಮುಖ ಉಪಕ್ರಮಗಳಮೇಲೆ ಒತ್ತು ನೀಡಲಾಗಿದೆ. 2030ರೊಳಗೆ ಮುರುಭೂಮೀಕರಣದ ಪ್ರಕ್ರಿಯೆಯನ್ನು ತಡೆಯಬೇಕೆಂದೂ ಮತ್ತು ಮಣ್ಣಿನ ಫಲವತ್ತತೆಯನ್ನು ರಕ್ಷಿಸಲು ಕ್ರಮಕೈಗೊಳ್ಳಬೇಕೆಂದೂ ಈ ಗುರಿಯು ಎಲ್ಲ ದೇಶಗಳಿಗೆ ಸೂಚಿಸುತ್ತದೆ. ಹಾಗೆಯೇ ಅರಣ್ಯ ಸಂರಕ್ಷಣೆ, ನದಿಗಳು ಮತ್ತು ನೀರಿನ ಮೂಲಗಳ ರಕ್ಷಣೆ, ಬೆಟ್ಟ ಪ್ರದೇಶಗಳ ಜೀವವೈವಿಧ್ಯದ ರಕ್ಷಣೆ ಮತ್ತು ಇತರೆ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ವ್ಯವಸ್ಥಾಪನೆಗೆ ಅಂತಾರಾಷ್ಟ್ರೀಯ ಒಪ್ಪಂದಗಳ ಅನುಸಾರ ಎಲ್ಲ ದೇಶಗಳೂ ನೀತಿಗಳು ಮತ್ತು ಕಾನೂನುಗಳನ್ನು ರಚಿಸಿ ಅನುಷ್ಠಾನಗೊಳಿಸಬೇಕೆಂದೂ ಆಶಿಸುತ್ತದೆ. ಅಳಿವಿನಂಚಿನಲ್ಲಿರುವ ಪ್ರಾಣಿಗಳು ಮತ್ತು ಸಸ್ಯಗಳನ್ನು ಗುರುತಿಸಿ ರಕ್ಷಿಸುವುದು, ಪರಿಸರಕ್ಕೆ ಧಕ್ಕೆ ತರಬಲ್ಲ ಯಾವುದೇ ಹೊಸ ತಳಿಗಳನ್ನು ಅಭಿವೃದ್ಧಿಪಡಿಸದಿರುವುದು ಮತ್ತು ಬೆಳೆಸದಿರುವುದು, ಅರಣ್ಯೋತ್ಪನ್ನಗಳು ಹಾಗೂ ಪ್ರಾಣಿಪಕ್ಷಿಗಳ ಕಳ್ಳಸಾಗಣೆಯನ್ನು ತಡೆಯುವುದು ಮುಂತಾದುವುಗಳಿಗೆ 2020ರ ಅಂತ್ಯದೊಳಗಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕೆಂದೂ ಈ ಗುರಿಯು ವಿಧಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ಮೇಲೆ ಹೇಳಿದ ನಿರ್ದಿಷ್ಟ ಗುರಿಗಳನ್ನು ತಲುಪುವುದು ಸಾಧ್ಯವಾಗುವಂತೆ ಈ ಚಟುವಟಿಕೆಗಳಿಗೆ ಸರಕಾರಗಳು ಹೆಚ್ಚಿನ ಅನುದಾನಗಳನ್ನು ನಿಗದಿಪಡಿಸಬೇಕೆಂದೂ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಪ್ಪಂದಗಳನ್ನು ಮಾಡಿಕೊಂಡು,

ಪರಸ್ಪರ ಸಹಕಾರದೊಂದಿಗೆ ಭೂಮಿಯಮೇಲಿನ ಜೀವೈವಿಧ್ಯದ ರಕ್ಷಣೆಯ ಕೆಲಸಗಳನ್ನು ಮಾಡಬೇಕೆಂದೂ ಎಸ್‌ಡಿಜಿ 15ರಲ್ಲಿ ಸೂಚಿಸಲಾಗಿದೆ.

ಭೂಮಿಯ ಮೇಲಿನ ಎಲ್ಲ ಜೀವಿಗಳನ್ನು ರಕ್ಷಿಸುವುದು ಮತ್ತು ಇದನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಎಲ್ಲ ಬಗೆಯ ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಮಿತಗೊಳಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ಬಗೆಗಿನ ಗುರಿಗಳನ್ನು ತಲುಪಬೇಕಾದರೆ ಎಲ್ಲ ಬಗೆಯ ಸಂಸ್ಥೆಗಳೂ ಮತ್ತು ವೈಯಕ್ತಿಕ ನೆಲೆಯಲ್ಲಿ ಪ್ರತಿ ವ್ಯಕ್ತಿಯೂ ತಮ್ಮ ಕೈಲಾದ ಕೆಲಸ ಮಾಡುವುದು, ಗುರಿಗಳನ್ನು ತಲುಪಲು ಸಹಕರಿಸುವುದು, ಗುರಿಗಳ ಬಗೆಗೆ ಜಾಗೃತಿ ಮೂಡಿಸುವುದು ಮುಂತಾದ ಕೆಲಸಗಳಲ್ಲಿ ತೊಡಗಬೇಕಾಗುತ್ತದೆ. ಸಹಜವಾಗಿಯೇ ಸಹಕಾರಿ ಸಂಘಗಳಿಂದಲೂ ನಿರ್ದಿಷ್ಟ ಕಾರ್ಯಚಟುವಟಿಕೆಗಳನ್ನು ಈ ಗುರಿಯು ಬಯಸುತ್ತದೆ. ಜಗತ್ತಿನ ಹಲವೆಡೆ ಈಗಾಗಲೇ ಸಹಕಾರಿ ಸಂಘಗಳು ಭೂಮಿಯ ಮೇಲಿನ ಜೀವವೈವಿಧ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಉದಾಹರಣೆಗೆ ಅರ್ಜೆಂಟೈನಾದ ಜುಜುಯ್ ಪ್ರಾಂತ್ಯದಲ್ಲಿ 109ಜನ ಸಣ್ಣ ಕೃಷಿಕರು ಸೇರಿ ಆರಂಭಿಸಿರುವ ಸಹಕಾರಿ ಸಂಘದ (Cauqueva) ಎಲ್ಲ ಸದಸ್ಯರೂ ತಮಗೆ ಸೇರಿದ ಭೂಮಿಯಲ್ಲಿ ಸ್ಥಳೀಯ ಸಸ್ಯಗಳನ್ನೇ ಬೆಳೆಯುತ್ತಿದ್ದಾರೆ. ಸಹಕಾರಿ ಸಂಘವೇ ನಡೆಸುವ ಸಣ್ಣ ಹೋಟೆಲ್‌ನಲ್ಲಿ ಒಟ್ಟು ಸೇರುವ ಈ ಕೃಷಿಕರು ಸ್ಥಳೀಯ ಬೆಳೆಗಳನ್ನು ಬೆಳೆಯುವುದರಿಂದ ಆಗುವ ಅನುಕೂಲಗಳನ್ನು ಚರ್ಚಿಸಿ ತಿಳಿದುಕೊಂಡು ಅದರಂತೆ ತಾವು ಬೆಳೆಯುವ ಬೆಳೆಗಳು ಮತ್ತು ತಮಗೆ ಸೇರಿದ ಪ್ರದೇಶದಲ್ಲಿ ಬೆಳೆಯುವ ಮರಗಿಡಗಳು ಇವೆಲ್ಲವೂ ಪಾರಂಪರಿಕವಾಗಿ ಬೆಳೆಯುತ್ತಿದ್ದ ಸ್ಥಳೀಯ ಸಸ್ಯಗಳೇ ಆಗುವಂತೆ ಮಾಡಿದ್ದಾರೆ. ಇಂಡೋನೇಶ್ಯಾದ ಸುಲವೆಸಿ ಪ್ರಾಂತ್ಯದಲ್ಲಿ ತೇಗದ ಮರಗಳನ್ನು ಬೆಳೆಯುವ ಕೃಷಿಕರು ತಮ್ಮದೇ ಸಹಕಾರಿ ಸಂಘವನ್ನು ಸ್ಥಾಪಿಸಿಕೊಂಡಿದ್ದು, ತೇಗದ ಮರಗಳ ನಾಶದಿಂದಾಗುವ ಪರಿಸರಹಾನಿ, ಈ ಮರಗಳ ಕಳ್ಳಸಾಗಣೆಯನ್ನು ತಡೆಯುವುದು, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಮೌಲ್ಯಕ್ಕೆ ಮಾರಾಟವಾಗುವ ಉತ್ತಮ ಗುಣಮಟ್ಟದ ಮರಗಳನ್ನು ಬೆಳೆಯುತ್ತ, ಆದಷ್ಟು ಕಡಿಮೆ ಮರಗಳಲ್ಲಿ ಹೆಚ್ಚಿನ ಗಳಿಕೆ ಸಾಧ್ಯವಾಗುವಂತೆ ಕಾರ್ಯತಂತ್ರ ರೂಪಿಸಿದ್ದಾರೆ. ಅಮೆರಿಕದ ಸಾಂತಕ್ರೂಜ್ ಮೌಂಟನ್ ಕಾರ್ಬನ್ ಕೋಆಪರೇಟಿವ್ ತನ್ನ ಸದಸ್ಯರಿಗೆ ಸುಸ್ಥಿರ ಅರಣ್ಯ ವ್ಯವಸ್ಥಾಪನೆಯ ಕುರಿತು ತರಬೇತಿ ನೀಡಿ ಅವರುಗಳು ಅರಣ್ಯಗಳನ್ನು ಬೆಳೆಯುವ ಮತ್ತು ಸಂರಕ್ಷಿಸುವ ಕೆಲಸದಲ್ಲಿ ತೊಡಗುವಂತೆ ಮಾಡಿರುವ ಜೊತೆಗೆ, ಅವರು ಬೆಳೆಸುವ ಅರಣ್ಯದ ಗುಣಮಟ್ಟದ ಮೇಲೆ ಕಾರ್ಬನ್ ಕ್ರೆಡಿಟ್‌ಗಳನ್ನು ನೀಡುವುದರ ಮೂಲಕ ಅವರ ದುಡಿಮೆಗೆ ಹೆಚ್ಚಿನ ಮೌಲ್ಯ ಸಿಗುವಂತೆ ಮಾಡುತ್ತಿದೆ. ರ್‍ವಾಂಡ ದೇಶದಲ್ಲಿನ ಸುಮಾರು 15 ಜೇನುಸಾಕಣಾ ಸಹಕಾರಿ ಸಂಘಗಳು ತಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಯುವ ಮತ್ತು ಸ್ಥಳೀಯ ಮರಗಿಡಗಳನ್ನು ರಕ್ಷಿಸುವುದರ ಮೂಲಕ ಸ್ಥಳೀಯ ಪರಿಸರದ ಗುಣಮಟ್ಟ ವೃದ್ಧಿಯಾಗುವಂತೆ ಮಾಡುವುದರ ಜೊಗೆಗೆ ಉತ್ತಮ ಗುಣಮಟ್ಟದ ಜೇನುತುಪ್ಪವನ್ನು ಉತ್ಪಾದನೆ ಮಾಡುವುದನ್ನೂ ಸಾಧ್ಯವಾಗಿಸಿಕೊಂಡಿದ್ದಾರೆ.

ಸಹಕಾರಿ ಸಂಘಗಳು ಭೂಮಿಯ ಮೇಲಿನ ಜೀವವೈವಿಧ್ಯವನ್ನು ಜತನಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕಿದೆ. ಇವುಗಳನ್ನು ತಮ್ಮ ವ್ಯವಹಾರ ಚಟುವಟಿಕೆಗಳ ಭಾಗವಾಗಿ ಮತ್ತು ತಮ್ಮ ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮಗಳ ಮೂಲಕ ಮಾಡುವುದು ಸಾಧ್ಯವಿದೆ. ಈ ಕೆಳಗೆ ಸೂಚಿಸಿರುವ ಕೆಲವು ಚಟುವಟಿಕೆಗಳನ್ನು ವಿವಿಧ ಸಹಕಾರಿ ಸಂಘಗಳು ಹಮ್ಮಿಕೊಳ್ಳಬಹುದಾಗಿದೆ.

1. ಕೃಷಿ ಸಹಕಾರಿ ಸಂಘಗಳು ಭೂಮಿಯ ಫಲವತ್ತತೆಯನ್ನು ರಕ್ಷಿಸುವ ಕುರಿತಂತೆ ಅಗತ್ಯ ಮಾಹಿತಿಗಳನ್ನು ತಮ್ಮ

ಸದಸ್ಯರಿಗೆ ನೀಡಲು ಕ್ರಮ ಕೈಗೊಳ್ಳಬಹುದು

2. ತಾವು ಬಳಸುವ ಮತ್ತು ಮಾರಾಟ ಮಾಡುವ ಸಾಮಗ್ರಿಗಳು ಪರಿಸರ ಪ್ರೇಮಿಯಾಗಿದ್ದು ಜಾಗತಿಕ ತಾಪಮಾನ ಏರಿಕೆಗೆ ಪೂರಕವಾಗಿಲ್ಲದಂತೆ ಎಲ್ಲ ಸಹಕಾರಿ ಸಂಘಗಳೂ ಕ್ರಮವಹಿಸಬಹುದು

3. ಭೂಮಿಯ ಮೇಲಿನ ಜೀವವೈವಿಧ್ಯದ ರಕ್ಷಣೆಗೆ ಪೂರಕವಾದ ಯೋಜನೆಗಳಿಗೆ ಉತ್ತೇಜನ ನೀಡುವಂತಹ ಪತ್ತಿನ ಯೋಜನೆಗಳು, ಮಾರುಕಟ್ಟೆ ಸಹಾಯ ಮುಂತಾದುವನ್ನು ಆಯಾ ಚಟುವಟಿಕೆಗಳಲ್ಲಿ ತೊಡಗಿರುವ ಸಹಕಾರಿ ಸಂಸ್ಥೆಗಳು ಹಮ್ಮಿಕೊಳ್ಳಬಹುದು

4. ಸಹಕಾರಿ ಸಂಘಕ್ಕೆ ಭೇಟಿ ನೀಡುವವರಿಗೆಲ್ಲ ಮಾಹಿತಿ ದೊರೆಯುವಂತೆ ಪರಿಸರ, ಜೀವವೈವಿಧ್ಯ, ಜಾಗತಿಕ ತಾಪಮಾನ ಮುಂತಾದ ವಿಷಯಗಳಬಗ್ಗೆ ಭಿತ್ತಿ ಪತ್ರಗಳನ್ನು ಪ್ರದರ್ಶಿಸುವುದು, ಕರಪತ್ರಗಳನ್ನು ಹಂಚುವುದು ಮುಂತಾದುವುಗಳನ್ನು ಮಾಡಬಹುದು.

5. ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟ, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ, ಸಂಯುಕ್ತ ರಾಷ್ಟ್ರ ಸಂಸ್ಥೆ ಮುಂತಾದುವುಗಳು ಕಾಲದಿಂದ ಕಾಲಕ್ಕೆ ಪ್ರಚುರ ಪಡಿಸುವ ಕಾರ್ಯತಂತ್ರಗಳು, ಇತರ ಸಹಕಾರಿ ಸಂಸ್ಥೆಗಳ ಅನುಕರಣೀಯ ಚಟುವಟಿಕೆಗಳ ಮಾಹಿತಿ ಮುಂತಾದುವುಗಳನ್ನು ಗಮನಿಸಿ ಅವುಗಳಲ್ಲಿ ಸಾಧ್ಯವಾದುವುಗಳನ್ನು ತಮ್ಮದೇ ರೀತಿಯಲ್ಲಿ ಅನುಷ್ಠಾನಗೊಳಿಸಲು ಪ್ರಯತ್ನಿಸಬಹುದು.

6. ಸ್ಥಳೀಯ ನೆಲೆಯಲ್ಲಿ ನಶಿಸಿ ಹೋಗುತ್ತಿರುವ ಪ್ರಾಣಿ, ಪಕ್ಷಿ, ಸಸ್ಯಗಳು ಹೀಗೆ ವಿವಿಧ ಜೀವವೈವಿಧ್ಯಗಳನ್ನು ಗುರುತಿಸಿ ಅವುಗಳನ್ನು ರಕ್ಷಿಸುವ ಚಟುವಟಿಕೆಗಳನ್ನು ನಡೆಸಬಹುದು

7. ಸಹಕಾರಿ ಸಂಸ್ಥೆಗಳು ತಮ್ಮ ಕಛೇರಿ, ವ್ಯಾಪಾರದ ಸ್ಥಳ ಮುಂತಾದುವುಗಳಿಗೆ ಸಂಬಂಧಿಸಿದ ಕಟ್ಟಡಗಳನ್ನು ಪರಿಸರ ಸ್ನೇಹಿಯನ್ನಾಗಿ ವಿನ್ಯಾಸಗೊಳಿಸಬಹುದು

ಭೂಮಿಯ ಮೇಲಿನ ಜೀವವೈವಿಧ್ಯದ ರಕ್ಷಣೆ ಎನ್ನುವುದು ಅತ್ಯಂತ ವಿಶಾಲವೂ, ವೈವಿಧ್ಯವೂ ಆದ ಪ್ರಕ್ರಿಯೆಯಾಗಿದ್ದು ಇದು ಒಂದಕ್ಕೊಂದು ಪೂರಕವಾದ ಹಲವು ಕಾರ್ಯತಂತ್ರಗಳಿಂದ ಮಾತ್ರವೇ ಸಾಧ್ಯವಾಗುವಂತಹುದು. ಹಾಗೆಯೇ ವ್ಯಕ್ತಿಗಳು, ಸಂಸ್ಥೆಗಳು, ಸರಕಾರಗಳು, ಪ್ರಜಾಸಮಾಜ ಈ ಎಲ್ಲರ ಅರಿವು ಮತ್ತು ಪೂರಕ ಪ್ರಯತ್ನಗಳಿಂದ ಮಾತ್ರವೇ ಸಾಧ್ಯವಾಗುವಂತಹುದು. ಆದುದರಿಂದ ಸಹಕಾರಿ ಸಂಘಗಳು ತಮ್ಮದೇ ನೆಲೆಯಲ್ಲಿ ತಮಗೆ ಸಾಧ್ಯವಾಗುವ ರೀತಿಯಲ್ಲಿ ಈ ಗುರಿಯ ಸಾಧನೆಗೆ ಸಹಕರಿಸಬಹುದು. ಪ್ರಕೃತಿ, ಪರಿಸರ, ಜೀವಜಂತುಗಳು, ಸಸ್ಯ ಸಂಪತ್ತು, ನೆಲ, ಜಲ, ಆಕಾಶ ಈ ಎಲ್ಲವುಗಳಿಗೆ ಅಥವ ಇವುಗಳಲ್ಲಿ ಯಾವುದಕ್ಕಾದರೂ ಅನುಕೂಲವಾಗುವಂತಹ ಯಾವುದೇ ಚಟುವಟಿಕೆ, ಎಷ್ಟು ಸಣ್ಣ ಪ್ರಮಾಣದಲ್ಲಿದ್ದರೂ ಸಹ ನಡೆಸಬಹುದು. ಈ ಭೂಮಿಯ ಹೊರೆ ಹೆಚ್ಚಾಗುವ ವೇಗ ಕಡಿಮೆಮಾಡುವ ಗುರಿಯಿಂದ ಕಾರ್ಯ ಪ್ರವೃತ್ತರಾಗುವುದುಮಾತ್ರ ಜವಾಬ್ದಾರಿಯುತ ಸಂಸ್ಥೆಗಳಾದ ಸಹಕಾರಿ ಸಂಘಟನೆಗಳು ನಿರ್ವಹಿಸಲೇಬೇಕಾದ ಜವಾಬ್ದಾರಿ.

16 PEACE, JUSTICE AND STRONG INSTITUTIONS

# ಎಸ್‌ಡಿಜಿ 16: ಶಾಂತಿ, ನ್ಯಾಯ ಮತ್ತು ಬಲಶಾಲಿ ಸಂಸ್ಥೆಗಳು

ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಎಲ್ಲರನ್ನೊಳಗೊಂಡ ಸಮಾಜದ ನಿರ್ಮಾಣವನ್ನು ಉತ್ತೇಜಿಸಿರಿ, ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡಿರಿ ಮತ್ತು ಎಲ್ಲ ಹಂತಗಳಲ್ಲೂ ಪರಿಣಾಮಕಾರಿಯಾದ, ಉತ್ತರದಾಯಿತ್ವ ಉಳ್ಳ ಮತ್ತು ಎಲ್ಲರನ್ನೂ ಒಳಗೊಂಡ ಸಂಸ್ಥೆಗಳನ್ನು ನಿರ್ಮಿಸಿರಿ ಎಂದು ಈ ಗುರಿಯಲ್ಲಿ ನಿರ್ದೇಶಿಸಲಾಗಿದೆ (Promote peaceful and inclusive societies for sustainable development, provide access to justice for all and build effective, accountable and inclusive institutions at all levels). ಖ್ಯಾತ ಆರ್ಥಿಕ ತಜ್ಞರಾದ ಅಮಾರ್ತ್ಯ ಸೇನ್‌ರವರು 'ಅಭಿವೃದ್ಧಿ ಎಂದರೆ ಶಾಂತಿ ಮತ್ತು ಅಭಿವೃದ್ಧಿ ಎಂದರೆ ಸ್ವಾತಂತ್ರ' ಎಂದು ವ್ಯಾಖ್ಯಾನಿಸಿದ್ದಾರೆ. ಸುಸ್ಥಿರ ಅಭಿವೃದ್ಧಿಯ ಬಗೆಗಿನ ಹದಿನಾರನೆಯ ಗುರಿಯು ಇದೇ ಅಂಶಗಳಮೇಲೆ ಒತ್ತು ನೀಡಿದೆ. ಜಗತ್ತಿನಾದ್ಯಂತ ಒಂದೆಡೆ ಆಧುನೀಕರಣ, ತಂತ್ರಜ್ಞಾನದಲ್ಲಿ ಹೊಸ ಹೊಸ ಅನ್ವೇಶಣೆಗಳು, ಆರ್ಥಿಕ ಬೆಳವಣಿಗೆ ಇವೆಲ್ಲ ನಡೆಯುತ್ತಿದೆಯಾದರೂ, ಇನ್ನೊಂದೆಡೆ ರಾಜಕೀಯ ಮತ್ತು ಧಾರ್ಮಿಕ ನೆಲೆಯಲ್ಲಿ ಯುದ್ಧಗಳು ಮತ್ತು ಹಿಂಸೆ, ಅಸಮಾನತೆ, ಮಾನವ ಹಕ್ಕುಗಳ ಉಲ್ಲಂಘನೆ ಇವೆಲ್ಲ ಘಟಿಸುತ್ತಿರುವದನ್ನೂ ಕಾಣುತ್ತಿದ್ದೇವೆ. ಆದುದರಿಂದ ನಿಜವಾದ ಅಭಿವೃದ್ಧಿ ಸಾಧ್ಯವಾಗಬೇಕಾದರೆ ಶಾಂತಿ ನೆಲೆಸಬೇಕು, ಎಲ್ಲರಿಗೂ ನ್ಯಾಯ ಸಿಗಬೇಕು ಮತ್ತು ಸಮಾಜಗಳು ಎಲ್ಲರನ್ನೂ ಒಳಗೊಂಡ ಸಮೂಹವಾಗಬೇಕೆಂದು ಸುಸ್ಥಿರ ಅಭಿವೃದ್ಧಿಯ ಗುರಿಯಲ್ಲಿ ತಿಳಿಸಲಾಗಿದೆ.

ಹಿಂಸೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ವಿವಿಧ ಕಾರಣಗಳ ಆಧಾರದಲ್ಲಿ ಸುಸ್ಥಿರ ಅಭಿವೃದ್ಧಿಯ ಈ ಗುರಿಯು 2030ರೊಳಗೆ ಸಾದಿಸಬೇಕಾದ ಕೆಲವು ಮುಖ್ಯ ಮೈಲಿಗಲ್ಲುಗಳನ್ನು ಈ ಕೆಳಗಿನಂತೆ ಹೆಸರಿಸಿದೆ.

1. ಎಲ್ಲ ಬಗೆಯ ಹಿಂಸೆ ಮತ್ತು ಅದರಿಂದಾಗುವ ಸಾವಿನ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬೇಕು.
2. ಮಕ್ಕಳ ಬಗೆಗಿನ ದುರ್ನಡತೆ, ಶೋಷಣೆ, ಮಕ್ಕಳ ಕಾನೂನು ಬಾಹಿರ ಕಳ್ಳಸಾಗಣೆ ಮುಂತಾದುವುಗಳೂ ಸೇರಿದಂತೆ ಮಕ್ಕಳ ಮೇಲಿನ ಎಲ್ಲ ರೀತಿಯ ಹಿಂಸೆ ಮತ್ತು ದೌರ್ಜನ್ಯವನ್ನು ಕೊನೆಗೊಳಿಸಬೇಕು
3. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್ಲರಿಗೂ ಸಮಾನವಾಗಿ ನ್ಯಾಯ ಪ್ರಕ್ರಿಯೆ ದೊರೆಯುವಂತೆ ಎಲ್ಲೆಡೆ ಕಾನೂನಾತ್ಮಕ ಆಡಳಿತವನ್ನು ಸಾಧ್ಯವಾಗಿಸಬೇಕು
4. ಕಾನೂನು ಬಾಹಿರ ನೆಲೆಯಲ್ಲಿ ನಡೆಯುತ್ತಿರುವ ಹಣಕಾಸಿನ ಮತ್ತು ಶಸ್ತ್ರಾಸ್ತ್ರಗಳ ಹರಿವನ್ನು ಮತ್ತು ಸಾಂಸ್ಥೀಕೃತ ಅಪರಾಧಗಳನ್ನು ಗಣನೀಯವಾಗಿ ಕಡಿಮೆಮಾಡಬೇಕು
5. ಎಲ್ಲ ರೀತಿಯ ಬ್ರಷ್ಟಾಚಾರ ಮತ್ತು ಲಂಚಗುಳಿತನವನ್ನು ನಿರ್ಮೂಲನೆ ಮಾಡಬೇಕು
6. ಎಲ್ಲ ಸಾಂಸ್ಥಿಕ ರಚನೆಗಳೂ ಪರಿಣಾಮಕಾರಿಯಾಗಿ, ಉತ್ತರದಾಯಿತ್ವ ಹೊಂದಿ ಪಾರದರ್ಶಕ ನೆಲೆಯಲ್ಲಿ ಕೆಲಸ ನಿರ್ವಹಿಸುವಂತೆ ಮಾಡಬೇಕು
7. ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಅಭಿವೃದ್ಧಿಶೀಲ ದೇಶಗಳ ಭಾಗವಹಿಸುವಿಕೆಯನ್ನು ವಿಸ್ತ್ರುತಗೊಳಿಸಬೇಕು ಮತ್ತು ಸಶಕ್ತಗೊಳಿಸಬೇಕು.
8. ಎಲ್ಲ ದೇಶಗಳಲ್ಲೂ ಪ್ರಜೆಗಳಿಗೆ ಮಾಹಿತಿ ಹಕ್ಕು ಮತ್ತು ಮೂಲಭೂತ ಸ್ವಾತಂತ್ರ ದತ್ತವಾಗುವಂತೆ ಮಾಡಬೇಕು
9. ಹಿಂಸೆ, ಭಯೋತ್ಪಾದನೆ ಮತ್ತು ಅಪರಾಧಗಳನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ಹಾಗೂ

10. ಜಗತ್ತಿನೆಲ್ಲೆಡೆ ಸುಸ್ಥಿರ ಅಭಿವೃದ್ಧಿಗಾಗಿ ತಾರತಮ್ಯ ರಹಿತವಾದ ನೀತಿಗಳು ಮತ್ತು ಕಾನೂನುಗಳನ್ನು ಜಾರಿಗೆ ತರಬೇಕು

ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ ಒತ್ತು ನೀಡಿರುವ ಮೇಲಿನ ಅಂಶಗಳನ್ನು ಗಮನಿಸಿದಾಗ ಜಗತ್ತಿನ ವಿವಿಧ ಭಾಗಗಳಲ್ಲಿ ಶಾಂತಿ ಸ್ಥಾಪನೆ ಮತ್ತು ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡಬೇಕಾದ ತುರ್ತು ಅಗತ್ಯ ಗಮನಕ್ಕೆ ಬರುತ್ತದೆ. ಸಹಜವಾಗಿಯೇ ಇಂತಹ ವಾತಾವರಣದ ನಿರ್ಮಾಣವು ಸಾಧ್ಯವಾಗಬೇಕಾದರೆ ಸಮುದಾಯಗಳು ಒಟ್ಟಾಗಿ ಮತ್ತು ಪರಸ್ಪರ ಕೊಡುಕೊಳ್ಳುವಿಕೆಯಿಂದ ಇರಬೇಕಾಗುತ್ತದೆ. ಇಂತಹ ಕೊಡುಕೊಳ್ಳುವಿಕೆಯು ಸಾಧ್ಯವಾಗಬೇಕಾದರೆ ಸಮುದಾಯವು ಒಟ್ಟಾಗಿ ಪರಸ್ಪರರ ಸಹಾಯಕ್ಕಾಗಿ ನಿರ್ಮಾಣಮಾಡಿಕೊಳ್ಳುವ ಸಾಂಸ್ಥಿಕ ರಚನೆಗಳ ಅಗತ್ಯವಿದೆ. ಅಂತೆಯೇ ಸಹಕಾರಿ ಸಂಸ್ಥೆಗಳ ಕಡೆಗೆ ಎಲ್ಲರ ಗಮನ ಹರಿಯುತ್ತಿದೆ. ಸಹಕಾರಿ ಸಂಸ್ಥೆಗಳು ಸಮುದಾಯ ಕಾಳಜಿಯನ್ನು ಒಂದು ಪ್ರಮುಖ ತತ್ವವಾಗಿ ಹೊಂದಿರುವ ಮತ್ತು ಸದಸ್ಯ ಸಮುದಾಯದ ಸಂಘಟಿತ ಸಂರಚನೆಯಾಗಿರುವುದರಿಂದ ಎಲ್ಲರ ಏಳಿಗೆ ಮತ್ತು ಎಲ್ಲರಿಗೂ ನ್ಯಾಯ ದೊರೆಯುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತವೆ.

ಶಾಂತಿ, ಸೌಹಾರ್ದತೆ ಮತ್ತು ನ್ಯಾಯುತ ವಾತಾವರಣ ನಿರ್ಮಾಣವಾಗಬೇಕಾದರೆ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ದೊರಕಿಸಿಕೊಡುವುದು ಅತ್ಯಂತ ಮುಖ್ಯ. ಈ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟವು 2009ರಲ್ಲಿ ಠರಾವೊಂದನ್ನು ಸರ್ವಾನುಮತದಿಂದ ಒಪ್ಪಿಕೊಂಡು, ಸಹಕಾರಿ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಪ್ರದೇಶದಲ್ಲಿನ ಜನಸಮುದಾಯಕ್ಕೆ ಆರ್ಥಿಕ ಭದ್ರತೆ ಒದಗಿಸುವ, ಶಾಂತಿ ಸೌಹಾರ್ದತೆಯ ಸ್ಥಾಪನೆಗೆ ಅನುವಾಗುವ, ಯಾವುದೇ ಬಗೆಯ ಹಿಂಸೆ ನಡೆಯದಂತೆ ಮಾಡುವ ಮತ್ತು ವಿಶೇಷವಾಗಿ ಸದಸ್ಯ ಸಮುದಾಯವು ಸಂತೃಪ್ತಿ ಮತ್ತು ಸುರಕ್ಷಿತವಾಗಿರುವಂತೆ ಮಾಡುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿದೆ.

**ಸಹಕಾರಿ ಸಂಸ್ಥೆಗಳ ಪಾತ್ರ:**

ಜಗತ್ತಿನಾದ್ಯಂತ ಹಲವಾರು ಸಹಕಾರ ಸಂಘಟನೆಗಳು ಈಗಾಗಲೇ ಸುಸ್ಥಿರ ಅಭಿವೃದ್ಧಿಯ ಬಗೆಗಿನ ಈ ಗುರಿಗೆ ಪೂರಕವಾದ ಚಟುವಟಿಕೆಗಳಲ್ಲಿ ನಿರತವಾಗಿರುವುದನ್ನು ಕಾಣಬಹುದಾಗಿದೆ. ಆಫ್ರಿಕದ ರ್‍ವಾಂಡ ದೇಶದಲ್ಲಿ ಹದಿನಾರು ಜನ ಮಹಿಳೆಯರು ಸೇರಿ ಆರಂಭಿಸಿದ ಬುರಂಗ ಸಹಕಾರಿ ಸಂಘವು ಈ ದಿಸೆಯಲ್ಲಿ ಒಂದು ಉತ್ತಮ ಉದಾಹರಣೆ. ರ್‍ವಾಂಡ ದೇಶದಲ್ಲಿ ಆಂತರಿಕ ಸಮುದಾಯ ಕಲಹದಿಂದಾಗಿ 1994ರಲ್ಲಿ ಸುಮಾರು ಹತ್ತು ಲಕ್ಷ ಜನ ಕೊಲ್ಲಲ್ಪಟ್ಟರು. ಹೊಡೆದಾಟದಲ್ಲಿ ತೊಡಗಿದ ಎರಡೂ ಸಮುದಾಯದ ಜನ ಕಷ್ಟ ಸಂಕಷ್ಟಗಳಿಗೆ ಒಳಗಾದರು. ಸ್ನೇಹಿತರು, ಒಂದೇ ಕುಟುಂಬದವರು ಸಹ ಪರಸ್ಪರ ಹೊಡೆದಾಡಿ ಸಾಯುವಂಥ ಭೀಕರ ಪರಿಸ್ಥಿತಿ ಅಲ್ಲಿ ನೆಲೆಸಿತ್ತು. ಇಂತಹ ಸಂದರ್ಭದಲ್ಲಿ ಹೊಡೆದಾಡುತ್ತಿದ್ದ ಎರಡೂ ಸಮುದಾಯದ ಸದಸ್ಯರನ್ನೇ ಸೇರಿಸಿ ಆರಂಭಿಸಿದ ಈ ಸಹಕಾರಿ ಸಂಘವು ಕಲೆ ಮತ್ತು ಕುಶಲ ಸಾಮಗ್ರಿಗಳ ಮೂಲಕ ಹಲವು ಕುಟುಂಬಗಳಿಗೆ ಆರ್ಥಿಕ ಭದ್ರತೆ ಒದಗಿಸುವುದರ ಜೊತೆಗೆ, ಎರಡೂ ಸಮುದಾಯದ ಜನಗಳ ನಡುವೆ ಮಾತುಕತೆಗಳು ನಡೆದು, ಸೌಹಾರ್ದಯುತ ವಾತಾವರಣ ನಿರ್ಮಾಣವಾಗಿ ತಮ್ಮ ಪರಿಸರದಲ್ಲಿ ಸಾಮಾಜಿಕ ಭದ್ರತೆ ನೆಲೆಸುವಂತೆ ಮಾಡುವಲ್ಲಿಯೂ ಉತ್ತಮ ಸೇವೆ ಸಲ್ಲಿಸಿದೆ.

ಯೂರೋಪ್‌ನ ಬೋಸ್ನಿಯದಲ್ಲಿ ಇಟಲಿಯ ಸಹಕಾರಿ ಸಂಘಟನೆಯ ಸಹಾಯದಿಂದ ಆರಂಭಿಸಿದ ಬಹು ಜನಾಂಗೀಯ ಕೃಷಿ ಸಹಕಾರಿ ಸಂಘವೂ ಇಂತಹುದೇ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ತೊಂಭತ್ತರ ದಶಕದ ಆರಂಭದಲ್ಲಿ ಬೋಸ್ನಿಯ ಮತ್ತು ಯುಗೋಸ್ಲೋವಿಯಾ ದೇಶಗಳ ನಡುವೆ ನಡೆದ ಜನಾಂಗೀಯ ಆಂದೋಲನದಲ್ಲಿ ಹಿಂಸಾಚಾರ ನಡೆದು, ಸಮುದಾಯಗಳ ನಡುವೆ ವೈಮನಸ್ಯ ಹೆಚ್ಚಾಗಿ ಸಾಮಾಜಿಕ ಅಶಾಂತಿ ನೆಲೆಸಿದ್ದ ಸಂದರ್ಭದಲ್ಲಿ, ಈ ಸಹಕಾರಿ ಸಂಘವು ಸಾಮೂಹಿಕ ನೆಲೆಯಲ್ಲಿ ಕೃಷಿ ಚಟುವಟಿಕೆಗಳನ್ನು ಸಂಘಟಿಸುತ್ತಾ ಸ್ಥಳೀಯ ಸಮುದಾಯಗಳಿಗೆ ಆರ್ಥಿಕ ಆಸರೆ ನೀಡಿದುದರ ಜೊತೆಗೆ, ಕಲಹದಲ್ಲಿ ನಿರತರಾಗಿದ್ದ ವಿವಿಧ ಜನಾಂಗದ ಜನರನ್ನೇ ಒಟ್ಟು ಸೇರಿಸಿ, ಅವರುಗಳು ಒಟ್ಟಾಗಿ ಆರ್ಥಿಕ ಚಟುವಟಿಕೆಗಳಲ್ಲಿ ನಿರತರಾಗುವಂತೆ ಹಾಗೂ ಈ ಪ್ರಕ್ರಿಯೆಯ ಜೊತೆಗೇ ಪರಸ್ಪರ ಮಾತುಕತೆಯ ಮೂಲಕ ತಮ್ಮ ಅನುಮಾನಗಳು ಮತ್ತು ಅಪನಂಬಿಕೆಗಳನ್ನು ತೊಡೆದು ಸೌಹಾರ್ದಯುತವಾಗಿ ಬಾಳುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಇದೇರೀತಿ ಆಂತರಿಕ ಕಲಹ ಮತ್ತು ಸಮುದಾಯಗಳ ನಡುವಿನ ಹಿಂಸಾಚಾರಗಳು ನಡೆಯುತ್ತಿರುವ

ಗ್ವಾಟೆಮಾಲ ಮತ್ತು ಸಿರಿಯ ದೇಶಗಳಲ್ಲಿ ಕೂಡ ಸಹಕಾರಿ ಸಂಘಟನೆಗಳು ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ಮೂಲಕ ಜನಾಂಗೀಯ ಕಲಹದಿಂದಾಗಿ ಪರಸ್ಪರ ನಂಬಿಕೆ ಕಳೆದುಕೊಂಡ ಸಮುದಾಯದ ಪ್ರತಿನಿಧಿಗಳನ್ನು ಒಟ್ಟು ಸೇರಿಸಿ, ಪರಸ್ಪರ ಸಹಯೋಗದಲ್ಲಿ ಆರ್ಥಿಕ ಚಟುವಟಿಕೆಗಳನ್ನು ನಡೆಸುವಂತೆ ಮಾಡುತ್ತಾ ಪರೋಕ್ಷವಾಗಿ ಶಾಂತಿ ಮತ್ತು ನ್ಯಾಯಯುತ ಸಮಾಜದ ನಿರ್ಮಾಣ ಕಾರ್ಯದಲ್ಲಿ ತೊಡಗಿವೆ.

ಹೀಗೆಯೇ ಮಾನವ ಕಳ್ಳಸಾಗಾಣಿಕೆಗೆ ಸಿಲುಕಿ ಯಾವುದೋ ದೇಶದಲ್ಲಿ ಅನಾಥವಾಗಿ, ಅನಧಿಕೃತವಾಗಿ ಇರಬೇಕಾಗಿ ಬಂದವರು, ಒಂದು ದೇಶದಿಂದ ಇನ್ನೊಂದು ದೇಶಕ್ಕೆ ನಿರಾಶ್ರಿತರಾಗಿ ಹೋದವರು ಮುಂತಾದವರಿಗೆ ಕೂಡ ಸಹಕಾರಿ ಸಂಸ್ಥೆಗಳು ಸಹಾಯ ಮಾಡುತ್ತಿರುವುದನ್ನು ಕಾಣಬಹುದು. ಇತ್ತೀಚಿನ ಒಂದು ಉದಾಹರಣೆ ಎಂದರೆ ಬರ್ಮಾ ದೇಶದಿಂದ ಬಾಂಗ್ಲಾದೇಶಕ್ಕೆ ನಿರಾಶ್ರಿತವಾಗಿ ಬಂದಿರುವ ರೊಹಿಂಗ್ಯಾ ಸಮುದಾದಯದ ಜನರಿಗೆ ಭದ್ರತೆ ಒದಗಿಸುವ ನೆಲೆಯಲ್ಲಿ ರೊಹಿಂಗ್ಯಾ ಮಹಿಳೆಯರನ್ನು ಸೇರಿಸಿ ಒಂದು ಉತ್ಪಾದಕ ಸಹಕಾರಿ ಸಂಘವನ್ನು ಸ್ಥಾಪಿಸಲಾಗಿದ್ದು, ಈ ಸಹಕಾರಿ ಸಂಘವು ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಿ, ಅವರಿಂದ ಸಿದ್ಧ ಉಡುಪುಗಳನ್ನು ತಯಾರಿಸಿ ಮಾರುತ್ತಾ, ಈ ನಿರಾಶ್ರಿರು ಕೇವಲ ಸರಕಾರ ನೀಡುವ ಅನ್ನಾಹಾರವನ್ನೇ ಅವಲಂಬಿಸುವ ಬದಲಿಗೆ, ತಾವೇ ದುಡಿಯುತ್ತ, ಸ್ವಾವಲಂಬಿಗಳಾಗಿ ಹೆಚ್ಚಿನ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಪಡೆಯಲು ಕಾರಣವಾಗಿದೆ.

ಮೇಲೆ ತಿಳಿಸಿದ ಎಲ್ಲ ಗುರಿಗಳು ಮತ್ತು ಜಾಗತಿಕ ನೆಲೆಯಲ್ಲಿ ಹಲವು ಸಹಕಾರಿ ಸಂಘಗಳ ಚಟುವಟಿಕೆಗಳ ಆದಾರದಲ್ಲಿ, ನಮ್ಮ ಸಹಕಾರಿ ಸಂಘಗಳು ಗಮನಿಸಬೇಕಾದ ಕೆಲವು ಅಂಶಗಳು ಮತ್ತು ಕೈಗೆತ್ತಿಕೊಳ್ಳಬಹುದಾದ ಚಟುವಟಿಕೆಗಳನ್ನು ಈ ಕೆಳಗೆ ಪಟ್ಟಿಮಾಡಲಾಗಿದೆ.

1. ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯು ಶಾಂತಿಯುತ ಮತ್ತು ನ್ಯಾಯಯುತ ಸಮಾಜದ ಬುನಾದಿ ಎಂಬುದನ್ನು ಅರಿಯಬೇಕು.
2. ಸಹಕಾರಿ ಸಂಘಗಳು ತಮ್ಮ ಭೌಗೋಳಿಕ ಮತ್ತು ಕಾರ್ಯ ವ್ಯಾಪ್ತಿಯ ನೆಲೆಯಲ್ಲಿ ಸದಸ್ಯ ಸಮುದಾಯದ ಎಲ್ಲ ಸದಸ್ಯರಿಗೆ ಆರ್ಥಿಕ ಮತ್ತು ಸಾಮಾಜಿಕ ಶಕ್ತಿ ನೀಡುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು
3. ಸಮುದಾಯದಲ್ಲಿ ವಿವಿಧ ಕಾರಣಗಳಿಂದಾಗಿ ಪ್ರತ್ಯೇಕವಾದವರು, ಶೋಷಣೆಗೊಳಗಾದವರು ಮತ್ತು ನಿರಾಶ್ರಿತರಾದವರನ್ನು ಗುರುತಿಸಿ ಅವರಿಗೆ ಸ್ವಾವಲಂಬಿಕಗಳಾಗಿ ಬದುಕುವ ಮಾರ್ಗವನ್ನು ಒದಗಿಸಿಕೊಡುವಂತಹ ಯೋಜನೆಗಳನ್ನು ಆರಂಭಿಸಬಹುದು
4. ಮಕ್ಕಳು, ಮಹಿಳೆಯರು ಮತ್ತು ಸಾಮಾಜಿಕ ನೆಲೆಯಲ್ಲಿ ಅಂಚಿನಲ್ಲಿರುವ ಜನರ ಅಗತ್ಯಗಳನ್ನು ಗುರುತಿಸಿ ಅವುಗಳನ್ನು ಸಹಕಾರಿ ಸಂಘಗಳ ಮೂಲಕ ಹೇಗೆ ಒದಗಿಸಬಹದೆಂಬ ಬಗ್ಗೆ ಯೋಚಿಸಿ ಕಾರ್ಯ ತಂತ್ರಗಳನ್ನು ರೂಪಿಸಬಹುದು
5. ತಮ್ಮ ಪರಿಸರದಲ್ಲಿ ಯಾವುದೇ ಹಿಂಸಾಚಾರ, ಸಮುದಾಯಗಳ ನಡುವಿನ ಅಪನಂಬಿಕೆ, ಶೋಷಣೆ ಮುಂತಾದುವುಗಳು ನಡೆಯುವುದು ಗಮನಕ್ಕೆ ಬಂದಾಗ ಅದನ್ನು ಕಡಿಮೆಮಾಡುವ ಕುರಿತಂತೆ ವಿವಿಧ ಸಂಘಟನೆಗಳಿಗೆ ಸಹಕರಿಸಬಹುದು
6. ದೇಶದ ಕಾನೂನಿನನ್ವಯ ಎಲ್ಲರಿಗೂ ಲಭ್ಯವಾಗುವ ಸಾಮಾನ್ಯ ಅವಕಾಶಗಳು ಮತ್ತು ಸವಲತ್ತುಗಳಿಂದ ಯಾರಾದರೂ ವಂಚಿತರಾಗುತ್ತಿದ್ದಲ್ಲಿ, ಅಂತಹ ಜನರಿಗೆ ಸಹಾಯಮಾಡುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು
7. ಅಂತಾರಾಷ್ಟ್ರೀಯ ನೆಲೆಯಲ್ಲಿ ನಡೆಯುತ್ತಿರುವ ಭಯೋತ್ಪಾದನೆ, ಮಾನವ ಕಳ್ಳಸಾಗಣೆ, ಮುಗ್ಧ ಜನರನ್ನು ಮೋಸಗೊಳಿಸುವ ಯಾವುದೇ ಚಟುವಟಿಕೆಗಳು ಗಮನಕ್ಕೆ ಬಂದರೆ ಅವುಗಳನ್ನು ಸೂಕ್ತ ಮೂಲಗಳಿಗೆ ತಿಳಿಸಬಹುದು ಹಾಗೂ ಅಂತಹ ಚಟುವಟಿಕೆಗಳಿಂದಾಗಿ ಕಷ್ಟಕ್ಕೆ ಸಿಲುಕಿರುವವರಿಗೆ ತಾತ್ಕಾಲಿಕ ಆಶ್ರಯ ದೊರೆಯುವಂಥ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು, ಸಹಾಯ ನೀಡುವುದು ಮತ್ತು ಸಾಧ್ಯವಾದಾಗ ತಾವೇ ಅಂತಹ ಕಾರ್ಯಕ್ರಮಗಳನ್ನು ಆರಂಭಿಸುವ ಕೆಲಸ ಮಾಡಬಹುದು.

# ಎಸ್‌ಡಿಜಿ 17: ಸುಸ್ಥಿರ ಅಭಿವೃದ್ಧಿಗಾಗಿ ಜಾಗತಿಕ ಪಾಲುದಾರಿಕೆ

ಗುರಿಗಳ ಅನುಷ್ಠಾನದ ಪರಿಕರಗಳನ್ನು ಶಕ್ತಿಯುತಗೊಳಿಸಿರಿ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಜಾಗತಿಕ ಪಾಲುದಾರಿಕೆಯನ್ನು ಪುನರುಜ್ಜೀವನಗೊಳಿಸಿ (Strengthen the means of implementation and revitalize the global partnership for sustainable development) ಎಂದು ಕರೆ ನೀಡಿರುವ ಈ ಗುರಿಯು ಸುಸ್ಥಿರ ಅಭಿವೃದ್ಧಿಯ ಸಾಧನೆಗೆ ಎಲ್ಲರ ಸಹಕಾರ, ಪಾಲುದಾರಿಕೆ ಅಗತ್ಯವೆನ್ನುವುದನ್ನು ಒತ್ತಿ ಹೇಳುತ್ತದೆ. ಸುಸ್ಥಿರ ಅಭಿವೃದ್ಧಿಯ ಕುರಿತಂತೆ ಈವರೆಗೆ ವಿವರಿಸಿದ ಹದಿನಾರು ಗುರಿಗಳನ್ನು ಸೂಕ್ಷ್ಮವಾಗಿ ಗಮನಿಸಿಸಿದಾಗ ಅವುಗಳ ವ್ಯಾಪ್ತಿಯು ಅತ್ಯಂತ ವಿಶಾಲವೂ, ಸಾರ್ವತ್ರಿಕವೂ ಆಗಿರುವುದನ್ನು ಅರಿಯಬಹುದು. ಸಹಜವಾಗಿಯೇ ಈ ಎಲ್ಲ ಗುರಿಗಳ ಸಾಧನೆಗೆ ಹಲವು ಮೂಲಗಳಿಂದ ಹಲವು ರೀತಿಯ ಭಾಗವಹಿಸುವಿಕೆ ಅಗತ್ಯವಾಗುತ್ತದೆ. ಈ ಗುರಿಗಳು ಪರಸ್ಪರ ಪೂರಕವೂ, ಒಂದನ್ನೊಂದು ಅವಲಂಬಿಸಿರುವುವೂ ಆಗಿರುವುದರಿಂದ ಹಲವು ಗುರಿಗಳನ್ನು ಒಟ್ಟಾಗಿ ಸಾಧಿಸಬೇಕಾಗುತ್ತದೆ. ಈ ಗುರಿಗಳ ಸಾಧನೆಯತ್ತ ಕಾರ್ಯೋನ್ಮುಖರಾಗಲು ಹಲವುರೀತಿಯ ಸಂಪನ್ಮೂಲಗಳು, ವೈವಿಧ್ಯಮಯ ಪರಿಣಿತಿಗಳು, ರಾಜಕೀಯ ಬದ್ಧತೆ, ವ್ಯಕ್ತಿ ಮತ್ತು ಸಂಸ್ಥೆಗಳ ಮಟ್ಟದಲ್ಲಿ ಸಹಕಾರ ಇವೆಲ್ಲ ಅಗತ್ಯವಾಗುತ್ತದೆ. ಆದುದರಿಂದಲೇ ಸುಸ್ಥಿರ ಅಭಿವೃದ್ಧಿಯ ಹದಿನೇಳನೇ ಗುರಿಯಲ್ಲಿ ಜಾಗತಿಕ ಪಾಲುದಾರಿಕೆಯ ಮೇಲೆ ಒತ್ತು ನೀಡಲಾಗಿದೆ.

ಬೇರೆಲ್ಲ ಗುರಿಗಳ ಸಾಧನೆಗೆ ಮೂಲ ಶಕ್ತಿಯನ್ನು ಒದಗಿಸುವ ಮತ್ತು ಅಗತ್ಯ ವಾತಾವರಣವನ್ನು ನಿರ್ಮಿಸುವ ಉದ್ದೇಶವನ್ನು ಈ ಗುರಿ ಹೊಂದಿರುವುದರಿಂದ, ಬೇರೆಲ್ಲ ಗುರಿಗಳಿಗಿಂತ ಹೆಚ್ಚಿನ ಉಪಗುರಿಗಳನ್ನು ಇದರಲ್ಲಿ ಸೇರಿಸಲಾಗಿದೆ. ಐದು ಪ್ರಮುಖ ಶೀರ್ಷಿಕೆಗಳಲ್ಲಿ ವಿವರಿಸಿರುವ ಹತ್ತೊಂಭತ್ತು ಉಪಗುರಿಗಳು ಜಾಗತಿಕ ನೆಲೆಯಲ್ಲಿ ಸಹಕಾರ, ಪಾಲುದಾರಿಕೆ, ಹಂಚಿಕೆ ಮತ್ತು ಸಾಮೂಹಿಕ ನೆಲೆಯಲ್ಲಿ ಕೆಲಸ ನಿರ್ವಹಿಸಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತವೆ. ಸಂಯುಕ್ತ ರಾಷ್ಟ್ರ ಸಂಸ್ಥೆಯು ವಿವರಿಸಿರುವ ಈ ಉಪಗುರಿಗಳ ಮುಖ್ಯಾಂಶಗಳನ್ನು ಈ ಕೆಳಗೆ ನೀಡಲಾಗಿದೆ.

**ಅ. ಹಣಕಾಸು:**

17.1 ಅಭಿವೃದ್ಧಿಶೀಲ ದೇಶಗಳಿಗೆ ಅಂತಾರಾಷ್ಟ್ರೀಯ ನೆರವೂ ಸೇರಿದಂತೆ, ಎಲ್ಲ ದೇಶಗಳಲ್ಲೂ ಆಂತರಿಕ ಸಂಪನ್ಮೂಲದ ಕ್ರೋಢೀಕರಣವನ್ನು ಮತ್ತು ತರಿಗೆ ಹಾಗೂ ಮತ್ತಿತರ ಆದಾಯ ಮೂಲಗಳನ್ನು ಉತ್ತಮಪಡಿಸುವ ಆಂತರಿಕ ಶಕ್ತಿಯನ್ನು ಹೆಚ್ಚಿಸುವುದು

17.2 ಎಲ್ಲ ಅಭಿವೃದ್ಧಿಹೊಂದಿದ ದೇಶಗಳೂ ಅಧಿಕೃತ ಅಭಿವೃದ್ಧಿ ಸಹಾಯದ (ಅಫಿಶಿಯಲ್ ಡೆವೆಲಪ್‌ಮೆಂಟ್ ಅಸಿಸ್ಟೆನ್ಸ್) ಬಗೆಗಿನ ತಮ್ಮ ಬದ್ಧತೆಯನ್ನು ಗೌರವಿಸುವುದು ಮತ್ತು ಈ ದೇಶಗಳು ತಮ್ಮ ಆದಾಯದ ಕನಿಷ್ಟ ಶೇಕಡ 0.7ರಷ್ಟನ್ನು ಅಭಿವೃದ್ಧಿ ಸಹಾಯ ನೀಡಲು ಬಳಸುವುದು ಮತ್ತು ಇದರಲ್ಲಿ ಕನಿಷ್ಟ ಶೇಕಡ 0.20ರಷ್ಟನ್ನು ಅತಿ ಹಿಂದುಳಿದ ದೇಶಗಳಿಗೆ ನೀಡುವುದು

17.3 ಅಭಿವೃದ್ಧಿಶೀಲ ದೇಶಗಳಿಗೆ ಈಗಿರುವುದಕ್ಕಿಂತ ಹೆಚ್ಚಿನ ಮತ್ತು ವೈವಿಧ್ಯಮಯ ಮೂಲಗಳಿಂದ ಅಧಿಕ ಹಣಕಾಸಿನ ನೆರವನ್ನು ಒದಗಿಸುವುದು

17.4 ಅಭಿವೃದ್ಧಿಶೀಲ ದೇಶಗಳು ದೂರಗಾಮೀ ನೆಲೆಯಲ್ಲಿ ಸಾಲದ ಮರುಪಾವತಿಯ ಕುರಿತಂತೆ ಸುಸ್ಥಿರತೆಯನ್ನು ಸಾಧಿಸಲು ಅನುವಾಗುವಂತೆ ಸಾಲ ಪಾವತಿಗೆ ಹಣಕಾಸಿನ ನೆರವು, ಸಾಲ ಪಾವತಿಯ ಅವಧಿ ವಿಸ್ತರಣೆ, ಸಾಲ ಪಾವತಿಯಿಂದ ವಿನಾಯಿತಿ ಹೀಗೆ ಹಲವು ರೀತಿಯಿಂದ ನೆರವು ಒದಗಿಸುವುದು ಮತ್ತು ಅತಿ ಹೆಚ್ಚು ಸಾಲದ ಹೊರೆಯಿಂದ ಬಳಲುತ್ತಿರುವ ಅತಿ ಬಡ ದೇಶಗಳ ಸಾಲದ ಒತ್ತಡವನ್ನು ತಗ್ಗಿಸಲು ಕ್ರಮ ಕೈಗೊಳ್ಳುವುದು

17.5 ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಂಡವಾಳ ಹೂಡಿಕೆ ನೀತಿಗಳನ್ನು ಅನುಷ್ಠಾನಗೊಳಿಸುವುದು

**ಆ. ತಂತ್ರಜ್ಞಾನ:**

17.6 ವಿಜ್ಞಾನ, ತಂತ್ರಜ್ಞಾನ ಮತ್ತು ಅವಿಶ್ಕಾರಗಳ ಲಾಭ ದೊರಕಿಸಿಕೊಡುವುದಕ್ಕೆ ಸಂಬಂಧಿಸಿದಂತೆ ಉತ್ತರ–ದಕ್ಷಿಣ, ದಕ್ಷಿಣ–ದಕ್ಷಿಣ, ಮತ್ತು ತ್ರಿಕೋನ ಪ್ರಾದೇಶಿಕ ಹಾಗೂ ಅಂತಾರಾಷ್ಟ್ರೀಯ ಸಹಕಾರವನ್ನು ವೃದ್ಧಿಸುವುದು ಮತ್ತು ಲಭ್ಯ ಜ್ಞಾನವನ್ನು ಸಮರ್ಪಕವಾಗಿ ಎಲ್ಲರೂ ಉಪಯೋಗಿಸುವುದು ಸಾಧ್ಯವಾಗುವಂತೆ ಸಂಯೋಜನೆಗೊಳಿಸುವುದು.

17.7 ಪರಿಸರಕ್ಕೆ ಪೂರಕವಾದ ತಂತ್ರಜ್ಞಾನದ ಅಭಿವೃದ್ಧಿ, ವರ್ಗಾವಣೆ, ಪ್ರಸರಣೆ ಮತ್ತು ಉತ್ಪಾದನೆಯು ಅಭಿವೃದ್ಧಿಶೀಲ ದೇಶಗಳಿಗೆ ಸುಲಭವಾಗಿ ಸಾಧ್ಯವಾಗುವಂತೆ ಉತ್ತೇಜಿಸುವುದು

17.8 ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ತಂತ್ರಜ್ಞಾನ ಬ್ಯಾಂಕ್ ಮತ್ತು ವಿಜ್ಞಾನ, ತಂತ್ರಜ್ಞಾನ ಹಾಗೂ ಅವಿಶ್ಕಾರ ಸಾಮರ್ಥ್ಯ ಅದರಲ್ಲೂ ವಿಶೇಷವಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಕಾರ್ಯಗತಗೊಳಿಸುವುದು.

**ಇ. ಸಾಮರ್ಥ್ಯ ವೃದ್ಧಿ:**

17.9 ಎಲ್ಲ ಅಭಿವೃದ್ಧಿ ದೇಶಗಳಲ್ಲಿ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಅಗತ್ಯವಾದ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಮತ್ತು ಗುರಿಗಳಿಗನುಗುಣವಾಗಿ ವೃದ್ಧಿಸಲು ಅನುವಾಗುವಂತೆ ಅಗತ್ಯ ಅಂತಾರಾಷ್ಟ್ರೀಯ ನೆರವನ್ನು ವೃದ್ಧಿಸುವುದು.

**ಈ. ವ್ಯಾಪಾರ:**

17.10 ವಿಶ್ವ ವ್ಯಾಪಾರ ಸಂಘಟನೆಯಡಿಯಲ್ಲಿ ಜಾಗತಿಕ, ನಿಯಮಾಧಾರಿತ, ಮುಕ್ತ, ತಾರತಮ್ಯ ರಹಿತ ಮತ್ತು ಸಮಾನಾವಕಾಶಗಳ ಬಹುರಾಷ್ಟ್ರೀಯ ವ್ಯಾಪಾರವನ್ನು ಉತ್ತೇಜಿಸುವುದು.

17.11 2020ರ ವೇಳೆಗೆ ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳ ಜಾಗತಿಕ ನಿರ್ಯಾತವು ಈಗಿರುವುದಕ್ಕಿಂತ ಎರಡರಷ್ಟಾಗುವುದೂ ಸೇರಿದಂತೆ ಎಲ್ಲ ಅಭಿವೃದ್ಧಿಶೀಲ ದೇಶಗಳ ನಿರ್ಯಾತವೂ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುವಂತೆ ಮಾಡುವುದು.

17.12 ಅಭಿವೃದ್ಧಿ ಹೊಂದಿದ ದೇಶಗಳು ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಂದ ತೆರಿಗೆ ರಹಿತ ಮತ್ತು ಪ್ರಮಾಣ ಮಿತಿ ರಹಿತ ನೆಲೆಯಲ್ಲಿ ಸರಕು ಮತ್ತು ಸೇವೆಗಳನ್ನು ಆಯಾತ ಮಾಡಿಕೊಳ್ಳುವ ಬಗ್ಗೆ ಕಾಲಮಿತಿಯಲ್ಲಿ ಒಪ್ಪಂದಗಳನ್ನು ಅನುಷ್ಠಾನಗೊಳಿಸುವುದು.

**ಉ. ನೀತಿಗಳು ಮತ್ತು ಸಾಂಸ್ಥಿಕ ಸುಸಂಬದ್ಧತೆ:**

17.13 ಸುಸಂಬದ್ಧಿತ ನೀತಿಗಳು ಮತ್ತು ನೀತಿಗಳ ಸೂಕ್ತ ಸಂಯೋಜನೆಯಿಂದ ಜಾಗತಿಕ ಆರ್ಥಿಕ ಸ್ಥಿರತೆಯನ್ನು

ಹೆಚ್ಚಿಸುವುದು.

17.14 ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿದ ನೀತಿಗಳ ಸುಸಂಬದ್ಧತೆಯನ್ನು ವೃದ್ಧಿಸುವುದು

17.15 ಬಡತನ ನಿರ್ಮೂಲನೆ ಮತ್ತು ಸುಸ್ಥಿರ ಅಭಿವೃದ್ಧಿ ನೀತಿಗಳನ್ನು ರಚಿಸಿ ಅನುಷ್ಠಾನಕ್ಕೆ ತರಲು ಅನುವಾಗುವಂತೆ ಪ್ರತಿ ದೇಶದ ತನ್ನತನ ಮತ್ತು ನಾಯಕತ್ವವನ್ನು ಗೌರವಿಸುವುದು

17.16 ಜ್ಞಾನ, ಪರಿಣಿತಿ, ತಂತ್ರಜ್ಞಾನ ಮತ್ತು ಹಣಕಾಸಿನ ಸಂಪನ್ಮೂಲಗಳನ್ನು ವಿನಿಮಯ ಮಾಡಿಕೊಳ್ಳುವುದು ಸಾಧ್ಯವಾಗುವಂತೆ ಜಾಗತಿಕ ಪಾಲುದಾರಿಕೆ/ಸಹಕಾರಗಳನ್ನು ಹೆಚ್ಚಿಸುವುದು.

17.17 ಸಾರ್ವಜನಿಕ, ಖಾಸಗಿ ಮತ್ತು ತೃತೀಯ ಕ್ಷೇತ್ರಗಳ ನಡುವಿನ ಪಾಲುದಾರಿಕೆಗಳನ್ನು ಹೆಚ್ಚಿಸುವುದು.

17.18 ಅಭಿವೃದ್ಧಿಶೀಲ ದೇಶಗಳಲ್ಲಿ ಸರಿಯಾದ ಮತ್ತು ಕರಾರುವಕ್ಕಾದ ಅಂಕಿ ಅಂಶಗಳನ್ನು ಸಂಗ್ರಹಿಸಿ, ದೊರಕಿಸಿಕೊಡುವುದು ಸಾಧ್ಯವಾಗುವಂತೆ ಸಾಮರ್ಥ್ಯ ವೃದ್ಧಿಮಾಡಲು ಬೇಕಾದ ನೆರವನ್ನು ಅಧಿಕಗೊಳಿಸುವುದು.

17.19 2030ರೊಳಗೆ ಎಲ್ಲ ದೇಶಗಳಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಸೂಕ್ತವಾಗಿ ಅಳೆಯಲು ಮತ್ತು ವಿಮರ್ಶಿಸಿ ಪುನರಾನುಷ್ಠಾನಗೊಳಿಸಲು ಅಗತ್ಯವಾದ ಮಾಪಕಗಳು ಮತ್ತು ಇತರೆ ಉಪಕ್ರಮಗಳನ್ನು ಸಶಕ್ತಗೊಳಿಸುವುದು.

ಎಲ್ಲರನ್ನೊಳಗೊಂಡ, ವಿವಿಧ ಪಾಲುದಾರರ ಭಾಗವಹಿಸುವಿಕೆಯಿಂದ ಮತ್ತು ತಾತ್ವಿಕ ಹಾಗೂ ಮೌಲ್ಯಯುತ ತಳಹದಿಯನ್ನು ಹೊಂದಿದ ಸಾಂಸ್ಥಿಕ ರಚನೆಗಳು ಒಗ್ಗೂಡಿ ಪರಸ್ಪರ ಸಹಕಾರದಿಂದ ಕಾರ್ಯೋನ್ಮುಖರಾದಾಗ ಮಾತ್ರ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ತಲುಪುವುದು ಸಾಧ್ಯವೆನ್ನುವುದು ಸಂಯುಕ್ತ ರಾಷ್ಟ್ರ ಸಂಸ್ಥೆಯು ನಿಗದಿಪಡಿಸಿದ ಈ ಕೊನೆಯ ಗುರಿಯ ಆಶಯವೆಂದರೆ ತಪ್ಪಾಗಲಾರದು. ಮೇಲಿನ ಎಲ್ಲ ಗುಣಗಳನ್ನು ಸಹಕಾರಿ ಸಂಸ್ಥೆಗಳಲ್ಲಿ ಕಾಣಬಹುದಾದುದರಿಂದ, ಈ ಗುರಿಯ ಸಾಧನೆಯಲ್ಲಿಯು ಸಹಕಾರಿ ಸಂಘಟನೆಗಳ ಪಾತ್ರ ಬಹು ಮುಖ್ಯ.

**ಸಹಕಾರಿ ಸಂಸ್ಥೆಗಳ ಪಾತ್ರ:**

ತಮ್ಮ ತತ್ವ ಮತ್ತು ಮೌಲ್ಯಗಳಿಗೆ ಬದ್ಧರಾಗಿ ಸಹಕಾರಿ ಸಂಸ್ಥೆಗಳು ತಮ್ಮ ಕ್ಷೇತ್ರದ ಚೌಕಟ್ಟಿನೊಳಗೆ ಮತ್ತು ಹೊರಗೆ ಹಲವು ಬಗೆಯ ಸಹಕಾರ ಮತ್ತು ಪಾಲುದಾರಿಕೆಯ ಉಪಕ್ರಮಗಳನ್ನು ಆರಂಭಿಸಿವೆ. ಒಂದು ದೇಶದೊಳಗಿನ ಸಹಕಾರ ಸಂಸ್ಥೆಗಳು ತಮ್ಮೊಳಗೆ ಮತ್ತು ತಮ್ಮ ಕ್ಷೇತ್ರದ ಹೊರಗಿನ ಸಂಸ್ಥೆಗಳೊಂದಿಗೆ ಪಾಲುದಾರಿಕೆಯ ಉಪಕ್ರಮಗಳನ್ನು ಆರಂಭಿಸಿರುವಂತೆಯೇ, ಒಂದು ದೇಶದ ಸಹಕಾರಿ ಸಂಘಟನೆಗಳು ಇನ್ನೊಂದು ದೇಶದ ಸಹಕಾರಿ ಸಂಘಟನೆಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡ ಉದಾಹರಣೆಗಳನ್ನು ಕಾಣಬಹುದಾಗಿದೆ. ಹಾಗೆಯೇ ಅಂತಾರಾಷ್ಟ್ರೀಯ ಸಂಘಟನೆಗಳು ಮತ್ತು ಸಹಕಾರಿ ಒಕ್ಕೂಟಗಳು ಪಾಲುದಾರಿಕೆಯಿಂದ ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿವೆ.

2016ರಲ್ಲಿ ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟವು ಯೂರೋಪಿಯನ್ ಯೂನಿಯನ್ ಜೊತೆಗೆ ಕೈಜೋಡಿಸಿ ಒಟ್ಟಾಗಿ ಕೆಲವು ಪ್ರಮುಖ ಉಪಕ್ರಮಗಳನ್ನು ಚಾಲ್ತಿಗೆ ತಂದಿದೆ. ಇದರಿಂದಾಗಿ ಸುಮಾರು 80 ದೇಶಗಳ 140 ಸಹಕಾರಿ ಸಂಘಟನೆಗಳು ಸುಸ್ಥಿರ ಅಭಿವೃದ್ಧಿಯ ಸಾಧನೆಯ ಮಾರ್ಗೋಪಾಯಗಳ ಕುರಿತಂತೆ ತರಬೇತಿ ಪಡೆಯುವುದು ಸಾಧ್ಯವಾಗಿದೆ. ಹೀಗೆಯೇ ಜಪಾನಿನ ಗ್ರಾಹಕ ಸಹಕಾರಿ ಯೂನಿಯನ್ ಮತ್ತು ಐಸಿಎ–ಆಫ್ರಿಕ ನಡುವಿನ ಪಾಲುದಾರಿಕೆಯಿಂದ ಆಫ್ರಿಕದ ಸಹಕಾರಿ ಸಂಘಟನೆಗಳು ಸುಸ್ಥಿರ ವ್ಯವಹಾರದ ಬಗ್ಗೆ ತಿಳಿದುಕೊಳ್ಳುವುದು, ತರಬೇತಿ ಪಡೆಯುವುದು ಸಾಧ್ಯವಾಗಿದೆ. ನಮ್ಮ ದೇಶದ ಅತ್ಯಂತ ದೊಡ್ಡ ಸಹಕಾರಿ ಸಂಸ್ಥೆಯಾದ ಇಫ್ಕೊ (IFFCO) ಏರ್‌ಟೆಲ್ ಮತ್ತು ಸ್ಟಾರ್ ಗ್ಲೋಬಲ್

ರಿಸೋರ್ಸಸ್ ಲಿಮಿಟೆಡ್‌ಗಳ ಸಹಯೋಗದೊಂದಿಗೆ ಭಾರತದ ಹನ್ನೊಂದು ಭಾಷೆಗಳಲ್ಲಿ ರೈತರಿಗೆ ಮಾರುಕಟ್ಟೆ, ಬೆಳೆಗಳ ಸ್ಥಿತಿಗತಿ, ಕೃಷಿಗೆ ಸಂಬಂಧಿಸಿದ ಇತರೆ ಮಾಹಿತಿ ಮುಂತಾದುವುಗಳನ್ನು ಮೊಬೈಲ್ ಫೋನ್ ಮೂಲಕ ದೊರಕಿಸುತ್ತ, ರೈತರ ಬದುಕಿನ ಸ್ಥಿರತೆಗೆ ಸಹಕರಿಸುತ್ತಿದೆ.

ಅಂತಾರಾಷ್ಟ್ರೀಯ ನೆಲೆಯಲ್ಲಿ ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟ, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ, ಆಹಾರ ಮತ್ತು ಕೃಷಿ ಸಂಸ್ಥೆ ಮತ್ತು ಸಂಯುಕ್ತ ರಾಷ್ಟ್ರ ಸಂಸ್ಥೆಗಳು ಪರಸ್ಪರ ಸಹಕಾರದಿಂದ ಹಲವು ಚಟುವಟಿಕೆಗಳನ್ನು ನಡೆಸುತ್ತಿವೆ. ಹೀಗೆಯೇ ಹಲವು ದೇಶಗಳಲ್ಲಿ ಸಹಕಾರಿ ಸಂಘಟನೆಗಳು ಮತ್ತು ಖಾಸಗಿ ವಲಯದ ಸಂಸ್ಥೆಗಳು ಒಟ್ಟಾಗಿ ವ್ಯವಹಾರ ಚಟುವಟಿಕೆಗಳನ್ನು ನಡೆಸುತ್ತಿರುವ ಹಾಗೂ ಸಹಕಾರಿ ಸಂಸ್ಥೆಗಳು ಮತ್ತು ಸರಕಾರಿ ಸಂಸ್ಥೆಗಳು ಒಟ್ಟಾಗಿ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಚಟುವಟಿಕೆಗಳನ್ನು ನಡೆಸುತ್ತಿರುವ ಉದಾಹರಣೆಗಳು ಕಾಣಸಿಗುತ್ತವೆ.

ಸುಸ್ಥಿರ ಅಭಿವೃದ್ಧಿಯ ಬಗೆಗಿನ ಕೊನೆಯ ಗುರಿಯ ಹಿನ್ನೆಲೆಯಲ್ಲಿ ನೋಡಿದಾಗ ಸಹಕಾರಿ ತತ್ವಗಳಾದ ಸಮುದಾಯ ಕಾಳಜಿ ಹಾಗೂ ಸಹಕಾರಿಗಳ ನಡುವೆ ಸಹಕಾರಗಳು ಮುನ್ನೆಲೆಗೆ ಬರುತ್ತವೆ. ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯನ್ನು ಒಟ್ಟಾರೆಯಾಗಿ ನೋಡಿದಾಗ ಸಮುದಾಯದ ಜೀವನದ ಸ್ಥಿರತೆ ಮತ್ತು ಭದ್ರತೆಯ ಮೇಲೆ ಒತ್ತು ನೀಡಿರುವುದು ಗಮನಕ್ಕೆ ಬರುತ್ತದೆ. ಅಭಿವೃದ್ಧಿ ಎನ್ನುವುದು ನಿರಂತರವಾಗಿ, ಸ್ಥಿರವಾಗಿ ನಡೆಯಬೇಕಾದ ಪ್ರಕ್ರಿಯೆಯಾಗಿದ್ದು, ಈ ಪ್ರಕ್ರಿಯೆಯು ನಮ್ಮ ಭೂಮಿಯ ಎಲ್ಲ ಸಂಪನ್ಮೂಲಗಳನ್ನೂ ಮಿತವಾಗಿ ಉಪಯೋಗಿಸುತ್ತ, ಮುಂದಿನ ತಲೆಮಾರಿನ ಅಗತ್ಯಗಳನ್ನೂ ಗಮನಿಸುತ್ತಾ ಸಾಗಬೇಕು. ಭೂಮಿಯ ಮೇಲೆ ವಾಸಿಸುವ ಎಲ್ಲ ಜನರಿಗೂ ಅಭಿವೃದ್ಧಿಯ ಫಲಿತಗಳು ಲಭ್ಯವಾಗಬೇಕು ಮತ್ತು ಅಭಿವೃದ್ಧಿ ಪ್ರಕ್ರಿಯೆಯು ಯಾವುದೇ ಜೀವಿಯ ಬದುಕಿಗೆ ಕಂಟಕವಾಗಬಾರದು. ಹೀಗಾದಾಗ ಮಾತ್ರ ಅಭಿವೃದ್ಧಿ ಸುಸ್ಥಿರವಾಗಿದೆ ಎನ್ನಬಹುದು.

ಸುಸ್ಥಿರ ಅಭಿವೃದ್ಧಿ ಸಾಧಿಸಬೇಕಾದರೆ ಅಭಿವೃದ್ಧಿ ಪ್ರಕ್ರಿಯೆಯನ್ನು ಮುನ್ನಡೆಸುವ ಸಂಸ್ಥೆಗಳು ತತ್ವ ಹಾಗೂ ಮೌಲ್ಯಗಳನ್ನು ಗೌರವಿಸುತ್ತ ಪರಸ್ಪರ ಸಹಕಾರದಿಂದ ಮುನ್ನಡೆಯಬೇಕು. ಇಂದಿನ ಪರಿಸ್ಥಿತಿಯಲ್ಲಿ ಸಹಕಾರಿ ಸಂಘಗಳು ಈ ಎರಡನ್ನೂ ಹೆಚ್ಚು ಹೆಚ್ಚು ಗಂಭೀರವಾಗಿ ಪರಿಗಣಿಸಬೇಕಿದೆ. ಒಂದೆಡೆಯಿಂದ ಸಹಕಾರಿ ತತ್ವ ಮತ್ತು ಮೌಲ್ಯಗಳನ್ನು ಗೌರವಿಸುತ್ತ, ಆಚರಿಸುತ್ತ, ಅವುಗಳ ಪರಿಧಿಯಲ್ಲಿಯೇ ಚಟುವಟಿಕೆಗಳನ್ನು ನಡೆಸುತ್ತ ಸಹಕಾರಿ ಅನನ್ಯತೆಯನ್ನು ಎತ್ತಿಹಿಡಿಯಬೇಕು. ಇನ್ನೊಂದೆಡೆಯಿಂದ ಹಲವು ಸಹಕಾರಿ ಸಂಘಗಳು ಒಟ್ಟಾಗಿ, ಪರಸ್ಪರ ಕೊಡುಕೊಳ್ಳುವಿಕೆಯಿಂದ ವ್ಯವಹಾರವನ್ನು ಸಂಘಟಿಸಬೇಕು. ಇಂತಹ ಪಾಲುದಾರಿಕೆಯು ಸಹಕಾರಿ ಸಂಸ್ಥೆಗಳು ಸುಸ್ಥಿರ ಅಭಿವೃದ್ಧಿಯ ಸಾಧನೆಗೆ ಪೂರಕವಾಗುವುದಕ್ಕೂ ಮತ್ತು ತಾವು ಕೂಡ ದೂರಗಾಮೀ ನೆಲೆಯಲ್ಲಿ ಸುಸ್ಥಿರತೆಯನ್ನು ಸಾಧಿಸುವುದಕ್ಕೂ ಅನುವುಮಾಡಿಕೊಡುತ್ತದೆ.

## –: ಸುಸ್ಥಿರ ಸಹಕಾರಿ ಆಂದೋಲನದೆಡೆಗೆ :–

ಸುಸ್ಥಿರ ಅಭಿವೃದ್ಧಿಯ ಸಾಧನೆಯಲ್ಲಿ ಸಹಕಾರಿ ಆಂದೋಲನದ ಪಾತ್ರ ಅತ್ಯಂತ ಅನನ್ಯವೂ, ಪ್ರಮುಖವೂ ಆದುದೆಂದು ಜಗತ್ತಿನಾದ್ಯಂತ ಎಲ್ಲ ಅಂತಾರಾಷ್ಟ್ರೀಯ ಸಂಸ್ಥೆಗಳೂ ಪರಿಗಣಿಸಿವೆ. ಸಹಕಾರಿ ಸಂಸ್ಥೆಗಳು ತಮ್ಮ ತಾತ್ವಿಕ ಚೌಕಟ್ಟಿನೊಳಗೆ ವ್ಯವಹರಿಸುವುದರಿಂದ, ಸದಸ್ಯರನ್ನು ಶೋಷಣೆಮಾಡದೆ, ಅವರ ಒಳಿತನ್ನು ತಮ್ಮ ಪ್ರಾಥಮಿಕ ಉದ್ದೇಶವಾಗಿಸಿಕೊಂಡು ವ್ಯವಹರಿಸುವುದರಿಂದ, ಅವು ಸಮುದಾಯದ ಸುಸ್ಥಿರ ಅಭಿವೃದ್ಧಿಗೆ ಪೂರಕವಾಗುತ್ತವೆ. ಅಲ್ಲದೆ, ಸಹಕಾರಿ ಸಂಘಟನೆಗಳು ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಹೀಗೆ ಮೂರು ಪ್ರಮುಖ ತಳಹದಿಯ (triple bottom line) ಸುಸ್ಥಿರತೆಯನ್ನು ಸಾಧಿಸಬಲ್ಲವು ಎಂದೂ ಭಾವಿಸಲಾಗಿದೆ. ಆದರೆ ಇದನ್ನೆಲ್ಲ ಸಾಧಿಸಬೇಕಾದರೆ ಸಹಕಾರಿ ಸಂಘಟನೆಗಳೂ ದೀರ್ಘಾವಧಿ ಸುಸ್ಥಿರತೆಯನ್ನು ಸಾಧಿಸಬೇಕಾಗಿದೆ.

ಸಹಕಾರಿ ಸಂಸ್ಥೆಗಳು ಇಂದಿನ ಮಾರುಕಟ್ಟೆ ಪರಿಸ್ಥಿತಿಯಲ್ಲಿ ಖಾಸಗಿ ವ್ಯವಹಾರ ಸಂಸ್ಥೆಗಳೊಡನೆ ಸ್ಪರ್ಧಿಸುವುದು ಕಷ್ಟದಾಯಕ ಎಂದು ಹಲವರು ಭಾವಿಸುತ್ತಾರೆ. ಸಹಕಾರಿ ಸಂಘಗಳು ಹೆಚ್ಚಾಗಿ ಸಣ್ಣ ಪ್ರಮಾಣದ ಸಂಸ್ಥೆಗಳು ಮತ್ತು ಸ್ಥಳೀಯವಾಗಿ ವ್ಯವಹಾರಗಳನ್ನು ಸಂಘಟಿಸುವುವು ಆಗಿರುವುದರಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ನಡೆಸುವ ದೈತ್ಯಾಕಾರದ ಸಂಸ್ಥೆಗಳೊಂದಿಗೆ ಸ್ಪರ್ಧಿಸಿ ಉಳಿದು ಬೆಳೆಯುವುದು ಕಷ್ಟಸಾಧ್ಯ ಎಂದು ಸ್ವತ: ಹಲವಾರು ಸಹಕಾರಿ ನಾಯಕರುಗಳೂ, ಸಂಶೋಧಕರೂ ಅಭಿಪ್ರಾಯಪಟ್ಟಿರುವುದೂ ಇದೆ. ಆದರೆ ಇಂತಹ ಅಭಿಪ್ರಾಯಗಳಿಗೆ ಸವಾಲೆನಿಸುವಂತೆ ತೊಂಭತ್ತರ ದಶಕದ ಮಧ್ಯಭಾಗದಲ್ಲಿ ಘಟಿಸಿದ ಏಶ್ಯಾ ಆರ್ಥಿಕ ಕುಸಿತ ಮತ್ತು ಕಳೆದ ದಶಕದ ಜಾಗತಿಕ ಆರ್ಥಿಕ ಹಿಂಜರಿಕೆಗಳ ಸಂದರ್ಭದಲ್ಲಿ ಖಾಸಗೀ ವ್ಯವಹಾರ ಸಂಸ್ಥೆಗಳೆಲ್ಲ ಕುಸಿತ ಕಂಡು ಹಲವಾರು ಅತಿ ದೊಡ್ಡ ಸಂಸ್ಥೆಗಳೂ ದಿವಾಳಿಯಾದ ಸಂದರ್ಭದಲ್ಲಿಯೂ ಸಹಕಾರಿ ಸಂಘಟನೆಗಳು ಇಂತಹ ಕುಸಿತವನ್ನು ಅನುಭವಿಸದೆ ಹೆಚ್ಚಿನ ಸ್ಥಿರತೆಯನ್ನು ತೋರ್ಪಡಿಸಿವೆ. ಇದನ್ನು ಕಂಡೇ ಸಂಯುಕ್ತ ರಾಷ್ಟ್ರ ಸಂಸ್ಥೆಯು 2012ನೇ ಇಸವಿಯನ್ನು ಅಂತಾರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಆಚರಿಸಿ ಅದರ ಮೂಲಕ ಸಹಕಾರಿ ಸಾಧ್ಯತೆಗಳನ್ನು ಜನರಿಗೆ, ಜಗತ್ತಿಗೆ ಹೆಚ್ಚು ಹೆಚ್ಚು ಪರಿಚಯಿಸಲು ಪ್ರಯತ್ನ ನಡೆಸಿದುದನ್ನು ನಾವು ನೆನಪಿಸಿಕೊಳ್ಳಬೇಕು.

ಇತ್ತೀಚೆಗೆ ಪ್ರಕಟವಾದ ಸುಸ್ಥಿರ ವ್ಯವಹಾರ ಮಾದರಿಗಳ ಬಗೆಗಿನ ಜಾಗತಿಕ ವರದಿಯ ಪ್ರಕಾರ ಸಹಕಾರಿ ಮಾದರಿಯು ಅತ್ಯಂತ ಸುಸ್ಥಿರ ಮಾದರಿಗಳಲ್ಲೊಂದಾಗಿದ್ದು ಜನರ ಒಳಿತಿನ ಮೂಲಕ ತಾನೂ ಉಳಿದು ಬೆಳೆಯುವ ಸಂಸ್ಥೆಯಾಗಿದೆ. **"**ಹೆಚ್ಚಿನ ವ್ಯವಹಾರ ಸಂಸ್ಥೆಗಳು ಕಚ್ಚಾ ಸಾಮಗ್ರಿಗಳು ಮತ್ತು ಬೇಡಿಕೆ ಈ ಎರಡೂ ಅಪರಿಮಿತ ಸರಬಾರಜಿನ ಸಾಧ್ಯತೆಗಳನ್ನು ಹೊಂದಿವೆ ಎಂಬ ತಪ್ಪು ನಂಬಿಕೆಯಿಂದ ವ್ಯವಹಾರ ಸಂಘಟಿಸುತ್ತವೆ ಮತ್ತು ಈ ಕಾರಣಕ್ಕಾಗಿಯೇ ಅವು ಪರಿಸರವನ್ನಾಗಲೀ, ಬಳಕೆದಾರರನ್ನಾಗಲೀ ಅಗತ್ಯವಾದ ಗೌರವದಿಂದ ನೋಡುವುದಿಲ್ಲ. ಹಾಗಾಗಿಯೇ ಇಂತಹ ವ್ಯವಹಾರ ಸಂಸ್ಥೆಗಳು

ಕಾಲದಿಂದ ಕಾಲಕ್ಕೆ ಕುಸಿತವನ್ನು ಅನುಭವಿಸುತ್ತವೆ. ಆದರೆ ಒಂದು ನಿರ್ದಿಷ್ಟ ಭೌಗೋಳಿಕ ಮತ್ತು ಗ್ರಾಹಕ ಸಮುದಾಯದ ಪರಿಧಿಯೊಳಗೆ ವ್ಯವಹಾರ ನಡೆಸುವ ವ್ಯವಹಾರ ಸಂಸ್ಥೆಗಳು ಹೆಚ್ಚು ಜವಾಬ್ದಾರಿಯುತ ಮತ್ತು ಸುಸ್ಥಿರವಾದ ವ್ಯವಹಾರವನ್ನು ಸಂಘಟಿಸುವುದು ಸಾಧ್ಯ. ಸಹಕಾರಿ ಸಂಘಟನೆಗಳು ಈ ಮಾದರಿಗೆ ಉತ್ತಮ ಉದಾಹರಣೆ" ಎನ್ನುತ್ತದೆ ಈ ವರದಿ.

ಸುಸ್ಥಿರ ಅಭಿವೃದ್ಧಿಯು ಜಗತ್ತಿನ ಪ್ರಮುಖ ಆದ್ಯತೆಯ ವಿಷಯವಾಗಿದೆ. ಸಂಪನ್ಮೂಲಗಳ ಮಿತವಾದ ಬಳಕೆ, ಪರಿಸರ ರಕ್ಷಣೆ, ಸಮಾಜದ ಎಲ್ಲ ಸ್ಥರದ ಜನರಿಗೂ ತಮ್ಮ ಜೀವನದ ಅಗತ್ಯಗಳು ದೊರೆಯುವಂತೆ ಮಾಡುವುದು ಇವು ಇನ್ನು ಮುಂದಿನ ಆರ್ಥಿಕ ವ್ಯವಸ್ಥೆಯ ಪ್ರಮುಖ ಮಾನದಂಡವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಕಾಳಜಿಗಳುಳ್ಳ ವ್ಯವಹಾರ ಮಾದರಿಗಳು ಸಹಜವಾಗಿಯೇ ಮುಖ್ಯವಾಗುತ್ತವೆ. ಹಾಗಾಗಿ ಸಹಕಾರಿ ಮಾದರಿಗಳಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತದೆ. ಆದರೆ ಸಹಕಾರಿ ಸಂಘಟನೆಗಳು ಮಾರುಕಟ್ಟೆಯ ಬೇಡಿಕೆಯ ಮೋಹಕ್ಕೆ ಒಳಗಾಗದೆ, ತನ್ನೊಳಗಿನ ಬೇಡಿಕೆಯಕಡೆಗೆ, ಅಂದರೆ ತಮ್ಮ ಸದಸ್ಯರ ಅಗತ್ಯ ಮತ್ತು ಬೇಡಿಕೆಗಳ ಕಡೆಗೆ ಗಮನ ಹರಿಸಬೇಕಿದೆ. ಸದಸ್ಯರ ಏಳಿಗೆಯ ಮೂಲಕ ಸಂಸ್ಥೆಯ ಸುಸ್ಥಿರತೆಯನ್ನು ಸಾಧಿಸುವ ಮಾರ್ಗ ವ್ಯವಹಾರದ ಸುಸ್ಥಿರತೆಯನ್ನು ಸಾಧಿಸುವ ನಿಟ್ಟಿನಲ್ಲಿ ಉತ್ತಮ ಆಯ್ಕೆಯಾಗುತ್ತದೆ.

ತಾವು ಸಶಕ್ತರಾಗಿದ್ದು ದೂರಗಾಮೀ ನೆಲೆಯಲ್ಲಿ ಸುಸ್ಥಿರ ವ್ಯವಹಾರ ಮತ್ತು ಸುಸ್ಥಿರ ಸಾಂಸ್ಥಿಕ ಸಂರಚನೆಯನ್ನು ಹೊಂದುವ ಕಡೆಗೆ ಸಹಕಾರಿ ಸಂಘಗಳು ನಿರಂತರ ಪ್ರಯತ್ನಶೀಲರಾಗಬೇಕು. ಸಹಕಾರಿ ತತ್ವಗಳು ಮತ್ತು ಮೌಲ್ಯಗಳನ್ನು ವ್ಯವಹಾರ ಸಂಘಟನೆಯ ಪ್ರಮುಖ ಮಾರ್ಗಸೂಚಿಗಳಾಗಿ ಪರಿಗಣಿಸಬೇಕು. ಸದಸ್ಯ ಕೇಂದ್ರಿತ ಚಟುವಟಿಕೆಗಳು (ಮೆಂಬರ್ ಸೆಂಟ್ರಾಲಿಟಿ), ಸ್ಥಳೀಯ ಅಗತ್ಯಗಳ ಪೂರೈಕೆಗೆ ಆದ್ಯತೆ (ಲೋಕಲ್ ಫೋಕಸ್) ಸದಸ್ಯರ ಭಾಗವಹಿಸುವಿಕೆಗೆ ಅವಕಾಶಗಳು (ಪಾರ್ಟಿಸಿಪೇಶನ್ – ಡೆಮಾಕ್ರಸಿ), ಸಮುದಾಯ ಬದ್ಧತೆ (ಕನ್ಸರ್ನ್ ಫಾರ್ ಕಮ್ಯುನಿಟಿ) ಮತ್ತು ಸಹಕಾರಿಗಳ ನಡುವೆ ಸಹಕಾರ (ಕೋಆಪರೇಶನ್ ಅಮಾಂಗ್ ಕೋಆಪರೇಟಿವ್ಸ್) ಇವುಗಳನ್ನು ನೀತಿಯಾಗಿಯೂ ಮತ್ತು ವ್ಯವಹಾರ ಅಭಿವೃದ್ಧಿಯ ಕಾರ್ಯತಂತ್ರವಾಗಿಯೂ ಉಪಯೋಗಿಸುವುದರಿಂದ ನಿರಂತರ ಸ್ಥಿರತೆ ಸಾಧಿಸುವುದು ಮತ್ತು ಸಹಕಾರಿ ಅನನ್ಯತೆಯನ್ನು (ಕೋಆಪರೇಟಿವ್ ಐಡೆಂಟಿಟಿ) ಗಟ್ಟಿಗೊಳಿಸುವುದು ಸಾಧ್ಯವಾಗುತ್ತದೆ. ಇದರಿಂದಾಗಿ ಸಹಕಾರಿ ಮಾದರಿಯ ಸುಸ್ಥಿರತೆಯೂ ಫಲಿಸುತ್ತದೆ. ಸಹಕಾರಿ ಸುಸ್ಥಿರತೆಯು ಸುಸ್ಥಿರ ಅಭಿವೃದ್ಧಿಗೆ ಊರುಗೋಲಾಗುತ್ತದೆ. ಹೀಗಾಗಲೆಂದು ಆಶಿಸೋಣ.

## –: ಆಕರಗಳು :–


1. Balasubramanian Iyer (2020) Cooperatives and the sustainable development goals in Morris Altman et al (2020) Waking the Asian Pacific Cooperative Potential, Elsevier, USA, pp 50-70
2. ILO (2018-19) Cooperative Contributions to SDGs, Committee for Promotion and Advancement of Cooperatives – COPAC, (Individual write-ups on each of the 17 goals) International Labour Organization, Geneva
3. ILO (2014) Cooperatives and the Sustainable Development Goals: A Contribution to the Post-2015 Development Debate, International Labour Organization, Geneva
4. Saikaew Thipakorn (2018) Cooperation of Cooperatives: Partnership towards SDGs – In Ronald Holzhacker and Dafri Agussalim (2018) Sustainable Development Goals in South East Asia and ASEAN, Brill, pp 382-402
5. Esther Gicheru (2017) The Role of the co-operative enterprise model in implementing the Sustainable Development Goals (SDGs) in Least Developed Countries (LDCs), Cooperative University of Kenya, Nairobi
6. Markus Kaltenborn, Markus Krajewski and Heike Kuhn (2020) Sustainable Development Goals and Human Rights, Springer
7. Francisca Castilla-Polo and M. Isabel Sánchez-Hernández (2020) Cooperatives and Sustainable Development: A Multilevel Approach Based on Intangible Assets, Sustainability, file:///C:/Users/Yashavantha/Downloads/sustainability-12-04099.pdf
8. Jürgen Schwettmann (2014) The Role of Cooperatives in Achieving the Sustainable Development Goals - the economic dimension, ILO, Geneva
9. Simel Esim (2017) Cooperatives and Sustainable Development Goals, Presentation made at the ILO seminar in Tokyo held on 7th Sept. 2017
10. ILO (2014) Cooperative movement engagement in sustainable development and the post-2015 process: Survey findings,

# –: ಲೇಖಕರ ಪರಿಚಯ :–



ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿರುವ ಡಾ. ಯಶವಂತ ಡೋಂಗ್ರೆಯವರು ಕಳೆದ ಮೂರು ದಶಕಗಳಿಂದ ಸಹಕಾರಿ ಕ್ಷೇತ್ರದ ಕುರಿತಂತೆ ಸಂಶೋಧನೆ, ಬೋಧನೆ ಮತ್ತು ತರಬೇತಿ ಕಾರ್ಯಗಳಲ್ಲಿ ತಮ್ಮನ್ನೂ ತೊಡಗಿಸಿಕೊಂಡಿರುವರು. ಹಾಸನದಲ್ಲಿರು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ, ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಜವಾಬ್ದಾರಿ ನಿರ್ವಹಿಸಿರುವ ಡೋಂಗ್ರೆಯವರು ಏಶ್ಯಾ ಫೆಸಿಫಿಕ್ ವಲಯದ ಹಲವಾರು ದೇಶಗಳಲ್ಲಿ ಸಂಶೋಧನೆ, ಬೋಧನೆ ಮತ್ತು ಪ್ರಬಂಧ ಮಂಡನೆಗಳನ್ನು ಮಾಡಿದ್ದಾರೆ. ಜಪಾನಿನ ರಿಟ್ಸುಮೇಕನ್ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಸಂಶೋದನೆ ನಡೆಸಿರುವ (1992, 2000) ಇವರು, ಗ್ರಾಜುಯೇಟ್ ಯುನಿವರ್ಸಿಟಿ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಓಸಕ, ಜಪಾನ್ ಇಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ (2008–09) ಮತ್ತು ಟೋಕ್ಯೋ ವಿಶ್ವವಿದ್ಯಾನಿಲಯದಲ್ಲಿ ಜಪಾನ್ ಫೌಂಡೇಶನ್ ಫೆಲೋ ಆಗಿ (2013–14) ಕೆಲಸ ನಿರ್ವಹಿಸಿರುತ್ತಾರೆ.

ಎಂಟು ಸಂಪಾದಿತ ಕೃತಿಗಳು ಮತ್ತು ನೂರಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿರುವ ಯಶವಂತ ಡೋಂಗ್ರೆಯವರು ಸಹಕಾರಿ ಕ್ಷೇತ್ರವನ್ನೂ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಕನ್ನಡ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಭಾರತ ಸರಕಾರದ ಕೃಷಿ ಮಂತ್ರಾಲಯವು ರಚಿಸಿದ ಸಹಕಾರಿ ಕ್ಷೇತ್ರದ ಬಗೆಗಿನ ಉನ್ನತ ಮಟ್ಟದ ಸಮಿತಿಗೆ ಸಲಹೆಗಾರರಾಗಿ, ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟದ ಏಶ್ಯಾ ಫೆಸಿಫಿಕ್ ವಲಯದ ಸಂಶೋಧನಾ ಸಮಿತಿಯ ಸದಸ್ಯರಾಗಿ ಮತ್ತು ಶೈಕ್ಷಣಿಕ ಸಂಸ್ಥೆಗಳ ಸಹಕಾರಿ ಸಂಘಟನೆಗಳ ಸಮಿತಿಯ ಸಹ ಕಾರ್ಯದರ್ಶಿಯಾಗಿ ಹಲವು ಉಪಕ್ರಮಗಳನ್ನು ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಇವರು ಅಂತಾರಾಷ್ಟ್ರೀಯ ನೆಲೆಯಲ್ಲಿ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆ ಮತ್ತು ಅಂತಾರಾಷ್ಟ್ರೀಯ ಆಗುಹೋಗುಗಳ ಬಗೆಗೆ ಆಳವಾದ ಅಧ್ಯಯನ ಮಾಡಿದವರಾಗಿದ್ದಾರೆ.

# ಋಗ್ವೇದದಲ್ಲಿ ಸಹಕಾರದ ಐಕ್ಯ ಮೂಲಮಂತ್ರ

ಓಂ ಸಂಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಮ್ ।
ದೇವಾ ಭಾಗಂ ಯಥಾ ಪೂರ್ವೇ ಸಂ ಜಾನಾನಾ ಉಪಾಸತೇ॥
ಒಂದಾಗಿ ನಡೆಯಿರಿ ಒಮ್ಮತದಿಂದ ಮಾತನಾಡಿರಿ
ನಿಮ್ಮ ಅಂತರಂಗದ ಭಾವನೆಗಳು ಒಂದೇ ರೀತಿ ಇರಲಿ.
ಹಿಂದೆ ದೇವತೆಗಳು ಪರಸ್ಪರ ಸಹಕಾರದಿಂದ ತಮ್ಮ ತಮ್ಮ
ಪಾಲನ್ನು ಪಡೆದುಕೊಂಡಂತೆ ನೀವೂ ಒಟ್ಟಿಗೆ ಸಾಧನೆ
ಮಾಡಿ ನಿಮ್ಮ ಅಭೀಷ್ಟವನ್ನು ಈಡೇರಿಸಿಕೊಳ್ಳಿ.

ಸಮಾನೋ ಮಂತ್ರಃ ಸಮಿತಿಃ ಸಮಾನೀ
ಸಮಾನಂ ಮನಃ ಸಹ ಚಿತ್ತಮೇಷಾಮ್।
ಸಮಾನಂ ಮಂತ್ರಮಭಿ ಮಂತ್ರಯೇ ವಃ
ಸಮಾನೇನ ವೋ ಹವಿಷಾ ಜುಹೋಮಿ॥
ನಿಮ್ಮ ಕಾರ್ಯವಿಚಾರ ಒಂದೇ ಆಗಿರಲಿ. ಅಂದರೆ ಎಲ್ಲರ
ನಿರ್ಣಯ ಒಮ್ಮುಖವಾಗಿರಲಿ. ಸೇರುವ ಸಭೆಯೂ ಒಂದೇ
ಆಗಿರಲಿ. ಎಲ್ಲರ ಚಿತ್ತ ಮನಸ್ಸುಗಳು ಒಂದಾಗಿರಲಿ. ಇಂತಹ
ಐಕ್ಯಕ್ಕಾಗಿಯೇ ಪ್ರಯತ್ನಿಸೋಣ.

ಸಮಾನೀ ವ ಆಕೂತಿ ಸಮಾನಾ ಹೃದಯಾನಿ ವಃ ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹತಿ ॥
ಸಂಕಲ್ಪಗಳು ಸಮಾನವಾಗಿರಲಿ. ಹೃದಯಗಳೂ ಒಂದಾಗಲಿ,
ಮನಸ್ಸುಗಳು ಒಂದಾಗಲಿ. ಅಂತಹ ಪರಸ್ಪರ ಸಹಕಾರದಿಂದ
ಕಾರ್ಯವು ಸುಗಮವಾಗಲಿ.
ಓಂ ಶಾಂತಿಃ ಶಾಂತಿಃ ಶಾಂತಿಃ




**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055

ದೂ : 080-23378375-80, ವೆಬ್ ತಾಣ : www.Souharda.coop